ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 4 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 18 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಳೆ 'ನಾದ ನೃತ್ಯ' ಭರತನಾಟ್ಯ ಪ್ರದರ್ಶನ



ಮೈಸೂರು, ಮೇ 3– ಮೈಸೂರಿನ ನೃತ್ಯಗಿರಿ ಪ್ರದರ್ಶಕ ಕಲೆಗಳು ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಮೇ 5 ರಂದು ಸಂಜೆ 5.45ಕ್ಕೆ ಪೂಜಾ ಸುಗಮ್ ಶಿಷ್ಯರು ಮತ್ತು ಗುರು ವಿದ್ವಾನ್ ಆರ್. ಕಣ್ಣನ್ ಶಿಷ್ಯರಾದ ವಿದ್ವಾನ್ ಆರ್. ಪವನ್ ಕುಮಾರ್ ಅವರಿಂದ ನೃತ್ಯಗಿರಿ, ಪ್ರೀತಿ ಬಡಾವಣೆಯಲ್ಲಿ ನಾದ ನೃತ್ಯ ಭರತನಾಟ್ಯ ಪ್ರದರ್ಶನವನ್ನು ಏರ್ಪಡಿಸಲಾಗಿದೆ ಎಂದು ನೃತ್ಯಗಿರಿ ಪ್ರದರ್ಶನ ಕಲೆಗಳು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರು ಮತ್ತು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾದ ಡಾ. ಕೃಪಾ ಫಡ್ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಣಿ ಪಕ್ಷಿಗಳಿಗೆ ದಾಹ ನೀಗಿಸಲು ನೀರಿನ ತೊಟ್ಟಿ ಅಳವಡಿಕೆ 'ಮೂಕ ಸ್ಪಂದನ'

ಮೈಸೂರು, ಮೇ 3– ಮೈಸೂರಿನ ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೇಸಿಗೆ ತಾಪಮಾನ ಹೆಚ್ಚಳದ ಹಿನ್ನೆಲೆಯಲ್ಲಿ ಪ್ರಾಣಿ–ಪಕ್ಷಿಗಳಿಗೆ ನೀರಿನ ತೊಟ್ಟಿ ಅಳವಡಿಸಿ ಮೂಕ ಸ್ಪಂದನ ಕಾರ್ಯಕ್ರಮವನ್ನು ಚಾಮುಂಡಿ ಬೆಟ್ಟದ ತಪಲಿನಲ್ಲಿ ಮೇ 4ರಂದು ಬೆಳಗ್ಗೆ 9:30 ಗಂಟೆಗೆ ಆಯೋಜಿಸಲಾಗಿದೆ.



ಮುಖ್ಯ ಅತಿಥಿಗಳಾಗಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಸೈನಿಕ ಅಕಾಡೆಮಿ ಮೈಸೂರಿನ ಸಂಸ್ಥಾಪಕ ಹಾಗೂ ಮಾಜಿ ಕಮಾಂಡೋ ಸಿ.ಎಂ.ಶ್ರೀಧರ್, ಮಾಜಿ ಸೈನಿಕರು ಮತ್ತು ಪ್ರಸ್ತುತ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಿ ಮಹೇಶ್, ಪ್ರಜ್ಞಾವಂತ ನಾಗರಿಕರ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಸಮಾಜ ಸೇವಕರಾದ ಸವಿತಾ ಘಾಟ್ಕೆ ಇನ್ನಿತರರು ಭಾಗವಹಿಸಲಿದ್ದಾರೆ.

ಆಸ್ತಿ ತೆರಿಗೆ ರಿಯಾಯಿತಿ ಒಂದು ತಿಂಗಳು ವಿಸ್ತರಿಸುವಂತೆ ಒತ್ತಾಯ

ಮೈಸೂರು, ಮೇ.3(ಜಿಎ)–ಮೈಸೂರು ಮಹಾನಗರ ಪಾಲಿಕೆ ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ ನೀಡುವ ಗಡುವು ಏ.30ಕ್ಕೆ ಕೊನೆಗೊಂಡಿದ್ದು, ಲೋಕಸಭೆ ಚುನಾವಣೆ, ತಾಂತ್ರಿಕ ದೋಷಗಳು ಮತ್ತು ಅಧಿಕಾರಿಗಳ ಗೈರು ಹಾಜರಿಯಿಂದಾಗಿ ಅನೇಕ ಜನರು ಈ ಸೌಲಭ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗದ ಕಾರಣ ರಿಯಾಯಿತಿ ಅವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸಬೇಕೆಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮೈಸೂರು ನಗರ ಪಾಲಿಕೆಯನ್ನು ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿಯು ಏ.1ರಿಂದ 30ರವರೆಗೆ ಜಾರಿಯಲ್ಲಿತ್ತು. ಆದರೆ ಈ ವರ್ಷ ಆನ್‌ಲೈನ್‌ನಲ್ಲಿ ಆಸ್ತಿ ತೆರಿಗೆ ಪಾವತಿಯಲ್ಲಿ ಹಲವು ಲೋಪ ದೋಷಗಳು ಕಂಡುಬಂದಿದ್ದು, ಹಲವು ಸಾರ್ವಜನಿಕ ರಜಾ ದಿನಗಳಾಗಿವೆ. ಆದ್ದರಿಂದ, ಎಂಸಿಸಿ ತೆರಿಗೆ ರಿಯಾಯಿತಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸಬೇಕು ಎಂದು ಅವರು ಒತ್ತಾಯಿಸಿದರು.

ಪಾಲಿಕೆ ತೆರಿಗೆ ಸಂಗ್ರಹದ ಗುರಿ 220 ಕೋಟಿ ಆದರೆ, ಈವರೆಗೂ ಕೇವಲ 90 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಆದರೆ, ಕಳೆದ ಬಾರಿ ಈ ಸಮಯಕ್ಕೆ 190 ಕೋಟಿ ರೂ. ಸಂಗ್ರಹಿಸಿದ್ದರು. ಅವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸುವುದರಿಂದ ಹೆಚ್ಚಿನ ತೆರಿಗೆ ಸಂಗ್ರಹಿಸಲು ಸಾಧ್ಯವಾಗುತ್ತದೆ ವಿವಿಧ ಕಾರಣಗಳಿಂದಾಗಿ ಸೌಲಭ್ಯವನ್ನು ಪಡೆಯಲು ಸಾಧ್ಯವಾಗದ ದೊಡ್ಡ ಪ್ರಮಾಣದ ಆಸ್ತಿ ಮಾಲೀಕರಿಗೆ ಸಹ ಉಪಯುಕ್ತವಾಗುಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಜೆ.ಪಿ. ನಗರ ಯೋಗ ಟ್ರಸ್ಟ್ ಸದಸ್ಯ ವೆಂಕಟೇಶ್, ಜೆ.ಪಿ.ನಗರ ಟೆನಿಸ್ ಕ್ಲಬ್ ಸದಸ್ಯ ವಾಸು ಉಪಸ್ಥಿತರಿದ್ದರು.

ನಾಗರಿಕ ಹಿತರಕ್ಷಣಾ ವೇದಿಕೆಗೆ ಪದಾಧಿಕಾರಿಗಳ ನೇಮಕ

ಮೈಸೂರು, ಮೇ.3(ಜಿಎ)–ಕನ್ನಡಪರ ಹೋರಾಟ ತೀವ್ರಗೊಳಿಸುವ ನಿಟ್ಟಿನಲ್ಲಿ ಕನ್ನಡಪರ ಸಂಘಟನೆಯು ನಾಗರಿಕ ಹಿತರಕ್ಷಣಾ ವೇದಿಕೆಗೆ ನೂತನವಾಗಿ ಮೂವರು ಪದಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ನೇಮಕಾತಿ ಪತ್ರಗಳನ್ನು ವಿತರಿಸಿದ ಅಧ್ಯಕ್ಷ ಮಿಲ್ಕ್ ಮಂಜು ಮಾತನಾಡಿ, ವೇದಿಕೆಯು ಕಳೆದ 35 ವರ್ಷಗಳಿಂದ ನಾಗರೀಕರ ಸಂಕಷ್ಟ ಹೋಗಲಾಡಿಸಲು, ನಾಡು, ನುಡಿ ಜಲಕ್ಕಾಗಿ ಹೋರಾಟ ಮಾಡುತ್ತಿದೆ. ಕೊರೊನಾ ವೇಳೆ ಸಂತ್ರಸ್ತರಿಗೆ ಆಹಾರದ ಕಿಟ್ ಒದಗಿಸಿದೆ. ಈ ರೀತಿಯ ಚಟುವಟಿಕೆ ಹೆಚ್ಚಿಸಲು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ಅದರಂತೆ ಗೌರವಾಧ್ಯಕ್ಷರಾಗಿ ಡಾ.ಶ್ರೀಕಾಂತ್ ಸುಂದರೇಶ್, ಕಾರ್ಯಾಧ್ಯಕ್ಷರಾಗಿ ಎಂ.ರಾಕೇಶ್‌ಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಮೋಹನ್ ಕುಮಾರ್, ಕಾನೂನು ಸಲಹೆಗಾರರಾಗಿ ವಕೀಲ ಶಶಿಕಿರಣ್ ನೇಮಕಗೊಂಡಿದ್ದಾರೆ ಎಂದರು. ಈ ವೇಳೆ ಡಾ.ಶ್ರೀಕಾಂತ್ ಸುಂದರೇಶ್, ಶಶಿಕಿರಣ್, ಪಿ.ಗಿರಿಧರ್, ಹನುಮಂತೇಗೌಡ, ರಾಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಹೆಚ್ಚಿದ ತಾಪಮಾನ: ಆರೋಗ್ಯದೆಡೆ ಗಮನಹರಿಸಿ

ಮೈಸೂರು, ಮೇ 3– ಪ್ರಸ್ತುತ ಬೇಸಿಗೆ ದಿನಗಳಲ್ಲಿ ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚಾಗುವ ಹಿನ್ನೆಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ನೀಡಿದ ಮುಂಜಾಗ್ರತಾ ಕ್ರಮಗಳನ್ನು ಎಲ್ಲ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವಂತೆ ಬಿಜೆಪಿ ವೈದ್ಯಕೀಯ ಪ್ರಕೋಷ್ಟ ಸಂಚಾಲಕರು ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕರಾದ ಗಿರೀಶ್ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಸಾರ್ವಜನಿಕರು ರೇಡಿಯೋ, ಟಿವಿ, ದಿನ ಪತ್ರಿಕೆಗಳಲ್ಲಿ ಬರುವ ಅತಿಯಾದ ಬಿಸಿಲಿನ ಕುರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆ ಇಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯಬೇಕು. ತೆಳು, ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಿ, ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಇಲ್ಲವೆ ಚಪ್ಪಲಿಗಳನ್ನು ಬಳಸಬೇಕು. ಬಸ್ಸಿನಲ್ಲಿ ದೂರದ ಪ್ರಯಾಣವನ್ನು ರಾತ್ರಿ ವೇಳೆ ಮಾಡುವುದು ಉತ್ತಮ. ಒಂದು ವೇಳೆ ಪ್ರಯಾಣ ಮಾಡುವ ಸಂದರ್ಭ ಬಂದರೆ, ನಿಮ್ಮೊಂದಿಗೆ ಸಾಕಷ್ಟು ನೀರನ್ನು ತೆಗೆದುಕೊಂಡು ಹೋಗುವುದು ಉತ್ತಮ. ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿಯನ್ನು ಬಳಸಿ.ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈ ಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಸಹ ಬಳಸಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.


ನಿಧನ




ಕರೇನ್ ಕವಿತಾ

ಮೈಸೂರು, ಮೇ 3–ಬೆಂಗಳೂರಿನ ನಿವಾಸಿ ಆಲಿಸ್ಟರ್ ಅವರ ಪತ್ನಿ ಕರೇನ್ ಕವಿತಾ (39) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ತಂದೆ ಸತ್ಯಕುಮಾರ್, ತಾಯಿ ಸೆಸಿಲಿಯಾ, ಸಹೋದರಿ ಮರಿಯಾ, ಪತಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡು ರಸ್ತೆಯಲ್ಲಿರುವ ಬೆನ್ಸನ್ ಸಿಮೆಟ್ರಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಲ್ (ನಿ) ಸಿ.ಅನಿಲ್ ಕುಮಾರ್‌ನಾಯರ್



ಮೈಸೂರಿನ ವಿ.ವಿ. ಮೊಹಲ್ಲಾ ನಿವಾಸಿ ಕರ್ನಲ್ (ನಿ) ಸಿ.ಅನಿಲ್ ಕುಮಾರ್ ನಾಯರ್ (64) ಗುರುವಾರ ನಿಧನರಾದರು. ಮೃತರು ಪತ್ನಿ ಬೃಂದಾ ನಾಯರ್, ಪುತ್ರರಾದ ರಾಹುಲ್ ಮತ್ತು ಕರಣ್, ಪುತ್ರಿ ಅಮೃತಾ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸುಂದ್ರಾಂಭ ರಾಮಶೇಷು

ಮೈಸೂರು ಕುವೆಂಪುನಗರ ನಿವಾಸಿ, ದಿವಂಗತ ಪಟೇಲ್ ರಾಮಶೇಷು ಅವರ ಪತ್ನಿ ಸುಂದ್ರಾಂಭ ರಾಮಶೇಷು ಏ.30ರಂದು ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು. ಇವರು ಮೂಲತಃ ಗುಂಡ್ಲುಪೇಟೆ ತಾಲೂಕು ಬರಗಿ ಗ್ರಾಮದವರು. ಮೃತರು ಸೋದರಳಿಯಂದಿರಾದ ಸತೀಶ್ ಬರಗಿ, ಸುರೇಶ್ ಬರಗಿ, ನಾಗೇಶ್ ಬರಗಿ ಸೇರಿದಂತೆ ಅಪಾರ ಬಂಧುಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಅಂದೇ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೆಪ್ಟೆಂಬರ್ ಕಡೇ ವಾರ ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವ ಸಮಾರಂಭ

89 ಕೋಟಿ ರೂ. ವೆಚ್ಚದ ವಿವಿಧ 14 ಅಭಿವೃದ್ಧಿ ಕಾಮಗಾರಿ ಜುಲೈ ಅಂತ್ಯಕ್ಕೆ ಪೂರ್ಣ





ಮೈಸೂರು, ಮೇ 3 (ಆರ್‌ಕೆ)– 2024ರ ಸೆಪ್ಟೆಂಬರ್ ಕಡೇ ವಾರ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ)ಯ ಶತಮಾನೋತ್ಸವ ಸಮಾರಂಭ ನಡೆಯಲಿದೆ.

100 ವರ್ಷ ಪೂರೈಸಿದ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜಿನ ಶತಮಾನೋತ್ಸವ ಸಮಾರಂಭವನ್ನು 2024ರ ಸೆಪ್ಟೆಂಬರ್ ತಿಂಗಳ 21ರಿಂದ 28ರೊಳಗೆ 3 ದಿನ ಕಾರ್ಯಕ್ರಮ ಆಯೋಜಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ ತಿಳಿಸಿದ್ದಾರೆ.

ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಂಸ್ಥೆಯ ಪಾರಂಪರಿಕ ಕಟ್ಟಡ, ಪುರುಷರ ವಿದ್ಯಾರ್ಥಿ ನಿಲಯ, ಅಧೀನ ಆಸ್ಪತ್ರೆಗಳಾದ ಕೆ.ಆರ್., ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆಯ ಶಿಥಿಲಗೊಂಡಿದ್ದ ಪಾರಂಪರಿಕ ಕಟ್ಟಡಗಳ ಪುನರುಜ್ಜೀವನಗೊಳಿಸುವ ಕಾಮಗಾರಿ ಪ್ರಗತಿಯಲ್ಲಿದೆ. ರಾಜ್ಯ ಸರ್ಕಾರವು ಶತಮಾನೋತ್ಸವದ ಹಿನ್ನೆಲೆಯಲ್ಲಿ ಸಂಸ್ಥೆ ಹಾಗೂ ಅಧೀನ ಆಸ್ಪತ್ರೆಗಳ ಸುಧಾರಣೆಗಾಗಿ 89 ಕೋಟಿ ರೂ. ಅನುದಾನ ನೀಡಿ ಬೆಂಗಳೂರಿನ ವೈದ್ಯಕೀಯ ಶಿಕ್ಷಣ ಇಲಾಖೆ ಕೇಂದ್ರ ಕಚೇರಿಯಿಂದ ಕೇಂದ್ರೀಕೃತ (ಸೆಂಟ್ರಲೈಸ್ಡ್) ಟೆಂಡರ್ ಕರೆದು ಅರ್ಹ ಗುತ್ತಿಗೆದಾರರಿಗೆ ಕಾಮಗಾರಿ ಕೈಗೊಳ್ಳಲು ಕಾರ್ಯಾದೇಶ (ವರ್ಕ್ ಆರ್ಡರ್) ನೀಡಿದೆ. ಅದರಂತೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪುರುಷರ ವಿದ್ಯಾರ್ಥಿ ನಿಲಯ (ಬಾಯ್ಸ್ ಹಾಸ್ಟೆಲ್), ಕೆ.ಆರ್. ಆಸ್ಪತ್ರೆ ಹೊರ ರೋಗಿ ವಿಭಾಗ, ಕಣ್ಣಿನ ಆಸ್ಪತ್ರೆ, ತುರ್ತು ಚಿಕಿತ್ಸಾ ಘಟಕ, ಮೆಡಿಕಲ್ ಸೂಪರಿಂಟೆಂಡೆಂಟ್, ಆರ್‌ಎಂಓ ಕಚೇರಿ ಕಟ್ಟಡ, ಸರ್ಜಿಕಲ್ ಬ್ಲಾಕ್ (ಸ್ಟೋನ್ ಬಿಲ್ಡಿಂಗ್), ಚೆಲುವಾಂಬ ಆಸ್ಪತ್ರೆಯ ಪೀಡಿಯಾಟ್ರಿಕ್ ಓಪಿಡಿ ಬ್ಲಾಕ್, ಓಬಿಜಿ ಬ್ಲಾಕ್, ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಸೇರಿದಂತೆ ಒಟ್ಟು 14 ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಈಗಾಗಲೇ ಕಣ್ಣಿನ ಆಸ್ಪತ್ರೆ ಕಟ್ಟಡ, ಕೆ.ಆರ್.ಆಸ್ಪತ್ರೆ, ಓಪಿಡಿ ಬ್ಲಾಕ್, ಪೀಡಿಯಾಟ್ರಿಕ್ ಬ್ಲಾಕ್, ಪುರುಷರ ಹಾಸ್ಟೆಲ್ ಕಟ್ಟಡಗಳ ದುರಸ್ತಿ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕೆಲಸ ಪ್ರಗತಿಯಲ್ಲಿದೆ. ಜುಲೈ ಕಡೇ ವಾರ ಎಲ್ಲಾ 14 ಬಗೆಯ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ತಾಕೀತು ಮಾಡಿರುವುದರಿಂದ ಕ್ಷಿಪ್ರಗತಿಯಲ್ಲಿ ಕಾಮಗಾರಿ ನಡೆಸಲಾಗುತ್ತಿದೆ.

ಕಟ್ಟಡಗಳ ದುರಸ್ತಿಗಾಗಿ ಒಂದಾದ ಮೇಲೊಂದರಂತೆ ಕಾರ್ಯಾಚರಿಸುತ್ತಿದ್ದ ವಿಭಾಗಗಳನ್ನು ತೆರವುಗೊಳಿಸಿ ಕಾಮಗಾರಿಗೆ ಬಿಟ್ಟು ಕೊಡಲಾಗುತ್ತಿದೆ. ಕೆ.ಆರ್. ಆಸ್ಪತ್ರೆಯ ಬಹುತೇಕ ಸೇವೆಯನ್ನು ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್‌ಗೆ ಸ್ಥಳಾಂತರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಶತಮಾನೋತ್ಸವ ಲಾಂಛನ ಬಿಡುಗಡೆ ಮಾಡಿದ್ದು, ವಸ್ತು ಪ್ರದರ್ಶನ, ಸ್ತಬ್ಧ ಚಿತ್ರ ಅನಾವರಣ, ಮೈಸೂರು ಮೆಡಿಕಲ್ ಕಾಲೇಜು ಅಲ್ಯೂಮ್ನಿ ಅಸೋಸಿಯೇಷನ್‌ನಿಂದ ಉಪನ್ಯಾಸ ಮಾಲೆ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಆರೋಗ್ಯ ಅರಿವು ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಡಾ. ದಾಕ್ಷಾಯಿಣಿ ತಿಳಿಸಿದ್ದಾರೆ. ಅರ್ಥಪೂರ್ಣವಾಗಿ ನಡೆಸಲು ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದು ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್. ದಾಕ್ಷಾಯಿಣಿ ತಿಳಿಸಿದ್ದಾರೆ. ಸಂಸ್ಥೆಯ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಪಿಜಿಗಳು, ವಿದ್ಯಾರ್ಥಿಗಳು, ಬೋಧಕೇತರ ಅಧಿಕಾರಿ, ಸಿಬ್ಬಂದಿಗಳು, ಹಳೇ ವಿದ್ಯಾರ್ಥಿ ಸಮೂಹ ಶತಮಾನೋತ್ಸವ ಸಮಾರಂಭ, ಕಾರ್ಯಕ್ರಮಗಳ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.

ಎಲ್ಲಾ ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷತಾ ಕ್ರಮ (ಫೈರ್ ಸೇಫ್ಟಿ)ಗಳು, ರಸ್ತೆ ಒಳಚರಂಡಿ ಕಾಮಗಾರಿಗಳು, ಲ್ಯಾಂಡ್ ಸ್ಕೇಪಿಂಗ್ ಕೆಲಸಗಳು ಪ್ರಗತಿಯಲ್ಲಿವೆ. ಜುಲೈ ಅಂತ್ಯಕ್ಕೆ ಎಲ್ಲವೂ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಸೆಪ್ಟೆಂಬರ್ ಕಡೇ ವಾರ ಮೂರು ದಿನಗಳ ಕಾಲ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶತಮಾನೋತ್ಸವ ಸಮಾರಂಭವನ್ನು ಸಂಸದ, ಶಾಸಕರು, ವಿಧಾನ ಪರಿಷತ್ ಸದಸ್ಯರು, ವಿವಿಧ ಸಂಘ ಸಂಸ್ಥೆಗಳು ಈ ಮಹತ್ವದ ಕಾರ್ಯದಲ್ಲಿ ಕೈಜೋಡಿಸುತ್ತಿರುವುದರಿಂದ ಶತಮಾನೋತ್ಸವ ಯಶಸ್ವಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಮೈಸೂರಲ್ಲಿ ಜಾನಪದ ಉತ್ಸವ



ಮೈಸೂರು, ಮೇ.3(ಜಿಎ)–ಮೈಸೂರಿನ ಡಿ.ದೇವರಾಜ ಅರಸು ಕಾಲೋನಿಯಲ್ಲಿ ಆದಿಶಕ್ತಿ ಪಟ್ಟಲಮ್ಮ ಹಾಗೂ ಕತ್ತಿಮುನೇಶ್ವರಸ್ವಾಮಿ ಹಬ್ಬದ ಅಂಗವಾಗಿ ಜಾನಪದ ಉತ್ಸವವನ್ನು ಗುರುವಾರ ನಡೆಸಲಾಯಿತು. ಉತ್ಸವ ಅಂಗವಾಗಿ ಆದಿದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾವೃಂದ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಡೊಳ್ಳು ಕುಣಿತ, ಪಟ ಕುಣಿತ, ಗಾರುಡಿ ಗೊಂಬೆ, ಸೋಮನ ಕುಣಿತ, ಕೀಲು ಕುದುರೆ, ನಗಾರಿ, ಮಹಿಳಾ ವೀರಗಾಸೆ ಹಾಗೂ ತಮಟೆ ವಾದ್ಯ ತಂಡಗಳು ಭಾಗವಹಿಸಿದ್ದವು. ಈ ವೇಳೆ ಆದಿ ದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾವೃಂದದ ಅಧ್ಯಕ್ಷ ಸಿ.ಮಂಜುನಾಥ್, ಕಾರ್ಯದರ್ಶಿ ರಾಜಣ್ಣ, ಡಿ.ದೇವರಾಜ್ ಅರಸು ಕಾಲೊನಿಯ ಭೀಮಣ್ಣನವರು, ಯಜಮಾನರು, ಸಂಘದ ಪದಾಧಿಕಾರಿಗಳು, ಕಾಲೋನಿಯ ಮುಖ್ಯಸ್ಥರು, ಮಹಿಳಾ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ

ಮೈಸೂರು, ಮೇ.3(ಎಂಟಿವೈ)– ತಂತ್ರಜ್ಞಾನ ಹೊಸ ಹೊಸ ಆವಿಷ್ಕಾರಕ್ಕೆ ನಾಂದಿಯಾಡುತ್ತಿರುವುದರಿಂದ ಸುಲಭವಾಗಿ ಆಕಾಶ ಮುಟ್ಟುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ (ವಿವಿಸಿಇ) ಕಾಲೇಜಿನಲ್ಲಿ ಶುಕ್ರವಾರ ನಡೆದ ಮೂರು ದಿನಗಳ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ವಿದ್ಯುತ್ 2024' ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅವರನ್ನು ಸನ್ಮಾನಿಸಲಾಯಿತು.


ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ (ವಿವಿಸಿಇ) ಕಾಲೇಜಿನಲ್ಲಿ ಶುಕ್ರವಾರ ನಡೆದ ಮೂರು ದಿನಗಳ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ವಿದ್ಯುತ್ 2024' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆವಿಷ್ಕಾರವು ಮಾನವ ಚತುರತೆಯ ಒಂದು ಮಾಪಕವಾಗಿದ್ದು, ಇಂದು ತಂತ್ರಜ್ಞಾನ ನಮ್ಮ ಬದುಕನ್ನು ಸರಳೀಕರಣಗೊಳಿಸಿದೆ. ಬಾಹ್ಯಾಕಾಶವನ್ನು ಅನ್ವೇಷಣೆ ಮಾಡುವಷ್ಟು ನಮ್ಮ ತಂತ್ರಜ್ಞಾನ ಸದೃಢಗೊಂಡಿದೆ. ಇದೇ ತಂತ್ರಜ್ಞಾನದಿಂದ ನಾವು ಚಂದ್ರನನ್ನು ತಲುಪಲು ಸಾಧ್ಯವಾಗಿದೆ. ಭಾರತೀಯರಿಂದ ಸ್ಫೂರ್ತಿ ಪಡೆದ ಅನೇಕ ದೇಶಗಳು ಇಂದು ಚಂದ್ರಯಾನ ಮಿಷನ್ ಕೈಗೊಳ್ಳುತ್ತಿವೆ ಎಂದರು.

ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಿಗೆ ಅನ್ವೇಷಣೆ ಮಾಡುವುದಕ್ಕೆ ಪ್ರೇರಣೆ ಸಿಕ್ಕಂತಾಗುತ್ತದೆ. ಬೇರೆ ಬೇರೆ ಕಾಲೇಜುಗಳಿಂದ ಬರುವ ವಿದ್ಯಾರ್ಥಿಗಳ ಪರಿಚಯದೊಂದಿಗೆ ಆವಿಷ್ಕಾರಕ್ಕೆ ಸಂಬಂಧಿಸಿದ ಮಾಹಿತಿ ವಿನಿಮಯವಾಗುತ್ತದೆ. ಆ ಕಾರಣದಿಂದ ಕಾಲೇಜುಗಳಲ್ಲಿ ನಡೆಯುವ ವಾರ್ಷಿಕ ಕಾರ್ಯಕ್ರಮ ಮಹತ್ವದ್ದಾಗಿರುತ್ತದೆ. ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುವ ಮೂಲಕ ಒಳ್ಳೆಯ ನಾಗರಿಕರಾಗಿ ಬಾಳ್ವೆ ನಡೆಸಿ. ಎಂಜಿನಿಯರಿಂಗ್ ವಿದ್ಯಾರ್ಥಿಗಳಾಗಿ ನಿಮ್ಮ ಸ್ಥಾನಮಾನದ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಿದ್ಯುತ್ 2024ರ ಸಾಂಸ್ಕೃತಿಕ ಕಾರ್ಯದರ್ಶಿ ಡಾ.ಬಿ.ಜಗದೀಶ್ ಮಾತನಾಡಿ, ವಿದ್ಯುತ್ ಎಂಬುದು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರತಿವರ್ಷ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ವಾರ್ಷಿಕ ಕಾರ್ಯಕ್ರಮ. ಇಲ್ಲಿ ಸಾಂಸ್ಕೃತಿಕ ಮತ್ತು ಕಲಾತ್ಮಕ ಕಾರ್ಯಕ್ರಮಗಳ ಪ್ರದರ್ಶನಗೊಳ್ಳುತ್ತವೆ. ಇದರಲ್ಲಿ ವಿವಿಧ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಆರೋಗ್ಯಕರ ಸ್ಪರ್ಧೆ ಮತ್ತು ಸೌಹಾರ್ದತೆಯ ಮನೋಭಾವವನ್ನು ಬೆಳೆಸುತ್ತದೆ. ಈ ವರ್ಷ ವಿದ್ಯುತ್ ಎಲ್ಲರನ್ನೂ ರಂಜಿಸುವಂತಹ ಜೊತೆಗೆ ಹೊಸ ಹೊಸ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ಒಂದುಗೂಡಿಸಲಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪ ಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಉಪಸ್ಥಿತರಿರುವರು. ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ ರಕ್ತದಾನ ಶಿಬಿರ ನಡೆಯಿತು. ಮೊದಲ ದಿನದ ಸಂಜೆ ಸ್ಯಾಂಡಲ್‌ವುಡ್ ನೈಟ್ ಮತ್ತು ಲಗೋರಿ ಬ್ಯಾಂಡ್ ಪ್ರೇಕ್ಷಕರನ್ನು ರಂಜಿಸಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

4.05.2024 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಥೈರಾಯಿಡ್ ಗ್ರಂಥಿ ವ್ಯಾಧಿಗಳ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** 2023–24ನೇ ಸಾಲಿನ ವಾರ್ಷಿಕ ಅಥ್ಲೆಟಿಕ್ ಕ್ರೀಡಾಕೂಟ, ಉದ್ಘಾಟನೆ : ಡಾ.ಚಿಂತನ್.ಎಂ ಪಾಟ್ಕರ್, ಅಧ್ಯಕ್ಷತೆ : ಕಾಲೇಜಿನ ಗೌರವ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು : ಕಾರ್ಯದರ್ಶಿ ಪಿ.ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾಲೇಜು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಟಿ.ನಾಗರಾಜು, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ ಓವಲ್ಸ್ ಮೈದಾನ, ಬೆಳಗ್ಗೆ 9.30ಕ್ಕೆ
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ
- **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ವಿಜ್ಞಾನಿ ಡಾ. ಆಶೂ ಗ್ರೋವರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ಮೈಸೂರು ವಿವಿ ಕುಲಸಚಿವ ಡಾ. ಬಸಪ್ಪ, ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ:ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.
- **ಚಂಪಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ :** ಚೈತ್ರ–2024, ಚಂಪಕ ರಾಷ್ಟ್ರೀಯ ಕಲಾ ಉತ್ಸವ, ಮುಖ್ಯ ಅತಿಥಿಗಳು : ಸ್ವರಾಲಯ ಸಂಗೀತ ಶಾಲೆ ನಿರ್ದೇಶಕರಾದ ವಿದುಷಿ ಜಿ. ರಾಜಲಕ್ಷ್ಮಿ ಶ್ರೀಧರ್, ಸ್ಥಳ: ಚಂಪಕ ಸಭಾಂಗಣ, ರಾಮಕೃಷ್ಣನಗರ, ಸಂಜೆ 5ಕ್ಕೆ
- **ರಂಗಾಯಣ :** ಚಿಣ್ಣರ ನಾಟಕೋತ್ಸವ, ತಂಡ–2, ನೇರಳೆ, ಮಂಗಗಳ ಉಪವಾಸ, ಕವನ : ಮಚ್ಚಿ ಮಲೆ ಶಂಕರ ನಾರಾಯಣ, ಸಹ ನಿರ್ದೇಶನ : ಶೃತಿ, ಪ್ರಮೋದ್, ಕಮಲಕರ, ರಂಗರೂಪ, ನಿರ್ದೇಶನ: ಡಿ.ಆರ್. ನಿತಿನ್ ಸುಳ್ಯ, ತಂಡ–7, ಕಬೂರ್ಜ, ಪಂಜರಶಾಲೆ, ರಚನೆ: ಬಿ.ವಿ.ಕಾರಂತ, ನೃತ್ಯ ಸಂಯೋಜನೆ: ತೀರ್ಥೇಶ್, ಸಹ ನಿರ್ದೇಶನ: ಪ್ರಜ್ವಲ್ ಭಾರದ್ವಾಜ್, ಚೈತ್ರ ಕೋಟ್ಯಾನ್, ನಿರ್ದೇಶನ: ಚಂದನ್ ಎಂ.ಕೆಬ್ಬೇಹುಂಡಿ, ಸ್ಥಳ: ವನರಂಗ, ಸಂಜೆ 6.30ಕ್ಕೆ.
- **ಶ್ರೀ ಪ್ರಸನ್ನ ಸುಂದರ ರಾಮಮಂದಿರ ಸೇವಾ ಸಮಿತಿ ಟ್ರಸ್ಟ್:** ಶ್ರೀ ಕ್ರೋಧಿನಾಮ ಸಂವತ್ಸರ 88ನೇ ವರ್ಷದ ಶ್ರೀರಾಮೋತ್ಸವ, ಶ್ರೀರಾಮ ಪಟ್ಟಾಭಿಷೇಕ, ಶ್ರೀ ರಾಮ ತಾರಕ ಹೋಮ, ಪೂರ್ಣಾಹುತಿ, ಮಧ್ಯಾಹ್ನ 12.30 ಗಂಟೆಗೆ ಮಹಾಮಂಗಳಾರತಿ, ಭಕ್ತಾದಿಗಳಿಗೆ ಅನ್ನಸಂತರ್ಪಣೆ, ಸ್ಥಳ: ಶ್ರೀರಾಮಮಂದಿರ, ಜಯನಗರ.
- **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಪದ ಸಂಸ್ಕೃತಿ–ಡಾ. ಕೆ. ಎಲ್. ಪ್ರಸನ್ನಾಕ್ಷಿ, 6.50 ರೈತರಿಗೆ ಸಲಹೆ, 7.15 "ಆಕಾಶವಾಣಿ ಜಾತ್ರಾ ವಿಶೇಷ" ಬಾನುಲಿ ಸರಣಿ, ಪ್ರಸ್ತುತಿ–ಅಬ್ದುಲ್ ರಶೀದ್, 8.30 "ಹಾದಿಯಲ್ಲಿ ಕಂಡ ಮುಖ" ಬಾನುಲಿ ಸರಣಿ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಾಧುರಿ ಮಣಿ ಅಯ್ಯರ್ –ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಲಕ್ಷ್ಮೀಸಾಗರದ ಕೆಂಚಮ್ಮ ಮತ್ತು ಸಂಗಡಿಗರಿಂದ, 1.00 ಚಿತ್ರಗೀತೆಗಳು, 1.20 ಭಾವಗೀತೆ, 3.00 ಜನಪದ ಸಂಗೀತ–ಬನ್ನೂರು ಮಾದಿಗಳ್ಳಿಯ ಪಾರ್ವತಮ್ಮ ಮತ್ತು ಸಂಗಡಿಗರಿಂದ, 3.30 ಮಕ್ಕಳ ಮಂಟಪ–ಶ್ರೀ ಗುರುಕಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ಕಿಸಾನ್ ವಾಣಿ–ಅರಿಸಿನ ಬೇಸಾಯ ಈ ಕುರಿತು ಗುಂಡ್ಲುಪೇಟೆ ತಾಲೂಕು ಶಿವಪುರದ ಎಸ್. ಎಂ. ನಾಗಾರ್ಜುನ ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದುಷಿ ಉಮಾ ಗಾರ್ಗ್ – ಹಾಡುಗಾರಿಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಮೇ 4 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 18 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಬಿರುಗಾಳಿ ಮಳೆಗೆ ಮೈಸೂರು ತತ್ತರ!

● ಮುಗಿಲೆತ್ತರಕ್ಕೆ ಆವರಿಸಿದ ಧೂಳು; ಕ್ಷಣಕಾಲ ಜನರಲ್ಲಿ ಭಾರಿ ಆತಂಕ ● ಕಣ್ಣಾಯಿಸಿದೆಡೆ ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು
● ಶಾಲಾ ವಾಹನ, ಸಾರಿಗೆ ಬಸ್ ಮೇಲೆ ಉರುಳಿ ಬಿದ್ದ ವಿದ್ಯುತ್ ಕಂಬಗಳು ● ದೇವರ ದಯೆ; ಯಾವುದೇ ಪ್ರಾಣಾಪಾಯವಿಲ್ಲ







ವಿವಿಧೆಡೆ ಆಲಿಕಲ್ಲು ಮಳೆ

ಮೈಸೂರಿನಲ್ಲಿ ಸಂಜೆ 4.30ರ ಸುಮಾರಿಗೆ ಮಳೆ ಆರಂಭವಾಯಿತು. ಬಹುತೇಕ ಕಡೆ ಅರ್ಧ ಗಂಟೆಗೂ ಹೆಚ್ಚು ಕಾಲ ಜೋರಾಗಿಯೇ ಸುರಿಯಿತು. ಕೆಲವೆಡೆ ಸಾಧಾರಣ ಮಳೆಯಾಗಿದ್ದು, ಅಗ್ರಹಾರ, ಕೆ.ಆರ್.ವೃತ್ತ, ಮೆಟ್ರೊಪೋಲ್ ವೃತ್ತ ಮತ್ತಿತರ ಕಡೆ ಆಲಿಕಲ್ಲು ಮಳೆಯಾಗಿದೆ. ಹಲವು ದಿನಗಳಿಂದ 40 ಡಿಗ್ರಿ ಮೀರಿದ್ದ ತಾಪಮಾನದಿಂದ ಬಸವಳಿದಿದ್ದ ಜನರಿಗೆ ಸ್ವಲ್ಪ ಸಮಾಧಾನ ತಂದಿದೆ.





ಮೈಸೂರು, ಮೇ 3(ಎಸ್‌ಬಿಡಿ, ಎಂಕೆ)– ಬಿರುಗಾಳಿ ಸಹಿತ ಭಾರೀ ಮಳೆಗೆ ಶುಕ್ರವಾರ ಮೈಸೂರು ತತ್ತರಿಸಿತು. ಮರಗಳು, ಭಾರೀ ರೆಂಬೆಗಳು, ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಪರಿಣಾಮ ಸಾಕಷ್ಟು ವಾಹನಗಳು ಜಖಂಗೊಂಡಿದ್ದು, ಅದೃಷ್ಟವಶಾತ್ ಸಾವು–ನೋವು ಸಂಭವಿಸಿಲ್ಲ.

ಬಿರು ಬಿಸಿಲಿನ ತಾಣವಾಗಿದ್ದ ಮೈಸೂರಿಗೆ ಶುಕ್ರವಾರ ಸಂಜೆಯ ಮಳೆ ತಂಪೆರೆಯಿತು. ಆದರೆ ಮಳೆಯೊಂದಿಗೆ ದಾಂಗುಡಿಯಿಟ್ಟ ಭಾರೀ ಬಿರುಗಾಳಿ ಆತಂಕ ಸೃಷ್ಟಿಸಿತು. ಸಂಜೆ 4.30ರ ಸುಮಾರಿಗೆ ಕಾರ್ಮೋಡ ಆವರಿಸಿ, ಮಿಂಚು–ಗುಡುಗು, ಬಿರುಗಾಳಿ ಆರಂಭವಾಯಿತು. ಬೆನ್ನಹಿಂದೆಯೇ ದಿಢೀರ್ ಕತ್ತಲು ಆವರಿಸಿತು. ಮುಗಿಲೆತ್ತರಕ್ಕೆ ಭಾರೀ ಪ್ರಮಾಣದ ಧೂಳೆದ್ದು ಜನ ಗಾಬರಿಪಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಬಿರುಗಾಳಿ ಆರ್ಭಟಕ್ಕೆ ಬೆಚ್ಚಿಬಿದ್ದ ಜನ ದಿಕ್ಕಾಪಾಲಾಗಿ ಸುರಕ್ಷಿತ ಸ್ಥಳದತ್ತ ದೌಡಾಯಿಸಿದರು. ದ್ವಿಚಕ್ರ ವಾಹನ ಸವಾರರು ಮುಂದೆ ಸಾಗಲಾರದೆ ನಿಂತಲ್ಲೇ ವಾಹನಗಳನ್ನು ಬಿಟ್ಟು, ಅಂಗಡಿ–ಮುಂಗಟ್ಟುಗಳ ಮುಂದೆ ಆಶ್ರಯ ಪಡೆದರು. ಭಾರೀ ಬಿರುಗಾಳಿ ರಭಸಕ್ಕೆ ಕೆಲ ಸವಾರರು ವಾಹನ ಸಮೇತ ಉರುಳಿ ಬಿದ್ದರು. ಧೂಳಿನಲ್ಲಿ ಕಾರುಗಳೂ ಮುಂದೆ ಸಾಗಲಾಗದೆ ಅದೆಷ್ಟೋ ಮಂದಿ ರಸ್ತೆ ಬದಿಯಲ್ಲಿ ನಿಲ್ಲಿಸಿಕೊಂಡಿದ್ದರು.

● 5ನೇ ಪುಟಕ್ಕೆ

ಕೆಬಿಜಿಯವರ ಧೂಮಂತ್ರ...



ಜನಾನುರಾಗಿ ನಮ್ಮ ವಿ.ಶ್ರೀನಿವಾಸ ಪ್ರಸಾದ್ ಒಂದು ನೆನಪು; ನುಡಿನಮನ

■ ಪುಟ–4

ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ

ಸಂತ್ರಸ್ತೆ ಅಪಹರಣ ಆರೋಪ: ಶಾಸಕ ರೇವಣ್ಣ ವಿರುದ್ಧ ಪ್ರಕರಣ ದಾಖಲು

● ಸಂತ್ರಸ್ತೆ ಪುತ್ರನಿಂದ ದೂರು ● ಇದೇ ಪ್ರಕರಣದಲ್ಲಿ ಹೆಬ್ಬಾಳು ಕೊಪ್ಪಲು ಗ್ರಾಮದ ಸತೀಶ್ ಬಾಬಣ್ಣ ಬಂಧನ
● ಹೆಚ್.ಡಿ.ರೇವಣ್ಣರಿಂದ ನಿರೀಕ್ಷಣಾ ಜಾಮೀನಿಗೆ ಅರ್ಜಿ




ಮೈಸೂರು,ಮೇ.3–ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯನ್ನು ಅಪಹರಿಸಿದ ಆರೋಪದ ಮೇರೆಗೆ ಅವರ ತಂದೆ ಶಾಸಕ ಹೆಚ್.ಡಿ.ರೇವಣ್ಣ ವಿರುದ್ಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ ಪೊಲೀಸರು ಓರ್ವನನ್ನು ಬಂಧಿಸಿದ್ದಾರೆ. ಹೆಚ್.ಡಿ.ರೇವಣ್ಣ ಅವರ ಮನೆಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಕೆ.ಆರ್.ನಗರ ತಾಲೂಕು ಹೆಬ್ಬಾಳು ಗ್ರಾಮದ ಮಹಿಳೆ ಮೇಲೆ ಪ್ರಜ್ವಲ್ ಲೈಂಗಿಕ ದೌರ್ಜನ್ಯ ಎಸಗಿದ್ದರು ಎನ್ನಲಾಗಿದ್ದು, ಈ ಮಹಿಳೆಯನ್ನು ರೇವಣ್ಣ ಸೂಚನೆ ಮೇರೆಗೆ ಹೆಬ್ಬಾಳು ಕೊಪ್ಪಲು ಗ್ರಾಮದ ಸತೀಶ್ ಬಾಬಣ್ಣ ಎಂಬಾತ ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿದ್ದು, ಆಕೆಗೆ ಪ್ರಾಣಾಪಾಯವಿದೆ ಎಂದು ಮಹಿಳೆಯ ಪುತ್ರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾನೆ.

ವಿವರ: ಈ ಮಹಿಳೆಯು ಹೊಳೆನರಸೀಪುರದಲ್ಲಿರುವ ರೇವಣ್ಣ ಅವರ

● 7ನೇ ಪುಟಕ್ಕೆ

ಲಿಂಗೈಕ್ಯ



ಜಿ ಮಾದಯ್ಯ
(ಹಿರಿಯ ಕಾಂಗ್ರೆಸ್ ಮುಖಂಡರು)
ಮಾಲೀಕರು: ನಂದಿ ಬಸ್
ಜನನ: 10.03.1945, ಮರಣ: 03.05.2024
ದುಃಖತಪ್ತರು: ಪತ್ನಿ ಎಸ್.ಮಂಜುಳ, ಮಗ ಜಿ.ಎಂ.ರವಿಚಂದ್ರ







ನಕ್ಕರೆ ಅದೇ ಸ್ವರ್ಗ

ಗಂಡ : "ಮನೆಯೊಳಗೆ ಹಾವು ಬಂದಿದೆ ಕಣೇ! ಯಾರಾದರೂ ಗಂಡಸರು ಹೊರಗಿದ್ದರೆ ಬೇಗ ಕರಿ."
ಹೆಂಡತಿ : "ನೀವು ಗಂಡಸರಲ್ಲವಾ?"
ಗಂಡ : "ಓಹ್, ಹೌದಲ್ಲ! ಹಾವು ಕಂಡು ಹೆದರಿಬಿಟ್ಟಿದ್ದೆ!.

ಮೈಸೂರು ಮಿತ್ರ
ಶನಿವಾರ, 4 ಮೇ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸಮಯ ಮತ್ತು ಪರಿಸರಗಳೇ ಮನುಷ್ಯನನ್ನು ದುರ್ಬಲ ಅಥವಾ ಸಬಲರನ್ನಾಗಿ ಮಾಡುತ್ತವೆ. – ಕಾರ್ಲೈಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಟ್ಟಿ ತುಂಬಾ ಹಸು / ಹಾಲು ಮಾತ್ರ ತುಸು

ನಿಮ್ಮ ಪತ್ರಗಳು

■ ಮಳೆ ಇಲ್ಲದೆ ಭೀಕರ ಬರ

ಮಾನ್ಯರೇ

ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಈ ವರ್ಷ ಮುಂಗಾರು ಮಳೆ ಇನ್ನೂ ಬಾರದೇ ಇರುವುದರಿಂದ, ಈಗಾಗಲೇ ಒಂದು ತಿಂಗಳಿಂದ ಉಷ್ಣಾಂಶ ಶೇ.40 ಡಿಗ್ರಿಗಿಂತ ಅಧಿಕವಾಗಿದೆ. ಅನೇಕ ಕಡೆಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಸಹ ಸರಿಯಾಗಿ ಲಭಿಸುತ್ತಿಲ್ಲ. ಜಾನುವಾರುಗಳಿಗೆ ಮೇವು, ನೀರು ಸಿಗದೇ ರೈತರಿಗೆ ಜೀವನ ಮಾಡುವುದೇ ಬಹಳ ಕಷ್ಟಕರವಾಗಿದೆ.

ಮಳೆಯು ಇನ್ನೂ ಬಾರದೇ ಇರುವುದರಿಂದ ರೈತರು ಸೊಪ್ಪು, ತರಕಾರಿ, ಹಣ್ಣು, ಹೂ ಬೆಳೆಯಲು ಬಹಳ ತೊಂದರೆ ಪಡುತ್ತಿದ್ದಾರೆ. ತರಕಾರಿ, ಹಣ್ಣು, ಹೂಗಳು ಸೊಪ್ಪು ಇನ್ನಿತರೆ ತರಕಾರಿ ಮಾರುಕಟ್ಟೆಗಳಲ್ಲಿ ಸಿಗುವುದೇ ಕಷ್ಟವಾಗಿದೆ. ಸಿಕ್ಕಿದರೂ ಕಳೆದ ಒಂದು ತಿಂಗಳಿಂದ ಎಲ್ಲವೂ ದುಪ್ಪಟ್ಟು ಬೆಲೆಗಳಾಗಿವೆ. ಹೋಟೆಲು ಉದ್ಯಮಿಗಳು ಮಾರುಕಟ್ಟೆಯಲ್ಲಿ ಖರೀದಿ ಮಾಡಲು ತರಕಾರಿ, ಹಣ್ಣುಗಳೇ ಸರಿಯಾಗಿ ಸಿಗುತ್ತಿಲ್ಲ. ಸಿಕ್ಕಿದರೂ ಬೆಲೆ ನಿಯಂತ್ರಣದಲ್ಲಿಲ್ಲ. ತರಕಾರಿ, ಹಣ್ಣುಗಳು ಸಿಗದೇ ಇರುವುದರಿಂದ ಮಾಂಸಾಹಾರಕ್ಕೆ ಬೇಡಿಕೆ ಹೆಚ್ಚಿದೆ. ಈ ಬೇಸಿಗೆಯಲ್ಲಿ ವ್ಯಾಪಾರ ಬಹಳಷ್ಟು ಕುಸಿದಿದೆ. ರಣಬಿಸಿಲಿನ ಉಷ್ಣಾಂಶ ದಿನೇ ದಿನೆ ಜಾಸ್ತಿಯಾಗುತ್ತಿದೆ.

ಮುಖ್ಯಮಂತ್ರಿಗಳು ಮೋಡ ಬಿತ್ತನೆ ಮಾಡಿ, ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿದರೆ, ರೈತರ ಜೀವನ ಸಾಗುತ್ತದೆ. ಎಲ್ಲಾ ತರಹದ ಬೆಳೆಗಳು ಬೆಳೆಯಲು ಅನುಕೂಲವಾಗುತ್ತದೆ. ಜಾನುವಾರುಗಳಿಗೂ ಯಥೇಚ್ಛವಾಗಿ ನೀರು, ಮೇವು ಸಿಗುವಂತಾಗುತ್ತದೆ. ಸಾರ್ವಜನಿಕರಿಗೂ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ.

– ಸಿ.ನಾರಾಯಣಗೌಡ, ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ, ಮೈಸೂರು.

■ 'ದೇವ್ರು'ಗಳಲ್ಲಿ ಹರಕೆ ಹೊತ್ತರೆ ಇವಿಎಂನಲ್ಲಿ ಇರುವ ಮತಗಳ ಸಂಖ್ಯೆ ಏರುಪೇರಾಗಬಹುದೇ?

ಮಾನ್ಯರೆ,

ಕರ್ನಾಟಕದಲ್ಲಿ 18ನೇ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಮುಗಿದು ಮತಯಂತ್ರಗಳು ಎಣಿಕಾ ಕೇಂದ್ರದಲ್ಲಿ ಕುಂಭಕರ್ಣನಂತೆ ನಿದ್ರೆ ಮಾಡುತ್ತಿವೆ. ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಮತದಾನಕ್ಕೂ ಮುನ್ನ ಮಠಗಳಿಗೆ, ದೇವಸ್ಥಾನಗಳಿಗೆ ಮುಗಿಬಿದ್ದು ಕಂತೆ ಕಂತೆ ದಕ್ಷಿಣೆ ಇಟ್ಟು 'ಸರ್ವಸಂಗ ಪರಿತ್ಯಾಗಿ'ಗಳಿಂದ ಹಾಗೂ 'ದೇವ್ರು'ಗಳಿಂದ ಆಶೀರ್ವಾದ ಪಡೆದುಕೊಂಡಿದ್ದಲ್ಲದೇ, ಚುನಾವಣೆಯಲ್ಲಿ ಗೆದ್ದರೆ... ಹಿಮಾಲಯದೆತ್ತರದಷ್ಟು ಹರಕೆ ತೀರಿಸುವೆ...! ಗೆಲ್ಲದಿದ್ದರೆ...? ಮಠಗಳಿಗೂ, ದೇಗುಲಗಳಿಗೂ 'ಚೊಂಬು, ಚಿಪ್ಪು ಗ್ಯಾರಂಟಿ' ಎಂತಲೂ ತಮ್ಮ ಮನದಿಂಗಿತವನ್ನು ಮೌನವಾಗಿ ವ್ಯಕ್ತಪಡಿಸಿ, ಪರಿತ್ಯಾಗಿಗಳ ಮತ್ತು ದೇವ್ರುಗಳ ನಿದ್ದೆಗೆಡಿಸಿದ್ದಾರೆ! ಇದೆಲ್ಲ ಮತದಾನದ ಮುನ್ನಾ ದಿನಗಳಲ್ಲಿ ಕಂಡುಬಂದದ್ದು...!

ಮತದಾನದ ನಂತರ..., 'ಭಯ–ಭಕ್ತಿ–ಭಾವ'ದಿಂದ ಮೋಜು ಮಸ್ತಿಯ ರಸಿಕ ಅಭ್ಯರ್ಥಿಗಳು ಜರ್ಮನಿ, ದುಬೈ, ಹಾಂಕಾಂಗ್‌ಗೆ ಹಾರಿದರೆ, ಇನ್ನೂ ಕೆಲವು ಆಸ್ತಿಕ ಅಭ್ಯರ್ಥಿಗಳು ಮಠಗಳಿಗೆ, ದೇವಸ್ಥಾನಗಳಿಗೆ ತೆರಳಿ ಆಶೀರ್ವಾದ ಪಡೆಯುತ್ತಾ ಮತ್ತೆ ಮತ್ತೆ ಹರಕೆ ಹೊರುವುದು, ಅರ್ಚಕರ, ಜ್ಯೋತಿಷಿಗಳ ಸಲಹೆಯಂತೆ ಹೋಮಹವನಗಳನ್ನು, ವಾಮಾಚಾರಗಳನ್ನು ಮಾಡಿಸುತ್ತಾ 'ಗೆಲವು ನನ್ನದಾಗಲಿ ದೇವ್ರೆ' ಎಂದು ಕರಮುಗಿದು, ಶಿರಬಾಗಿ, ದೈನೇಶಿಯಂತೆ ಪಾರ್ವತಿ–ಪರಮೇಶಿ ಮುಂತಾದ ದೇವ್ರುಗಳಲ್ಲಿ ಕೇಳಿಕೊಳ್ಳುತ್ತಿದ್ದಾರೆ! ಇವರ ಬೇಡಿಕೆಗಳನ್ನು ಕೇಳಿ ಕೇಳಿ ದೇವ್ರುಗಳಿಗೂ ಸಾಕುಸಾಕಾಗಿ 'ಯಾಕಾದ್ರೂ ನಾನು ಈ ಜನ್ಮದಲ್ಲಿ ದೇವ್ರಾಗಿ ಹುಟ್ಟಿದೆನೋ, ಮುಂದಿನ ಜನ್ಮದಲ್ಲಿ ಮತ್ತೆ ದೇವ್ರಾಗಿ ಹುಟ್ಟೋದು ಬೇಡ' ಎಂಬ ಖಡಕ್ ನಿರ್ಧಾರವನ್ನು ದೇವ್ರುಗಳು ತೆಗೆದುಕೊಂಡರೂ ಆಶ್ಚರ್ಯವೇನಿಲ್ಲ...!

ಅದೇನೆ ಇರಲಿ, ಅಭ್ಯರ್ಥಿಗಳು ಈ... ಪರಿ 'ಸರ್ವಸಂಗ ಪರಿತ್ಯಾಗಿ'ಗಳಲ್ಲಿ, 'ದೇವ್ರು'ಗಳಲ್ಲಿ ಮೊರೆಹೋಗಿ ಗೋಗರೆದರೆ ಮತಯಂತ್ರಗಳಲ್ಲಿರುವ ಮತಗಳು ಪರಿವರ್ತನೆಯಾಗಬಹುದೇ? ಅವುಗಳ ಸಂಖ್ಯೆ ಏರುಪೇರಾಗಬಹುದೆ? ಸೋಲುವವನು ಗೆಲ್ಲಬಹುದೆ? ಗೆಲ್ಲುವವನು ಸೋಲಬಹುದೆ? ವರ್ತಮಾನದಲ್ಲಿ ಇಂತಹ ಪವಾಡಗಳು ವಾಸ್ತವವಾಗಿ ನಡೆಯುವುದೇ ಆಗಿದ್ದರೆ 'ಕನ್ನಡಮ್ಮನ ದೌರ್ಭಾಗ್ಯ'ವೆಂಬಂತೆ 'ಭಾಗ್ಯ'ಗಳಿಂದ ಖಾಲಿಯಾಗುತ್ತಿರುವ ಸರ್ಕಾರದ ಖಜಾನೆ 'ಅಕ್ಷಯ ಪಾತ್ರೆಯಂತೆ ಆದ್ರೆ ಸಾಕಪ್ಪ' ಎಂದು ಆಡಳಿತಾರೂಢ ಸರ್ಕಾರವು ದೇವ್ರುಗಳಲ್ಲಿ ಹರಕೆ ಹೊತ್ತರೂ ತಪ್ಪೇನಿಲ್ಲ ಬಿಡಿ...!

ಒಂದಂತೂ ಸತ್ಯ! 'ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬಂತೆ ನಡೆಯುತ್ತಿರುವ ಈ ಚುನಾವಣಾ ಜಾತ್ರೆಯಲ್ಲಿ ಹೊಟ್ಟೆ ಬಿರಿಯುವ ಹಾಗೆ ಉಂಡೋನೆ ಜಾಣ...! ಉಣ್ಣದೇ ಇರುವ ದಡ್ಡನಿಗೆ 'ಚೊಂಬು' ಇಲ್ಲವೆ... 'ಚಿಪ್ಪು' ಗ್ಯಾರಂಟಿ...!

–ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

■ ನೀರಿಗಿಳಿಯುವ ಮುನ್ನ ಯೋಚಿಸಿ!


ಮಾನ್ಯರೆ,

ಮೇಕೆದಾಟಿಗೆ ಪ್ರವಾಸಕ್ಕೆ ಬಂದಿದ್ದ ಬೆಂಗಳೂರಿನ ಇಬ್ಬರು ಯುವಕರು ಹಾಗೂ ಮೂವರು ಯುವತಿಯರು ಸೇರಿದಂತೆ ಐದು ಮಂದಿ ವಿದ್ಯಾರ್ಥಿಗಳು ನದಿಯಲ್ಲಿ ಈಜುವಾಗ ಮುಳುಗಿ ಸಾವನ್ನಪ್ಪಿರುವ ಘಟನೆ ಕಳೆದ ಸೋಮವಾರ ಜರುಗಿದೆ. ಈ ರೀತಿಯ ಘಟನೆಗಳು ಪದೇ ಪದೆ ಮರುಕಳಿಸುತ್ತಿದ್ದು ಈಜಲು ಬಾರದಿದ್ದರೂ ಕೆರೆ ಕಟ್ಟೆ ನದಿಗಳಲ್ಲಿ ಈಜಲು ಹೋಗಿ ನೀರು ಪಾಲಾದವರಲ್ಲಿ ಹದಿಹರೆಯದ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಬೇಸಿಗೆ ಬಂದೊಡನೆ ನೀರಿಗಿಳಿದು ಬೇಗೆ ತಣಿಸಿಕೊಳ್ಳಲು ಮನಸ್ಸು ಹಾತೊರೆಯುವುದು ಸಹಜ. ಆದರೆ ನೀರಿಗೆ ಇಳಿಯುವ ಮುನ್ನ ಸಾಕಷ್ಟು ಎಚ್ಚರಿಕೆ ಅಗತ್ಯವಾಗಿದೆ. ಬೇಸಿಗೆ ಬಿಸಿಲು ಚುರುಕಾಗುತ್ತಿದ್ದಂತೆಯೇ ಮಕ್ಕಳಲ್ಲಿ ನೀರಿನ ಸೆಳೆತ ಹೆಚ್ಚಾಗುತ್ತದೆ. ಮಕ್ಕಳು ಮನೆಯಲ್ಲಿ ಪೋಷಕರಿಗೆ ವಿವಿಧ ಕಾರಣ ಹೇಳಿ, ಸ್ನೇಹಿತರೊಂದಿಗೆ ಮೋಜು ಮಸ್ತಿ ಮಾಡಲು ಕೆರೆ ಕಟ್ಟೆ ನದಿಯಂತಹ ಅಪಾಯಕಾರಿ ಸ್ಥಳಗಳಲ್ಲಿ ಈಜು ಬಾರದಿದ್ದರೂ ಸ್ನೇಹಿತರ ಒತ್ತಾಸೆ ಹಾಗೂ ಬಲವಂತಕ್ಕೆ ಕಟ್ಟು ಬಿದ್ದು, ಈಜಾಡಲು ಹೋಗಿ ನೀರು ಪಾಲಾಗುತ್ತಿರುವುದು ದುರ್ದೈವದ ಸಂಗತಿಯಾಗಿದೆ.

ಆಳ ಅಗಲ ಗೊತ್ತಿರದ ಕೆರೆ ಕಟ್ಟೆ ಬಾವಿ ಹೊಂಡ ಸೇರಿ ಯಾವುದೇ ಸ್ಥಳಗಳಲ್ಲಿಯೂ ಈಜಾಡುವುದು ಸೂಕ್ತವಲ್ಲ ಎಂಬುದನ್ನು ಯುವಜನತೆ ಅರಿತರೆ ಒಳ್ಳೆಯದು. ಅಲ್ಲದೇ ಈಜು ಬಾರದವರು ನುರಿತ ತರಬೇತುದಾರರಿಂದಲೇ ಈಜು ಕಲಿತರೆ ಮುಂದಾಗುವ ಅಪಾಯ ತಪ್ಪಿಸಬಹುದು. ನಮ್ಮ ಯುವ ಜನಾಂಗ ಮೋಜು ಮಸ್ತಿಯ ನೆಪದಲ್ಲಿ ಮೈಮರೆತು ಜೀವಕ್ಕೆ ಕುತ್ತು ತಂದುಕೊಳ್ಳುವುದು ಬೇಡ. ಈ ಬಗ್ಗೆ ಪಾಲಕರು ತಮ್ಮ ಮಕ್ಕಳ ಮೇಲೆ ಹೆಚ್ಚು ನಿಗಾ ಇಡಬೇಕು ಹಾಗೂ ಇಂತಹ ದುರ್ಘಟನೆಗಳು ಪುನರಾವರ್ತನೆ ಆಗದಂತೆ ಎಚ್ಚರ ವಹಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಜನಾನುರಾಗಿ ನಮ್ಮ ವಿ.ಶ್ರೀನಿವಾಸ ಪ್ರಸಾದ್ ಒಂದು ನೆನಪು; ನುಡಿನಮನ



ಇತ್ತೀಚೆಗೆ ನಮ್ಮನ್ನಗಲಿದ ವಿ. ಶ್ರೀನಿವಾಸ ಪ್ರಸಾದ್ ಅವರನ್ನು ನಾನು 1979–80ರ ಆರಂಭದಿಂದಲೂ ಬಲ್ಲೆ. ಆಗಿನ ಕಾಲಕ್ಕೆ ಅವರು ದಲಿತ ಸಮುದಾಯದ ಯುವ, ಕ್ರಿಯಾಶೀಲ ಮತ್ತು ಧೈರ್ಯಶಾಲಿ ರಾಜಕಾರಣಿಯಾಗಿ ಭಾರಿ ಸುದ್ದಿಯಲ್ಲಿದ್ದರು. ಅವರು ನಗರದ ಅಶೋಕಪುರಂನ ಹೆಮ್ಮೆಯ ಯುವ ನಾಯಕರೂ ಆಗಿದ್ದರು.

'ಸ್ಟಾರ್ ಆಫ್ ಮೈಸೂರ್' ಮತ್ತು ಅದರ ಸೋದರಿ ಪ್ರಕಾಶನ 'ಮೈಸೂರು ಮಿತ್ರ', ಅವರ ರಾಜಕೀಯ ಮತ್ತು ಸಾಮಾಜಿಕ ಸೇವಾ ಚಟುವಟಿಕೆಗಳನ್ನು ನಿಯಮಿತವಾಗಿ ಆಗಿಂದಾಗ್ಗೆ ವರದಿ ಮಾಡುತ್ತಿದ್ದವು.

ಅವರು ತಮ್ಮ ರಾಜಕೀಯ ಜೀವನದಲ್ಲಿ ಮೇಲೇರಿದಂತೆ ನಾನು ಒಬ್ಬ ಪತ್ರಕರ್ತನಾಗಿ ಅವರಿಗೆ ಹತ್ತಿರವಾಗತೊಡಗಿದೆ. 1980ರ ದಶಕದ ಉತ್ತರಾರ್ಧದಲ್ಲಿ ದೆಹಲಿಯ ಸಂಸದರ ವಸತಿ ಗೃಹ (ಕ್ವಾರ್ಟರ್ಸ್)ದಲ್ಲಿ ಅವರ ಅತಿಥಿಯಾಗಿ ಒಂದು ವಾರ ಕಳೆದ ಸಮಯವನ್ನು ಒಳಗೊಂಡಂತೆ ನನ್ನ ವೈಯಕ್ತಿಕ ಅಂಕಣಗಳಾದ 'ಸ್ಟಾರ್ ಆಫ್ ಮೈಸೂರ್'ನ 'ಅಬ್ರಕಡಬ್ರ' ಹಾಗೂ 'ಮೈಸೂರು ಮಿತ್ರ'ನ 'ಭೂಮಂತ್ರ'ದಲ್ಲಿ ನಾನು ಅವರ ಬಗ್ಗೆ ಹಲವಾರು ಬಾರಿ ಬರೆದಿದ್ದೇನೆ.

ಈ ಸಮಯದಲ್ಲಿ, ನಾನು ಅವರ ಮಾನವೀಯ ಗುಣಗಳು ಮತ್ತು ಹಾಸ್ಯ ಪ್ರಜ್ಞೆಯನ್ನು ಗಮನಿಸಿದ್ದೇನೆ. ಅವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಸುಲಲಿತವಾಗಿ ಮಾತನಾಡುತ್ತಿದ್ದರು. ವೇದಿಕೆಯ ಮೇಲೆ ನಿಂತರೆ ಒಳ್ಳೆಯ ವಾಗ್ಮಿಗಳು. ವಿಷಯ ವಿಡಂಬನೆಯಲ್ಲಿ ನಿಪುಣರು. ಇತರ ರಾಜಕೀಯ ನಾಯಕರೊಂದಿಗಿನ ಒಡನಾಟದ ಅನುಭವವನ್ನು ಅವರ ಮಾತಿನಲ್ಲಿ ಕೇಳುವುದೇ ಒಂದು ಸ್ವಾರಸ್ಯಕರ ಸಂಗತಿ. ನಿಂದನೆಯ ಲೇಪವಿಲ್ಲದೆ ಮಾತನಾಡುವ ಒಬ್ಬ ಸುಸಂಸ್ಕೃತ ರಾಜಕಾರಣಿ ಶ್ರೀನಿವಾಸ ಪ್ರಸಾದ್. ಅವರು, ತಮಗಿದ್ದ ಸಂಸದೀಯ ಸ್ಥಾನವನ್ನು ಎಂದೂ ತಮ್ಮ ಪ್ರಭುತ್ವವೆಂದು ಪರಿಗಣಿಸಲಿಲ್ಲ. ಅವರು ಬಿಡು ಮನಸ್ಸಿನಿಂದ ತಮ್ಮ ರಾಜಕೀಯ ಪ್ರತಿಸ್ಪರ್ಧಿ ಅಥವಾ ವಿರೋಧಿಯ ಬಗ್ಗೆ ಮಾತನಾಡುವಾಗ, ಭಾಷಣ ಮಾಡುವಾಗ ಅವರೆಲ್ಲೂ ಸಿದ್ಧಾಂತದಲ್ಲಾಗಲೀ, ಮೌಲ್ಯಗಳಲ್ಲೇ ಆಗಲೀ ರಾಜೀ ಮಾಡಿಕೊಳ್ಳಲಿಲ್ಲ. ಆದರೆ ಅವರನ್ನು ವಿನಾಕಾರಣ ಪ್ರಚೋದಿಸಿದರೆ ಅವರು ಒಂದು ಖಡ್ಗದ ಅಲಗಿನಂತೆ ತೀಕ್ಷ್ಣವಾದ ಎದಿರೇಟು ನೀಡುತ್ತಿದ್ದರು. ಅದಕ್ಕೆ ಉದಾಹರಣೆ 2016ರಲ್ಲಿ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮಂತ್ರಿ ಮಂಡಲದಿಂದ ಅವರನ್ನು ಹೇಳದೇ ಕೇಳದೇ ಕೈಬಿಟ್ಟಾಗ ಪ್ರತಿಕ್ರಿಯಿಸಿದ ರೀತಿ.

ಅವರು ಸಂಸದರಾಗಿ ದೆಹಲಿಯಲ್ಲಿದ್ದಾಗ, ಅವರ ಸಂಸದರ ಕ್ವಾರ್ಟರ್ಸ್ ಮೈಸೂರು ಮತ್ತು ಕರ್ನಾಟಕದಿಂದ ದೆಹಲಿಗೆ ಹೋದವರಿಗೆ ತಾತ್ಕಾಲಿಕ ತಂಗು ತಾಣವಾಗಿತ್ತು. ಅಲ್ಲಿಗೆ ಹೋದವರೆಲ್ಲರಿಗೂ ಅವರು ಎಲ್ಲಾ ರೀತಿಯಲ್ಲೂ ಸಹಾಯ ಮಾಡುತ್ತಿದ್ದರು. ಅವರ ಕ್ವಾರ್ಟರ್ಸ್‌ನಲ್ಲಿ ಬೆಳಗಿನ ಉಪಹಾರವನ್ನು 10 ಗಂಟೆಯವರೆಗೂ ಕಲ್ಪಿಸುವುದನ್ನು ನಾನು ನೋಡಿದ್ದೇನೆ. ತಮ್ಮ ಕೆಲಸಕ್ಕಾಗಿ ಅವರನ್ನು ನೋಡಲು ಬಂದವರನ್ನು ಎಷ್ಟೊಂದು ಪ್ರೀತಿ–ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು ಎನ್ನುವುದಕ್ಕೆ ನಾನು ಒಂದು ಬಾರಿ ಸಾಕ್ಷಿಯಾಗಿದ್ದೆ ಎಂತಹ ಉದಾರ ಅತಿಥೇಯ.

ಆಗ ಸಂಸದರಾಗಿದ್ದ (ಧಾರವಾಡ ದಕ್ಷಿಣದಿಂದ ಆಯ್ಕೆಯಾಗಿದ್ದ: 1984–1989) ನಮ್ಮ ಮೈಸೂರಿನ ಜನಪ್ರಿಯ ರಾಜಕಾರಣಿ (ಹಾಲಿ ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ತಂದೆ) ಅಜೀಜ್ ಸೇಠ್ ಅವರು ನನಗೆ ಮತ್ತು ಶ್ರೀನಿವಾಸ್ ಪ್ರಸಾದ್ ಅವರಿಗೆ ಆಯೋಜಿಸಿದ್ದ ವಿಶೇಷ ಭೋಜನವನ್ನು ನಾನು ನೆನಪಿಸಿಕೊಳ್ಳ ಬಯಸುತ್ತೇನೆ.

ಪ್ರಸಾದರು, ಈ ಮೊದಲು ಹೇಳಿದ ಹಾಗೆ ತುಂಬಾ ಒಳ್ಳೆಯ ಸಂಭಾಷಣಕಾರರು. ಅದೇ ರೀತಿ ಅಜೀಜ್ ಸೇಠ್ ಕೂಡ. ನಮ್ಮ ಭೋಜನವು ಬೆಳಗಿನ ಜಾವ 2.30ರವರೆಗೆ ನಡೆಯಿತು. ಹೇಳಿ–ಕೇಳಿ ದೆಹಲಿ ದೇಶದ ಶಕ್ತಿ ಕೇಂದ್ರವಲ್ಲವೇ? ಸಹಜವಾಗಿ ಸಂಸದರಿಗೆ ಇಂತಹ ಸಂದರ್ಭಗಳಲ್ಲಿ ಹಂಚಿಕೊಳ್ಳಲು ಅನೇಕ ವಿಷಯಗಳಿರುತ್ತವೆ.

2013ರಲ್ಲಿ ಹಿರಿಯ ಕಾಂಗ್ರೆಸ್ ನಾಯಕರೂ, ವಿಧಾನಸಭಾ ಸದಸ್ಯರೂ ಆಗಿದ್ದ ಶ್ರೀನಿವಾಸ ಪ್ರಸಾದ್ ಅವರು ಸಿದ್ದರಾಮಯ್ಯನವರ ಮಂತ್ರಿಮಂಡಲದಲ್ಲಿ ಕಂದಾಯ ಸಚಿವರಾಗಿದ್ದರು. ಆದರೆ, ಒಂದೆರಡು ವರ್ಷಗಳ ನಂತರ 2016ರಲ್ಲಿ ಶ್ರೀನಿವಾಸ ಪ್ರಸಾದ್ ಅವರನ್ನು ಸಂಪುಟದಿಂದ ದಿಢೀರ್ ಕೈ ಬಿಟ್ಟಾಗ ಅದು ಅವರಿಗೆ ಸ್ವಾಭಿಮಾನದ ಪ್ರಶ್ನೆಯಾಗಿತ್ತು. ತೀವ್ರವಾಗಿ ನೊಂದುಕೊಂಡರು. ನಂತರ ಅವರು ಕಾಂಗ್ರೆಸ್ ತೊರೆದು, ಬಿಜೆಪಿ ಸೇರಿದರು. ಆ ಸಂದರ್ಭದಲ್ಲಿ 2016ರ ಜೂನ್ 22 ರಂದು ನಾನು **"ಶ್ರೀನಿವಾಸಪ್ರಸಾದ್ V/S ಸಿದ್ದರಾಮಯ್ಯ : 'ದಡ ಸೇರಿದ ಮೇಲೆ ಅಂಬಿಗನ ಹಂಗೇಕೆ ಎಂಬಂತಿದೆಯಲ್ಲವೇ?"** ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ 'ಭೂ ಮಂತ್ರ' ಅಂಕಣದಲ್ಲಿ ಅಂದಿನ ವಿದ್ಯಮಾನದ ಬಗ್ಗೆ ಬರೆದಿದ್ದೆ ನಂತರ 2019ರಲ್ಲಿ ಅವರು ಬಿಜೆಪಿಯಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದರು.

ಶ್ರೀನಿವಾಸ ಪ್ರಸಾದ್ ಅವರ ಕುರಿತು 2024ರ ಮೇ 1ನೇ ತಾರೀಖಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಎಸ್. ನರೇಂದ್ರ ಅವರು ಬರೆದ 'ಅಪರೂಪದ ರಾಜಕಾರಣಿ' ಲೇಖನವನ್ನು ಓದಿದಾಗ, ಅದನ್ನು 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ'ದಲ್ಲಿ ಪ್ರಕಟಿಸಲೇಬೇಕು ಎಂದು ನನಗನಿಸಿತು. ಏಕೆಂದರೆ ಆ ಲೇಖನದ ವಿಷಯ ಶ್ರೀನಿವಾಸ್ ಪ್ರಸಾದ್‌ರ ಮೌಲ್ಯಾಧಾರಿತ, ಸ್ವಚ್ಛ ಹಾಗೂ ಪ್ರಾಮಾಣಿಕ ರಾಜಕಾರಣದ ವ್ಯಕ್ತಿತ್ವಕ್ಕೆ ಉದಾಹರಣೆ ಸಹಿತ ಕನ್ನಡಿ ಹಿಡಿದಂತಿತ್ತು. ಇದನ್ನು 'ಡೆಕ್ಕನ್ ಹೆರಾಲ್ಡ್'ನ ಅನುಮತಿಯೊಂದಿಗೆ (ಪುಟ–5) ಪ್ರಕಟಿಸಲಾಗಿದೆ. ಶ್ರೀನಿವಾಸಪ್ರಸಾದರ ಚೆನ್ನಾಗಿ ಬಲ್ಲವನಾಗಿದ್ದ ನಾನು ತುಂಬು ಮನಸ್ಸಿನಿಂದ ಈ ಲೇಖನವನ್ನು ಇಷ್ಟಪಡುತ್ತೇನೆ. ಇಂತಹ ಒಬ್ಬ ಅಪರೂಪದ ಸಜ್ಜನ ರಾಜಕಾರಣಿಯ ಬಗ್ಗೆ ಎಸ್. ನರೇಂದ್ರ ಅವರು ಬರೆದ ಲೇಖನ ಇನ್ನೂ ಹೆಚ್ಚು ಜನರಿಗೆ ತಲುಪಲಿ ಎಂಬುದು ನನ್ನ ಭಾವನೆಯೂ ಆಗಿದೆ.

ಕೊನೆಯದಾಗಿ ಒಂದು ವಿಷಾದ ಸಂಗತಿಯೆಂದರೆ ನಾನು ಶ್ರೀನಿವಾಸ ಪ್ರಸಾದ್‌ರವರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಳ್ಳಲು ಬಯಸಿದರೂ ಅದು ಸಾಧ್ಯವಾಗಲಿಲ್ಲ. ಒಬ್ಬ ಆದರ್ಶ, ಜನಪರ, ಪ್ರಜ್ಞಾವಂತ ರಾಜಕಾರಣಿ ಶ್ರೀನಿವಾಸ ಪ್ರಸಾದ್‌ರಿಗೆ ನನ್ನ ನಮನಗಳು.

E-mail:
voice@starofmysore.com

ಮೈಸೂರಿನ ಮನೋರಂಜನ್ ಸೇರಿದಂತೆ ಇತರರ ದುಷ್ಕೃತ್ಯದ ಹಿನ್ನೆಲೆ ನವದೆಹಲಿಯ ಪಾರ್ಲಿಮೆಂಟ್‌ಗೆ ಸಿಐಎಸ್‌ಎಫ್ ಭದ್ರತೆ

ನವದೆಹಲಿ, ಮೇ.3(ಬಿಎಲ್‌ಯು)–ಮೈಸೂರಿನ ಮನೋರಂಜನ್ ಸೇರಿದಂತೆ ಇತರರು ದೆಹಲಿಯ ಪಾರ್ಲಿಮೆಂಟ್ ಭವನದ ಲೋಕಸಭಾ ಕಲಾಪ ಸದನದೊಳಗೆ ಸ್ಮೋಕ್ ಬಾಂಬ್ ಸ್ಫೋಟಿಸಿದ ಪ್ರಕರಣದ ನಂತರ ಸಿಐಎಸ್‌ಎಫ್, ಸಂಸತ್ ಭವನದ ಭದ್ರತೆಯ ಉಸ್ತುವಾರಿ ವಹಿಸಿಕೊಂಡಿದೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಮೈಸೂರಿನ ಮನೋರಂಜನ್ ಸೇರಿದಂತೆ ಇತರರು ಲೋಕಸಭೆಯ ಕಲಾಪದಲ್ಲಿ ಸ್ಮೋಕ್ ಬಾಂಬ್ ಸ್ಫೋಟಿಸಿದ್ದರು.



ದೇಶದ ಭದ್ರತೆಯ ರಕ್ಷಾ ಕವಚ ವಾಗಿರುವ ಸಂಸತ್ ಭವನದಲ್ಲಿ ನಡೆದ ಈ ಘಟನೆಯಿಂದ ಇಡೀ ದೇಶವೇ ಬೆಚ್ಚಿ ಬಿದ್ದಿತ್ತು. ಭದ್ರತಾ ಲೋಪದ ಬಗ್ಗೆ ಸಮಗ್ರ ತನಿಖೆ ನಡೆಸಿದ ಗೃಹ ಇಲಾಖೆ ಆರು ದೆಹಲಿ ಪೊಲೀಸ ರನ್ನು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಅಮಾನತು ಮಾಡಿತ್ತು. ತರುವಾಯ ಸಂಸತ್ತಿನ ಭದ್ರತಾ ಉಸ್ತುವಾರಿಯನ್ನು ಸಿಐಎಸ್‌ಎಫ್‌ಗೆ ವಹಿಸಿತ್ತು. ಈ ಹಿನ್ನೆಲೆಯಲ್ಲಿ ಸಿಐಎಸ್‌ಎಫ್ (ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್) ಈಗ ಸಂಸತ್ತಿನ ಭದ್ರತೆಯ ಉಸ್ತುವಾರಿ ವಹಿಸಿ ಕೊಂಡಿದೆ. ರಕ್ಷಣಾ ವಿಷಯದಲ್ಲಿ ಉನ್ನತ ತರಬೇತಿ ಪಡೆದಿರುವ 75 ಸಿಐಎಸ್‌ಎಫ್ ಸಿಬ್ಬಂದಿಯ ಭದ್ರತೆಗೆ ನಿಯೋಜಿಸಲಾಗಿದೆ.

ಈ ತನಕ ಸಂಸತ್ತಿನ ಭದ್ರತೆಯ ಉಸ್ತುವಾರಿ ವಹಿಸಿಕೊಂಡಿದ್ದ ದೆಹಲಿ ಪೊಲೀಸರನ್ನು ಭದ್ರತಾ ಕರ್ತವ್ಯದಿಂದ ಮುಕ್ತಗೊಳಿಸಲಾಗಿದೆ. ಸಂಸತ್ತಿಗೆ ಸಂದರ್ಶಕರು ಹಾಗೂ ಗಣ್ಯರಿಗೆ ಪಾಸ್ ನೀಡುವುದು, ಸ್ಕ್ಯಾನ್ ಮಾಡುವುದು ಸೇರಿದಂತೆ ಹಲವು ಸ್ಥಳಗಳಿಗೆ ಜವಾಬ್ದಾರಿ ಯುತ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ಇನ್ನು ಮುಂದೆ ಸಿಐಎಸ್‌ಎಫ್ ಸಿಬ್ಬಂದಿ ಸಂಸತ್ತಿನಲ್ಲಿ ಜನರ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಲಿದ್ದಾರೆ.

ದೆಹಲಿಯ ಸಂಸತ್ ಭವನದ ಮೇಲೆ 2001, ಡಿಸೆಂಬರ್ 13 ರಂದು ಪಾಕಿಸ್ತಾನದ ಲಷ್ಕರ್–ಎ–ತೋಯ್ಬಾ ಮತ್ತು ಜೈಶ್–ಎ–ಮೊಹಮ್ಮದ್ ಭಯೋತ್ಪಾದಕರು ದಾಳಿ ಮಾಡಿದ್ದರು. ತರುವಾಯ ಕಳೆದ ಡಿಸೆಂಬರ್‌ನಲ್ಲಿ ಲೋಕಸಭೆಯ ಕಲಾಪದೊಳಗೆ ಮನೋ ರಂಜನ್ ಮತ್ತು ಇತರರು ಸ್ಮೋಕ್ ಬಾಂಬ್ ಸ್ಫೋಟಿಸಿದ್ದರು. ಮುಂದೆ ಇಂತಹ ಕೃತ್ಯಗಳು ನಡೆಯದಂತೆ ಭದ್ರತೆಯಲ್ಲಿ ತರಬೇತಿ ಪಡೆದಿರುವ ಸಿಐಎಸ್‌ಎಫ್ ಸಿಬ್ಬಂದಿ ಸಂಸತ್ತನ್ನು ಕಾಯಲಿದ್ದಾರೆ.

ನಾಳೆ ಕನ್ನಡ ಚಿತ್ರಗೀತೆ ಕಾರ್ಯಕ್ರಮ

ಮೈಸೂರು, ಮೇ.3(ಜಿಎ)–ಅಮೃತ ವರ್ಷಿಣಿ ಗಾನವೃಂದದ ವತಿಯಿಂದ ಮೇ 5ರಂದು ಸಂಜೆ 5.30ಕ್ಕೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಹಳೇ ಬೇರು, ಹೊಸ ಚಿಗುರು' ಎಂಬ ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಅಮೃತೇಶ್ ಮಾತನಾಡಿ, ಕಾರ್ಯಕ್ರಮದಲ್ಲಿ ಸುಮಾರು 34 ಚಿತ್ರಗೀತೆಗಳನ್ನು ಒಟ್ಟು 11 ಮಂದಿ ಗಾಯಕರು ಪ್ರಸ್ತುತ ಪಡಿಸಲಿದ್ದಾರೆ. ಇದು ಕೊರೋಕೆ ಕಾರ್ಯಕ್ರಮವಾಗಿದ್ದು, ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಸ್.ಕೋಮಲಾ, ಕನಕರಾಜು, ಬಾಲುಪ್ರಕಾಶ್ ಉಪಸ್ಥಿತರಿದ್ದರು.

ಮೈಸೂರು ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಕ್ರಮ ಕೈಗೊಳ್ಳಿ

ಪಾಲಿಕೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸೂಚನೆ

ಮೈಸೂರು, ಮೇ 3(ಆರ್‌ಕೆ)–ಸ್ವಚ್ಛ ನಗರ ಮೈಸೂರನ್ನು ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಪರಸ್ಪರ ಸಮನ್ವಯದೊಂದಿಗೆ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳಿಗೆ ಇಂದಿಲ್ಲಿ ಸೂಚನೆ ನೀಡಿದ್ದಾರೆ.

ಘನ ತ್ಯಾಜ್ಯ ನಿರ್ವಹಣೆ ಕುರಿತಂತೆ ಮೈಸೂರು ಮಹಾನಗರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ಈಗಾಗಲೇ ಪ್ಲಾಸ್ಟಿಕ್ ನಿಷೇಧ ಮಾಡಿರುವುದರಿಂದ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಮೂಲಕ ಮೈಸೂರನ್ನು ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿಸಬೇಕೆಂದು ತಾಕೀತು ಮಾಡಿದರು. ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವಿಂಗಡಿಸಿ ಸಂಗ್ರಹ ಮಾಡಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಿ ನಗರದ ಯಾವ ಸ್ಥಳದಲ್ಲೂ ಕಸದ ರಾಶಿ ಕಾಣಬಾರದು. ತ್ಯಾಜ್ಯ ಉತ್ಪತ್ತಿಯಾಗುತ್ತಿರುವ ಮೂಲ ತಿಳಿದು ಅಲ್ಲಿಂದಲೇ ನಿಯಂತ್ರಿಸಲು ಪ್ರಯತ್ನಿಸಿ ಎಂದು ಅವರು ಸಲಹೆ ನೀಡಿದರು.



ಮೈಸೂರು ಮಹಾನಗರಪಾಲಿಕೆ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಘನ ತ್ಯಾಜ್ಯ ನಿರ್ವಹಣೆ ಸಂಬಂಧ ಶುಕ್ರವಾರ ಅಧಿಕಾರಿಗಳ ಸಭೆ ನಡೆಸಿದರು.

ಮುಂದಿನ ವರ್ಷ ಸ್ವಚ್ಛ ಭಾರತ ಸಮೀಕ್ಷೆಯಲ್ಲಿ ಮೈಸೂರು ನಗರ ಪ್ರಥಮ ಸ್ವಚ್ಛ ನಗರ ಪ್ರಶಸ್ತಿಗೆ ಭಾಜನವಾಗಬೇಕು. ಆ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದ ಅವರು, ಕಸ ವಿಂಗಡಣೆ, ಪ್ಲಾಸ್ಟಿಕ್ ನಿಷೇಧ ಕುರಿತಂತೆ ಜನರಿಗೆ ಅರಿವು ಮೂಡಿಸಬೇಕು. ಶುಚಿತ್ವಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ತಿಳಿಸಿದರು. ಎಲ್ಲಾ 65 ವಾರ್ಡ್‌ಗಳಲ್ಲಿ ಆಯಾಯ ಪಾಲಿಕೆ ವಲಯಾಧಿಕಾರಿಗಳು ಕಟ್ಟು ನಿಟ್ಟಾಗಿ ಸ್ವಚ್ಛತಾ ಕಾರ್ಯ ಕೈಗೊಂಡು ಮನೆ ಮನೆಯಿಂದ ನಿತ್ಯ ಕಸ ಸಂಗ್ರಹಿಸಿ ವಿಲೇವಾರಿ ಮಾಡುವ ಮೂಲಕ ಇಡೀ ನಗರವನ್ನು ಸ್ವಚ್ಛವಾಗಿರಿಸಲು ಪ್ರಯತ್ನಿಸಬೇಕು. ಈ ಬಾರಿ ದಸರಾ ಮಹೋತ್ಸವಕ್ಕೂ ಮುನ್ನವೇ ಸ್ವಚ್ಛವಾಗಿರಿಸಿ ದೇಶ–ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಮುಜುಗರವಾಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಕಸ ಸಂಗ್ರಹ ಮಾಡುವ ಸ್ಥಳದಲ್ಲಿ ದುರ್ವಾಸನೆ ಹರಡದಂತೆ ನೋಡಿ ಕೊಳ್ಳಬೇಕು. ಪರಿಸರಕ್ಕೆ ಹಾನಿಯಾಗದಂತೆ ವೈಜ್ಞಾನಿಕ ವಿಲೇವಾರಿಗೆ ಕ್ರಮವಹಿಸಿ ಎಂದು ಡಾ.ರಾಜೇಂದ್ರ ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ. ಎನ್.ಎನ್. ಮಧು, ಮುಡಾ ಆಯುಕ್ತ ದಿನೇಶ್ ಕುಮಾರ್, ಪಾಲಿಕೆ ಉಪ ಆಯುಕ್ತರಾದ ಸಿಂಧು, ಹೆಚ್ಚುವರಿ ಆಯುಕ್ತರಾದ ಕುಸುಮಾ ಕುಮಾರಿ, ಹಿರಿಯ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶ್ರೀನಿವಾಸ ಪ್ರಸಾದ್ ಅಪರೂಪದ ರಾಜಕಾರಣಿ

ಎಸ್.ನರೇಂದ್ರ

ಇತ್ತೀಚೆಗೆ (ಏಪ್ರಿಲ್ 29, 2024) ನಿಧನರಾದ ಸಂಸದ ವಿ.ಶ್ರೀನಿವಾಸ ಪ್ರಸಾದ್, ದಲಿತರು ಮತ್ತು ತಳಮಟ್ಟದವರ ಮುಖವಾಣಿಯಾಗಿದ್ದರು. ಅತ್ಯಂತ ಶಿಸ್ತಿನ ಆಡಳಿತ, ನಿಷ್ಠುರತೆಗೆ ಅವರು ಹೆಸರಾಗಿದ್ದರು. ಸಾಮಾಜಿಕ ನ್ಯಾಯದಲ್ಲಿ ಅತ್ಯಂತ ಬದ್ಧತೆ ಹೊಂದಿದ್ದಂತಹವರು. ಪಕ್ಷಾತೀತವಾಗಿ ಎಲ್ಲಾ ಪಕ್ಷದ ನಾಯಕರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದರು.

ಶ್ರೀನಿವಾಸ ಪ್ರಸಾದ್ ಅವರೊಂದಿಗೆ ನನ್ನ ಮುಖಾಮುಖಿ ಭೇಟಿಯು ಬ್ಯಾಂಕರ್ ಆಗಿ ಅವಿಸ್ಮರಣೀಯ ನೆನಪು.

1990ರಲ್ಲಿ ಮೈಸೂರಿನ ನಮ್ಮ ಹೌಸಿಂಗ್ ಫೈನಾನ್ಸ್ ಶಾಖೆಗೆ ಅವರು ಭೇಟಿ ನೀಡಿದ್ದರು. ಅಲ್ಲದೆ, 5 ಲಕ್ಷ ರೂ. ಸಾಧಾರಣ ಮೊತ್ತದ ಸಾಲ ನೀಡುವಂತೆ ಕೋರಿಕೆ ಸಲ್ಲಿಸಿದ್ದರು.

ಇದು ಯಾವುದೇ ಪೂರ್ವ ಮಾಹಿತಿ ಇಲ್ಲದ ಅವರ ಭೇಟಿಯಾಗಿತ್ತು. ಈ ವೇಳೆ ಅವರು ಹಾಲಿ ಸಂಸದರಾಗಿ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ಮನೆ ಖರೀದಿಸಲು ಸಾಲಕ್ಕೆ ಕೋರಿಕೆ ಸಲ್ಲಿಸಿದ್ದು ನನ್ನನ್ನು ದಿಗ್ಭ್ರಮೆಗೊಳಿಸಿತು.

ಸಂಸದರ ಸ್ಥಾನಮಾನ ಹೊಂದಿದ್ದರೂ ಪ್ರಸಾದ್ ಯಾವುದೇ ವಿಶೇಷ ಆತಿಥ್ಯವನ್ನು ತಿರಸ್ಕರಿಸುತ್ತಿದ್ದುದ್ದು ಮಾತ್ರವಲ್ಲ, ಸಾಲ ಮಂಜೂರಾತಿಗೆ ಪ್ರಮಾಣೀಕೃತ ಕಾರ್ಯವಿಧಾನವನ್ನೇ ಅನುಸರಿಸಬೇಕೆಂದು ಬಯಸುತ್ತಿದ್ದರು. ನಾವು ಸಾಲ ಮಂಜೂರಾತಿ ಪ್ರಕ್ರಿಯೆಯನ್ನು ತ್ವರಿತಗೊಳಿಸಿದೆವು ಮತ್ತು ಮೂರು ದಿನಗಳಲ್ಲೇ ಸಾಲ ಮಂಜೂರು ಆಯಿತು. ಜೊತೆಗೆ ಆಸ್ತಿ ನೋಂದಣಿಗೆ ಸಮಯವೂ ನಿಗದಿಯಾಯಿತು.

ವಹಿವಾಟಿನ ಕುರಿತು ಮಾರಾಟಗಾರರು ಸಬ್‌ರಿಜಿಸ್ಟ್ರಾರ್ ಕಚೇರಿಯನ್ನು ಸಂಪರ್ಕ ಮಾಡಿದ್ದರು. ಈ ಕಾರಣದಿಂದ ಸಂಸದರ ಅನುಕೂಲಕ್ಕಾಗಿ ನಮ್ಮ ಶಾಖೆಯ ಕಚೇರಿಯಲ್ಲಿ ನೋಂದಣಿ ವಿಧಿವಿಧಾನಗಳನ್ನು ಪೂರ್ಣಗೊಳಿಸಬಹುದೆಂದು ತಿಳಿಸಲು ಸಬ್ ರಿಜಿಸ್ಟ್ರಾರ್ ಕಚೇರಿ ಅಧಿಕಾರಿಗಳು ನಮ್ಮ ಬ್ಯಾಂಕ್ ಅನ್ನು ಸಂಪರ್ಕಿಸಿದರು. ಆದರೆ ಕಂದಾಯ ಇಲಾಖೆ ಮಾಡಿದ ಈ ವಿಶೇಷ ವ್ಯವಸ್ಥೆಯನ್ನು ತಿಳಿದು ಶ್ರೀನಿವಾಸ ಪ್ರಸಾದ್ ಸಿಟ್ಟಿಗೆದ್ದರು. ಅವರು, ಇಂತಹ ವಿಶೇಷ ವ್ಯವಸ್ಥೆಯನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಜೊತೆಗೆ ಯಾವುದೇ ವಿಧಿವಿಧಾನಗಳಲ್ಲಿ ವಿನಾಯಿತಿ ನೀಡಬಾರದೆಂದೂ ಅವರು ಖಂಡತುಂಡವಾಗಿ ಹೇಳಿದರು. ಅವರ ಇಚ್ಛೆಯಂತೆ ನಾವು ವ್ಯವಹಾರವನ್ನು ಪೂರ್ಣಗೊಳಿಸಿದೆವು.

ನಿಜಕ್ಕೂ ಅವರದು ಅಪರೂಪದ ವ್ಯಕ್ತಿತ್ವ! ಬಹುಮುಖ್ಯವಾಗಿ ಅವರ ಕಾರ್ಯದರ್ಶಿಗಳು ನಿಯಮಿತವಾಗಿ ಸಾಲ ಮರುಪಾವತಿಯ ಪ್ರಕ್ರಿಯೆಯನ್ನು ಪರಿಶೀಲಿಸುತ್ತಿದ್ದರು. ಸಾಲದ ಮೊತ್ತ ಸಂಪೂರ್ಣ ಮರುಪಾವತಿ ಆಗುವವರೆಗೂ ಇದು ಮುಂದುವರೆಯಿತು! ಶ್ರೀನಿವಾಸ ಪ್ರಸಾದ್ ಅವರು ಪಾಲಿಸಿದಂತಹ ಮೌಲ್ಯಗಳು ಇವು.

ಪ್ರಸಾದ್ ಅವರ ಸಹಾನುಭೂತಿ ಗುಣವೂ ಅಷ್ಟೇ ಗಮನಾರ್ಹ. ಆಸ್ತಿ ನೋಂದಣಿ ನಂತರ ಅವರು ತಮ್ಮ ಕೃತಜ್ಞತೆ ಸಲ್ಲಿಸಲು ನಮ್ಮ ಕಚೇರಿಗೆ ಭೇಟಿ ನೀಡಿದ್ದರು. ಈ ವೇಳೆ ಸಿಬ್ಬಂದಿಗೆ ಸಿಹಿ ಸಹ ತಂದಿದ್ದರು. ಈ ವೇಳೆ ಸಿಬ್ಬಂದಿಯೊಡನೆ ಮಾಮೂಲಿನಂತೆ ಮಾತುಕತೆಯಲ್ಲಿ ತೊಡಗಿದ ಪ್ರಸಾದ್ ಅವರು, ಬಹುತೇಕ ಸಿಬ್ಬಂದಿ ಸಣ್ಣಪುಟ್ಟ ಬಾಡಿಗೆ ಮನೆಗಳಲ್ಲಿ ವಾಸವಾಗಿದ್ದು, ಮದುವೆಯಾಗದಂತಹವರು ಊಟ–ತಿಂಡಿಗಾಗಿ ಹೋಟೆಲ್‌ಗಳನ್ನು ಆಶ್ರಯಿಸಿದ್ದಾರೆ ಎಂಬುದನ್ನು ಅರಿತರು. ಅಲ್ಲದೆ, ಹೋಟೆಲ್‌ಗಳಲ್ಲಿ ಊಟ–ತಿಂಡಿ ತಿನ್ನುತ್ತಿರುವುದೇಕೆ? ಸ್ವತಃ ಆಹಾರ ತಯಾರಿಸಬಹುದಲ್ಲವೇ? ಎಂದು ಕೇಳಿದರು. ಕುಟುಂಬ ಹೊಂದಿಲ್ಲದ ಹಿನ್ನೆಲೆಯಲ್ಲಿ ಏಜೆನ್ಸಿಗಳು ಗ್ಯಾಸ್ ಸಂಪರ್ಕ ನೀಡಿಲ್ಲ ಎಂದು ಸಿಬ್ಬಂದಿ ಅವರಲ್ಲಿ ಅಲವತ್ತುಕೊಂಡರು.

ಆ ಕೂಡಲೇ ಲ್ಯಾಂಡ್‌ಲೈನ್ ಫೋನ್ ಎತ್ತಿಕೊಂಡ ಪ್ರಸಾದ್ ಅವರು, ಭಾರತ್ ಗ್ಯಾಸ್ ಏಜೆನ್ಸಿಯನ್ನು ಸಂಪರ್ಕಿಸಿ ಸಿಬ್ಬಂದಿಯ ಸಂಕಷ್ಟವನ್ನು ವಿವರಿಸಿದರು. ಇದರ ಪರಿಣಾಮ ಶೀಘ್ರದಲ್ಲೇ ಸಿಬ್ಬಂದಿ ತಮ್ಮ ಗ್ಯಾಸ್ ಸಂಪರ್ಕ ಪಡೆದರಲ್ಲದೆ, ಮನೆಯಲ್ಲಿ ತಾವೇ ಆಹಾರ ತಯಾರಿಸಿ ತಾಜಾತನದ ಆರೋಗ್ಯಕರ ಆಹಾರ ಸೇವಿಸಲು ಸಾಧ್ಯವಾಯಿತು. ಇದಕ್ಕಾಗಿ ನಮ್ಮ ಸಿಬ್ಬಂದಿ ಅವರಿಗೆ ಅತೀವ ಧನ್ಯವಾದ ಸಲ್ಲಿಸಿದಾಗ, ನನ್ನ ವ್ಯಾಪ್ತಿ ಮೀರಿ ನಾನೇನೂ ಮಾಡಿಲ್ಲ ಎಂದು ಸಂಸದರು ಅತ್ಯಂತ ನಯವಾಗಿ ಪ್ರತಿಕ್ರಿಯಿಸಿದರು.

2000ನೇ ಇಸವಿಯಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಪ್ರಸಾದ್ ಅವರು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವರಾಗಿದ್ದರು. ಈ ಅವಧಿಯಲ್ಲಿ ನಮ್ಮ ಹೌಸಿಂಗ್ ಫೈನಾನ್ಸ್ ಕಂಪನಿಗೆ ಐಎಸ್‌ಓ(ISO) ಪ್ರಮಾಣೀಕರಣವನ್ನು ಪಡೆಯಲು ನಾವು ಅವರ ಸಹಾಯವನ್ನು ಕೋರಿದ್ದೆವು. ಕಾರಣ ನಮ್ಮದು ಸೇವಾ ಉದ್ಯಮವಾಗಿತ್ತು. ಪ್ರಸಾದ್ ಅತ್ಯಂತ ತಾಳ್ಮೆಯಿಂದ ನಮ್ಮ ಅಹವಾಲು ಆಲಿಸಿದರು. ಅಲ್ಲದೆ, ಅವರ ಸಚಿವಾಲಯದ ಸಹೋದ್ಯೋಗಿಗಳು, ಕಾರ್ಯದರ್ಶಿಗಳನ್ನು ಕರೆಯಿಸಿ, ನಮಗೆ ಪ್ರಸ್ತುತಿ ನೀಡಲು ಹೇಳಿದರು.

ಇದಾದ ಆರು ತಿಂಗಳೊಳಗೆ ಸಂಬಂಧಿಸಿದ ಸರ್ಕಾರಿ ಇಲಾಖೆಯು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಸಹಯೋಗದೊಂದಿಗೆ ಸೇವಾ ಉದ್ಯಮಕ್ಕೆ ಐಎಸ್‌ಓ ಪ್ರಮಾಣೀಕರಣ ನೀಡುವ ಸಂಬಂಧ ಮಾರ್ಗಸೂಚಿಗಳನ್ನು ಹೊರತಂದಿತು. ಎರಡು ವರ್ಷಗಳಲ್ಲಿ ನಮ್ಮ ಸಂಸ್ಥೆಯು ಐಎಸ್‌ಓ ಪ್ರಮಾಣೀಕರಣವನ್ನು ಪಡೆದ ದೇಶದ ಮೊಟ್ಟ ಮೊದಲ ಹೌಸಿಂಗ್ ಫೈನಾನ್ಸ್ ಕಂಪನಿಯಾಗಿ ಹೊರಹೊಮ್ಮಿತು.

ಶ್ರೀನಿವಾಸ ಪ್ರಸಾದ್ ಅವರ ಆಡಳಿತಾತ್ಮಕ ಸಾಮರ್ಥ್ಯ ಮತ್ತು ಚಾಣಾಕ್ಷತೆಯ ಚಿತ್ರಣವಿದು. ಈ ಪ್ರಸಂಗಗಳು ನನ್ನಂತಹ ಸಾಮಾನ್ಯನ ಜನರ ಮೇಲೆ ಪ್ರಸಾದ್ ಪ್ರಭಾವದ ಒಂದು ಪುಟ್ಟ ಪ್ರಸಂಗ ಮಾತ್ರ.

ಜಾತಿ ಮತದ ಭೇದವಿಲ್ಲದೆ, ಕಟ್ಟಕಡೆಯವರ ಪರವಾಗಿ ಅವರ ಹೋರಾಟ ಸಮಾಜದಲ್ಲಿ ಅಚ್ಚಳಿಯದ ಛಾಪು ಮೂಡಿಸಿರುವುದಂತೂ ಖಚಿತ. ಪ್ರಸಾದ್ ಅವರ ನಿಧನದಿಂದ ನಾವು ಒಬ್ಬ ತತ್ವನಿಷ್ಠ ರಾಜಕಾರಣಿ ಕಳೆದುಕೊಂಡಿದ್ದೇವೆ. ಹಿಂದುಳಿದವರ ಪರವಾದ ಧ್ವನಿಯಾಗಿದ್ದ ಅವರು ಹಲವರಿಗೆ ಸ್ಫೂರ್ತಿಯಾಗಬೇಕು.

(ಕೃಪೆ; ಡೆಕ್ಕನ್ ಹೆರಾಲ್ಡ್)



ವಿ.ಶ್ರೀನಿವಾಸಪ್ರಸಾದ್ ಅವರ ಜಯಲಕ್ಷ್ಮಿಪುರಂ ನಿವಾಸ (ಸಂಗ್ರಹ ಚಿತ್ರ)

ಬಿರುಗಾಳಿ ಮಳೆಗೆ ಮೈಸೂರು ತತ್ತರ!

ಮೂರನೇ ಪುಟದಿಂದ



ಜನರಷ್ಟೇ ಅಲ್ಲ ಬಿಡಾಡಿ ರಾಸುಗಳು, ಶ್ವಾನಗಳು ಬಿರುಗಾಳಿಯಿಂದ ದಿಕ್ಕಾಪಾಲಾಗಿ ಓಡುತ್ತಿದ್ದವು. ಗೂಡಿನತ್ತ ಸಾಗುತ್ತಿದ್ದ ಪಕ್ಷಿಗಳೂ ಹಾರಲಾಗದೆ ಒದ್ದಾಡುತ್ತಿದ್ದವು. ಮನೆಯೊಳಗಿದ್ದವರೂ ಬಿರುಗಾಳಿ ರಭಸಕ್ಕೆ ಕೆಲಕ್ಷಣ ಬೆಚ್ಚಿದರು. ಒಟ್ಟಾರೆ ಭಾರೀ ಬಿರುಗಾಳಿಯಿಂದ ಮೈಸೂರಿನಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಧರೆಗುರುಳಿದ ಮರಗಳು: ಭಾರೀ ಬಿರುಗಾಳಿಯಿಂದ ಕೆ.ಆರ್.ಆಸ್ಪತ್ರೆ ಬಳಿ ಧನ್ವಂತ್ರಿ ರಸ್ತೆ ಅಗ್ರಹಾರದ ಪಾಠಶಾಲೆ ವೃತ್ತದ ಬಳಿ ಜೆಎಲ್‌ಬಿ ರಸ್ತೆ, ಜಯನಗರದ ರಾಮ ಮಂದಿರದ ಬಳಿ, ಕುಕ್ಕರಹಳ್ಳಿ, ಜಗನ್ಮೋಹನ ಅರಮನೆ ಬಳಿ, ಗದ್ದಿಗೆ ಮುಖ್ಯರಸ್ತೆ, ಮಹಾಬೋಧಿ ಶಾಲೆ ಬಳಿ, ಹೀಗೆ ನಗರದ ಹತ್ತಾರು ಕಡೆ ಮರಗಳು ಧರೆಗುರುಳಿವೆ. ಕಾಳಿದಾಸ ರಸ್ತೆ, ಬನ್ನಿಮಂಟಪದ ಶಿವರಾತ್ರೀಶ್ವರ ನಗರ, ವಾಣಿವಿಲಾಸ ವಾಟರ್ ವರ್ಕ್ಸ್, ವಿಜಯನಗರ ರೈಲ್ವೆ ಬಡಾವಣೆ, ಗೋಕುಲಂ, ಜಯಲಕ್ಷ್ಮೀಪುರಂ ರಾಘವೇಂದ್ರ ಮಠದ ಬಳಿ, ಶ್ರೀರಾಂಪುರ ರಿಂಗ್ ರಸ್ತೆ, ಲಕ್ಷ್ಮೀವಿಲಾಸ ರಸ್ತೆ, ರಾಮಸ್ವಾಮಿ ವೃತ್ತದ ಬಳಿ, ಸಬರ್ಬನ್ ಬಸ್ ನಿಲ್ದಾಣ, ಮಿರ್ಜಾ ರಸ್ತೆ, ಇಟ್ಟಿಗೆಗೂಡು ಪೋಸ್ಟ್ ಆಫೀಸ್, ಹಾರ್ಡಿಂಜ್ ವೃತ್ತ, ರಾಜೀವ್‌ನಗರ, ಜೆ.ಪಿ.ನಗರ, ಸರಸ್ವತಿಪುರಂ, ಟಿ.ಕೆ.ಲೇಔಟ್ ಗಣೇಶ್ ಭಂಡಾರ್, ಯಾದವಗಿರಿ, ಸಿದ್ಧಾರ್ಥನಗರ, ಬೃಂದಾವನ ಬಡಾವಣೆ, ಮೇಟಗಳ್ಳಿ ಪೊಲೀಸ್ ಠಾಣೆ, ಕುವೆಂಪುನಗರ, ರಾಮಕೃಷ್ಣನಗರ, ಕಲಾಮಂದಿರ, ವಿದ್ಯಾರಣ್ಯಪುರಂ, ಜಲಪುರಿ, ನಿವೇದಿತನಗರ, ಮಂಡಿ ಮೊಹಲ್ಲಾ, ಬಂಬೂ ಬಜಾರ್, ವಿಶ್ವೇಶ್ವರನಗರ, ಕಾಶಿಪತಿ ಅಗ್ರಹಾರ, ಆನಂದನಗರ, ಎನ್.ಆರ್.ಮೊಹಲ್ಲಾ ಸೇರಿದಂತೆ ನಗರದೆಲ್ಲೆಡೆ ನೂರಕ್ಕೂ ಹೆಚ್ಚು ಕೊಂಬೆಗಳು ಮುರಿದು ಬಿದ್ದಿವೆ.

ಎಲ್ಲೆಡೆ ಟ್ರಾಫಿಕ್ ಜಾಮ್: ಹಲವೆಡೆ ಮರ ಹಾಗೂ ಕೊಂಬೆಗಳು ಮುರಿದು ಬಿದ್ದಿದ್ದರಿಂದ ಟ್ರಾಫಿಕ್ ಜಾಮ್ ಉಂಟಾಗಿತ್ತು ಸಬರ್ಬನ್ ಬಸ್ ನಿಲ್ದಾಣದ ಬಳಿ ಮರದ ಭಾರೀ ಕೊಂಬೆ ಮುರಿದು ಬಿದ್ದು, ವಾಹನಗಳು ಸಾಲುಗಟ್ಟಿ ನಿಂತಿದ್ದವು. ಜಗನ್ಮೋಹನ ಅರಮನೆ ಬಳಿಯೂ ಕೆಲ ಕಾಲ ವಾಹನ ದಟ್ಟಣೆ ಉಂಟಾಗಿತ್ತು. ಬಿರುಗಾಳಿಯಲ್ಲಿ ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ದಿಕ್ಕು ತೋಚದೆ ನಿಂತಲ್ಲೇ ನಿಂತಿದ್ದರು. ಮರ ಹಾಗೂ ಕೊಂಬೆಗಳು ಮುರಿದ ಕಡೆಯಲ್ಲೆಲ್ಲಾ ವಾಹನ ದಟ್ಟಣೆ. ಇದರಿಂದ ಸಾರ್ವಜನಿಕರು ರೋಸಿ ಹೋದರು. ತಕ್ಷಣಕ್ಕೆ ಮರ ತೆರವು ಮಾಡಲು ಸಾಧ್ಯವಾಗದ ಕಾರಣ ವಾಹನ ದಟ್ಟಣೆ ನಿಯಂತ್ರಿಸಲು ಸಂಚಾರ ಪೊಲೀಸರು ಹರಸಾಹಸಪಟ್ಟರು.

ಹೊಳೆಯಂತಾದ ತಗ್ಗು ಪ್ರದೇಶ: ಬಿರುಗಾಳಿಯೊಂದಿಗೆ ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಭಾರೀ ಮಳೆಯಿಂದ ರಸ್ತೆಯ ಇಕ್ಕೆಲಗಳಲ್ಲಿ ಕಾಲುವೆಯಂತೆ ನೀರು ಹರಿಯಿತು. ತಗ್ಗು ಪ್ರದೇಶಗಳಲ್ಲಿ ಭಾರೀ ಹೊಂಡವೇ ನಿರ್ಮಾಣವಾಗಿತ್ತು. ಎಂದಿನಂತೆ ದೊಡ್ಡ ಗಡಿಯಾರ ಬಳಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಿತು. ನೀರಿನ ರಭಸದಿಂದ ವಾಹನಗಳ ಸಂಚಾರ ದುಸ್ತರವಾಗಿತ್ತು. ರಸ್ತೆಯಲ್ಲಿ ಮಂಡಿಯುದ್ದಕ್ಕೆ ನೀರು ಹರಿಯುತ್ತಿದ್ದ ಕಾರಣ ಪಾದಚಾರಿಗಳು ಕಬ್ಬಿಣದ ಗ್ರಿಲ್ ಹಿಡಿದುಕೊಂಡು ತಡೆಗೋಡೆ ಮೇಲೆ ನಡೆದು ಸಾಗುವುದು ಕಂಡುಬಂದಿತು. ಹೆಬ್ಬಾಳು ರಿಂಗ್ ರಸ್ತೆಯಲ್ಲಿ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಹಂಚ್ಯಾ–ಸಾತಗಳ್ಳಿ ಬಡಾವಣೆಯಲ್ಲಿ ಚರಂಡಿ ನಿರ್ವಹಣೆ ಮಾಡದ ಕಾರಣ ನೀರು ಸರಾಗವಾಗಿ ಹರಿಯದೆ ರಸ್ತೆಯಲ್ಲೆಲ್ಲಾ ನಿಂತಿತ್ತು. ನಿರ್ವಹಣೆ ಕೊರತೆಯಿಂದ ರಾಜಕಾಲುವೆ ತುಂಬಿ ಹರಿಯುತ್ತಿತ್ತು.

ಹೈರಾಣಾದ ಮಹಾನಗರ ಪಾಲಿಕೆ: ಭಾರೀ ಬಿರುಗಾಳಿಯ ಅರ್ಧ ಗಂಟೆ ಆರ್ಭಟಕ್ಕೆ ಮೈಸೂರು ತತ್ತರಿಸಿದರೆ ಅತ್ತ ಮಹಾನಗರ ಪಾಲಿಕೆ ಹೈರಾಣಾಗಿ ಹೋಯಿತು. ಮರ, ಕೊಂಬೆ, ವಿದ್ಯುತ್ ಕಂಬ ಬಿದ್ದಿವೆ ಎಂದು ಪಾಲಿಕೆ ಕಂಟ್ರೋಲ್ ರೂಂಗೆ ದೂರುಗಳ ಸುರಿಮಳೆಯೇ ಬಂದವು. ಏಕಕಾಲಕ್ಕೆ ನೂರಾರು ದೂರುಗಳು ಬಂದಿದ್ದರಿಂದ ಅಭಯ ತಂಡದವರೂ ರೋಸಿ ಹೋಗಿದ್ದರು. ಮೊದಲು ಪ್ರಮುಖ ರಸ್ತೆಗಳಲ್ಲಿ ಬಿದ್ದಿದ್ದ ಮರ ಹಾಗೂ ಕೊಂಬೆಗಳ ತೆರವಿಗೆ ಮುಂದಾದರು. ರಾತ್ರಿ ಬಹು ಹೊತ್ತಿನವರೆಗೂ ಅಭಯ ಕಾರ್ಯಾಚರಣೆ ಮುಂದುವರೆದಿತ್ತು.

ರಸ್ತೆಗಿಳಿದ ಮಾಜಿ ಸದಸ್ಯರು: ಕಾರ್ಪೊರೇಟರ್‌ಗಳು ಮಾಜಿಗಳಾಗಿ ಆರೇಳು ತಿಂಗಳು ಕಳೆದಿವೆ. ಆದರೆ ಸಮಸ್ಯೆಯಾದಾಗ ಈಗಲೂ ಜನ ಪ್ರತಿನಿಧಿಗಳನ್ನೇ ಸಂಪರ್ಕಿಸಿ ತಿಳಿಸುತ್ತಿದ್ದಾರೆ. ಹಾಗೆಯೇ ಭಾರೀ ಬಿರುಗಾಳಿ ಮಳೆಯಿಂದ ಅವಾಂತರವಾಗಿದ್ದರ ಬಗ್ಗೆ ಜನರು ತಮ್ಮನ್ನು ಸಂಪರ್ಕಿಸುತ್ತಿದ್ದಂತೆ ಮಾಜಿ ಕಾರ್ಪೊರೇಟರ್‌ಗಳು ರಸ್ತೆಗಿಳಿದರು. ಸಮಸ್ಯೆ ಉಂಟಾದ ಸ್ಥಳಗಳಿಗೆ ತೆರಳಿ ಅಧಿಕಾರಿಗಳು ಹಾಗೂ ಅಭಯ ತಂಡದವರನ್ನು ಸಂಪರ್ಕಿಸಿ, ಪರಿಹಾರ ಕಾರ್ಯಕ್ಕೆ ಮುಂದಾಗಿದ್ದರು.

ತೆರವಿಗೆ ಖಾಕಿ ನೆರವು: ನೂರಾರು ಕಡೆ ಮರದ ಕೊಂಬೆಗಳು ರಸ್ತೆಗೆ ಬಿದ್ದಿದ್ದರಿಂದ ನಗರ ಪಾಲಿಕೆ ಅಭಯ ತಂಡದವರು ಅಸಹಾಯಕರಾಗಿದ್ದರು. ಪರಿಣಾಮ ಎಲ್ಲೆಡೆ ಸಂಚಾರ ಅಸ್ತವ್ಯಸ್ತವಾಗಿತ್ತು. ಸಂಚಾರ ಪೊಲೀಸರು ಬ್ಯಾರಿಕೇಡ್ ಅಳವಡಿಸಿ, ಪರ್ಯಾಯ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಸೂಚನೆ ನೀಡುತ್ತಿದ್ದರೆ ಖಾಕಿ(ಎಲ್&ಓ) ಪೊಲೀಸರು ಸಾರ್ವಜನಿಕರ ನೆರವಿನೊಂದಿಗೆ ಕೊಂಬೆಗಳನ್ನು ರಸ್ತೆಯಿಂದ ತೆರವುಗೊಳಿಸಿದರು.


ಮರ, ಕೊಂಬೆ ಬಿದ್ದು ವಾಹನಗಳು ಜಖಂ



ಭಾರೀ ಬಿರುಗಾಳಿಯಿಂದ ಮರ, ಕೊಂಬೆ ಹಾಗೂ ವಿದ್ಯುತ್ ಕಂಬಗಳು ಉರುಳಿಬಿದ್ದ ಪರಿಣಾಮ ಮೈಸೂರಿನಲ್ಲಿ ಹತ್ತಾರು ವಾಹನಗಳು ಜಖಂ ಆಗಿವೆ. ಅದೃಷ್ಟವಶಾತ್ ಪ್ರಾಣಹಾನಿ ಸಂಭವಿಸಿಲ್ಲ. ಅಗ್ರಹಾರದ ಸಂಸ್ಕೃತ ಪಾಠಶಾಲೆ ಬಳಿಯ ಬೇಕರಿ ಪಕ್ಕ ಮರ ಬಿದ್ದು ಕಾರು ಜಖಂ ಆಗಿದೆ. ಕೆ.ಆರ್.ಆಸ್ಪತ್ರೆ ಬಳಿ ಧನ್ವಂತ್ರಿ ರಸ್ತೆಯಲ್ಲಿ ಭಾರೀ ಕೊಂಬೆ ಮುರಿದು ಬಿದ್ದು, ಆಟೋ ಹಾಗೂ ಐದಾರು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ. ಜಯನಗರ ಪ್ರಯಾಣಿಕರ ತಂಗುದಾಣದ ಬಳಿ ನಿಲ್ಲಿಸಿದ್ದ ಸ್ಕೂಟರ್ ಮೇಲೆ ಮರ ಬಿದ್ದು ಸಂಪೂರ್ಣ ಜಖಂ ಆಗಿದೆ. ಭರತ್ ಎಂಬುವರು ಇಲ್ಲಿ ಸ್ಕೂಟರ್ ನಿಲ್ಲಿಸಿ ಇಬ್ಬರು ಮಕ್ಕಳೊಂದಿಗೆ ತಿರುಗಿ ನೋಡುವಷ್ಟರಲ್ಲಿ ಈ ಅವಘಡ ಸಂಭವಿಸಿದ್ದು, ಸದ್ಯ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಜರ್‌ಬಾದ್‌ನ ನಗರ ಪೊಲೀಸ್ ಆಯುಕ್ತರ ಕಚೇರಿ ಬಳಿ ಸಾರಿಗೆ ಬಸ್ ಮೇಲೆ ಮರದ ಕೊಂಬೆಗಳು ಹಾಗೂ ವಿದ್ಯುತ್ ಕಂಬಗಳು ಉರುಳಿ ಬಿದ್ದಿದ್ದು, ತಕ್ಷಣ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಭಾರೀ ಅನಾಹುತ ತಪ್ಪಿದೆ. ರಾಮಾನುಜ ರಸ್ತೆ, 8ನೇ ಕ್ರಾಸ್‌ನಲ್ಲಿ ಮರ ಬಿದ್ದು, ಕಣ್ಣನ್ ಎಂಬುವರ ಕಾರು ಜಖಂ ಆಗಿದೆ. ಮಾನಂದವಾಡಿ ರಸ್ತೆ, ಸಿಲ್ಕ್ ಫ್ಯಾಕ್ಟರಿ ಬಳಿ ವಿದ್ಯುತ್ ಕಂಬಗಳು ಖಾಸಗಿ ಕಾಲೇಜ್ ಬಸ್, ಕೆಎಸ್‌ಆರ್‌ಟಿಸಿ ಬಸ್ ಸೇರಿದಂತೆ ಹಲವು ವಾಹನಗಳ ಮೇಲೆ ಮುರಿದು ಬಿದ್ದಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ರಾಮಾನುಜ ರಸ್ತೆಯಲ್ಲಿದ್ದ ಗುಂಡಿಗೆ ಕೆಎಸ್‌ಆರ್‌ಟಿಸಿ ಬಸ್ ಚಕ್ರ ಸಿಲುಕಿಕೊಂಡಿದ್ದರಿಂದ ಪ್ರಯಾಣಿಕರನ್ನು ಕೆಳಗಿಳಿಸಿ, ನಂತರ ಹರಸಾಹಸಪಟ್ಟು ಮೇಲೆ ಹತ್ತಿಸಲಾಯಿತು. ರಾಮಾನುಜ ರಸ್ತೆ 12ನೇ ಕ್ರಾಸ್‌ನಲ್ಲಿ ವಿದ್ಯುತ್ ಪ್ರವಹಿಸಿ, ಹಸು ನೆಲಕ್ಕುರುಳಿತು. ಸ್ಥಳೀಯರು ತಕ್ಷಣ ಸೆಸ್ಕ್ ಸಿಬ್ಬಂದಿಗೆ ಮಾಹಿತಿ ನೀಡಿ, ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ಹಸು ಸಾವಿನಿಂದ ಪಾರಾಗಿದೆ.




ಧರೆಗುರುಳಿದ 200ಕ್ಕೂ ಹೆಚ್ಚು ವಿದ್ಯುತ್ ಕಂಬಗಳು; ಬಹುತೇಕ ಮೈಸೂರಲ್ಲಿ ಕಗ್ಗತ್ತಲು






ಭಾರೀ ಬಿರುಗಾಳಿಗೆ ಮರ ಹಾಗೂ ಭಾರೀ ಕೊಂಬೆಗಳು ಮುರಿದು ವಿದ್ಯುತ್ ಲೈನ್ ಮೇಲೆ ಬಿದ್ದ ಪರಿಣಾಮ ಮೈಸೂರು ನಗರದಲ್ಲಿ 300ಕ್ಕೂ ಹೆಚ್ಚು ಕಂಬಗಳು ಧರೆಗುರುಳಿವೆ. ಮರ ತೆರವುಗೊಳಿಸಿದ ಬೆನ್ನಲ್ಲೆ ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿ ತ್ವರಿತ ಕಾರ್ಯಾಚರಣೆಗೆ ಮುಂದಾಗಿದ್ದಾರೆ. ವಿದ್ಯುತ್ ತಂತಿಗಳ ಮೇಲೆ ಬಿದ್ದಿದ್ದ ಕೊಂಬೆಗಳನ್ನು ತೆರವುಗೊಳಿಸಿ ಕೆಲವೆಡೆಗೆ ಮಾತ್ರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಉಳಿದಂತೆ ಶುಕ್ರವಾರ ರಾತ್ರಿಯಿಡೀ ಮೈಸೂರಿನ ಬಹುತೇಕ ಕಡೆ ಕಗ್ಗತ್ತಲು ಆವರಿಸಿತ್ತು.

ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿವೆ. ಮೈಸೂರು ಮಾನಂದವಾಡಿ ರಸ್ತೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್‌ನಿಂದ ಎನ್‌ಐಇ ಕಾಲೇಜುವರೆಗೆ 15 ವಿದ್ಯುತ್ ಕಂಬಗಳು ಸೇರಿದಂತೆ ನಗರದಲ್ಲೇ 150ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಮಾನಂದವಾಡಿ ರಸ್ತೆಯಲ್ಲಿ ಸಾರಿಗೆ ಬಸ್, ಮೂರ್‍ನಾಲ್ಕು ಕಾರುಗಳ ಮೇಲೆ ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. 11 ಕೆವಿ ವಿದ್ಯುತ್ ತಂತಿಗಳಾಗಿದ್ದು, ಗಾಳಿ ಹೆಚ್ಚಾದ ಕೂಡಲೇ ವಿದ್ಯುತ್ ಹರಿವು ಕಡಿತಗೊಂಡಿದೆ. ಆದ್ದರಿಂದ ವಿದ್ಯುತ್ ಕಂಬಗಳು ಮುರಿದು ಬಿದ್ದಾಗ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಸೆಸ್ಕ್ ಸೂಪರಿಟೆಂಡೆಂಟ್ ಇಂಜಿನಿಯರ್ ಸುನೀಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಭಾರೀ ಬಿರುಗಾಳಿಯಿಂದ ಮರ ಹಾಗೂ ಕೊಂಬೆ ಬಿದ್ದು ಕೇವಲ 15–20 ನಿಮಿಷದಲ್ಲೇ ಮೈಸೂರಿನಲ್ಲಿ 350ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿಬಿದ್ದಿದ್ದು, ಪರಿಹಾರ ಕಾರ್ಯ ನಡೆಸಲಾಗುತ್ತಿದೆ. ಹಲವು ಕಡೆಗೆ ಶನಿವಾರ ಸಂಜೆವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸುವುದು ಕಷ್ಟಸಾಧ್ಯ ಎಂದು ಮತ್ತೋರ್ವ ಅಧಿಕಾರಿ ತಿಳಿಸಿದ್ದಾರೆ.















ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಳೆ

ಭಾರೀ ಮಳೆಗೆ ಹಲಗೂರಿನಲ್ಲಿ ಮನೆ, ಕೃಷಿ ಭೂಮಿ ನಾಶ



ಮಂಡ್ಯ/ಹಲಗೂರು, ಮೇ 3– ಬೇಸಿಗೆಯ ಬಿಸಿಲಿನ ತಾಪಮಾನದಿಂದ ಕಂಗೆಟ್ಟಿದ್ದ ಸಕ್ಕರೆ ನಾಡಿಗೆ ವರುಣ ಕೃಪೆ ತೋರಿದ್ದು, ಸಾಧಾರಣವಾಗಿ ಸುರಿದ ಮಳೆಗೆ ಜನ ನಿಟ್ಟುಸಿರು ಬಿಟ್ಟರೆ, ಮಳವಳ್ಳಿ ತಾಲೂಕಿನ ಹಲಗೂರಿನಲ್ಲಿ ಬಿರುಗಾಳಿ ಸಮೇತ ಸುರಿದ ಮಳೆಗೆ ಮನೆ, ಕೃಷಿ ಜಮೀನು ನಾಶವಾಗಿದೆ.

ಕಳೆದ ಎರಡು ತಿಂಗಳಿನಿಂದ ಬಿರು ಬೇಸಿಗೆಯಿಂದ ಜನ ಕಂಗೆಟ್ಟಿದ್ದರು. ಬೇಸಿಗೆಯ ತಾಪಮಾನಕ್ಕೆ ರೋಗ, ರುಜಿನಗಳು ಜೊತೆಗೆ ಬಿಸಿಲಿನಿಂದ ಪಾರಾಗಲು ಜನರ ತಂಪು ಪಾನೀಯಗಳ ಮೊರೆ ಹೋಗಿ ಮಳೆ ಬಂದರೆ ಸಾಕೆಂಬ ಸ್ಥಿತಿಗೆ ಬಂದಿದ್ದರು. ಆದರೆ ಇಂದು ಕೊಂಚ ಕೃಪೆ ತೋರಿದ ವರುಣಾ ಸಂಜೆ 4ರ ಸಮಯದಲ್ಲಿ ಅರ್ಧಗಂಟೆಗಳ ಕಾಲ ಮಳೆ ಸುರಿದು ಸ್ವಲ್ಪಮಟ್ಟಿನ ತಂಪು ನೀಡಿದ್ದಾನೆ.

ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ ಸೇರಿದಂತೆ ಹಲವು ಭಾಗದಲ್ಲಿ ಮಳೆ ಸುರಿದಿದ್ದು, ಬಿರು ಬೇಸಿಗೆಯಿಂದ ಕಾದ ಕಬ್ಬಿಣದಂತಾಗಿದ್ದ ಭೂಮಿಗೆ ಮಳೆ ತಂಪೆರೆದಿದೆ. ಮಳವಳ್ಳಿಯ ಹಲಗೂರು ಹೊರತುಪಡಿಸಿದರೆ ಕೆಲವೆಡೆ ಕೃಷಿ ಭೂಮಿಗೆ ನೀರು ನುಗ್ಗಿರುವುದು ಬಿಟ್ಟರೆ ಇನ್ಯಾವ ಸಮಸ್ಯೆ ಉಂಟಾಗಿಲ್ಲ.

ಹಲಗೂರು ಬಳಿಯ ಬೆನಮನಹಳ್ಳಿಯ ಕೃಷ್ಣೇಗೌಡ ಅವರಿಗೆ ಸೇರಿದ ಮನೆಯ ಮೇಲ್ಚಾವಣಿ ಭಾರೀ ಬಿರುಗಾಳಿ ಮಳೆಗೆ ಹಾರಿ ಹೋಗಿದ್ದು, ಮನೆಯ ಮೇಲ್ಚಾವಣಿಗೆ ಹಾಕಲಾಗಿದ್ದ 45ಕ್ಕೂ ಹೆಚ್ಚು ಸಿಮೆಂಟ್ ಶೀಟುಗಳು ಬಿದ್ದು ನಾಶವಾಗಿದೆ. ಇದರಿಂದಾಗಿ ಮನೆಯಲ್ಲಿ ಇದ್ದ ವಸ್ತುಗಳು ಹಾಗೂ ಶೇಖರಿಸಿದ್ದ ಅಪಾರ ಪ್ರಮಾಣದ ಬೆಳೆಗಳು ಮಳೆಯಿಂದ ನಷ್ಟ ಸಂಭವಿಸಿದೆ.



ಈ ಸಂದರ್ಭದಲ್ಲಿ ಮನೆಯ ಮಾಲೀಕರಾದ ಕೃಷ್ಣೇಗೌಡ ಮಾತನಾಡಿ, ನಾಲ್ಕು ಕ್ವಿಂಟಲ್ ರಾಗಿ ಬಿತ್ತನೆಗಾಗಿ ಶೇಖರಣೆ ಮಾಡಿ ಇಟ್ಟಿದ್ದ ಕಡಲೇಕಾಯಿ, ಹುರುಳಿ ಹಲವು ದ್ವಿದಳ ಧಾನ್ಯಗಳು ಬಾರಿ ಬಿರುಗಾಳಿ ಸಹಿತ ಮಳೆಗೆ ಸಂಪೂರ್ಣವಾಗಿ ನಾಶವಾಗಿದೆ. ಇದರ ಜೊತೆಯಲ್ಲಿ ಸುಮಾರು 45ಕ್ಕೂ ಹೆಚ್ಚು ಸಿಮೆಂಟಿನ ಶೀಟುಗಳು ಹಾರಿ ಹೋಗಿದ್ದು, ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ ಎಂದು ತಿಳಿಸಿದರು.

ಹಂಡನಹಳ್ಳಿ ಗ್ರಾಮದ ರಾಮಚಂದ್ರಗೆ ಸೇರಿದ ಒಂದು ಎಕರೆ ಜಮೀನಿನಲ್ಲಿ ಮುಸುಕಿನ ಜೋಳ ಮಾರಾಟ ಮಾಡಲಾಗಿದ್ದು ಬಾರಿ ಬಿರುಗಾಳಿ ಸಹಿತ ಮಳೆಗೆ ಮುರಿದು ಬಿದ್ದು ಸಂಪೂರ್ಣ ಬೆಳೆ ನೆಲಸಮಾನವಾಗಿದೆ. ಬಾಳೆಹೊನ್ನಿಗ ಗ್ರಾಮದ ಮಾದೇಶ ಹಾಗೂ ಉಮೇಶ ಎಂಬುವವರ ಮನೆಯ ಸೀಮೆಂಟ್ ಶೀಟುಗಳು ಬಾರಿ ಬಿರುಗಾಳಿಗೆ ನಾಶವಾಗಿದೆ. ವೆಂಕಟೇಶ್‌ಗೆ ಸೇರಿದ ಎಲೆ ತೋಟ ಸಂಪೂರ್ಣ ನೆಲಸಮವಾಗಿದ್ದು, ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ.

ಪ್ರಜ್ವಲ್ ರೇವಣ್ಣರಿಂದ ಬಿಜೆಪಿಗೂ ಹೊಡೆತ

- ಲೈಂಗಿಕ ದೌರ್ಜನ್ಯದ ಬಗ್ಗೆ ಮೋದಿ, ಅಮಿತ್ ಶಾಗೆ ಮಾಹಿತಿ ಇತ್ತು
- ಪ್ರಜ್ವಲ್, ರೇವಣ್ಣ ಶೀಘ್ರ ಬಂಧನಕ್ಕೆ ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಆಗ್ರಹ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಎಲ್.ಆರ್.ಶಿವರಾಮೇಗೌಡ ಮಾತನಾಡಿದರು.

ಮಂಡ್ಯ, ಮೇ 3– ಹಾಸನ ಜಿಲ್ಲೆಯಲ್ಲಿ ಸಂಸದ ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ನಡೆಸಿರುವ ದೌರ್ಜನ್ಯದ ಬಗ್ಗೆ ಹೆಚ್.ಡಿ.ದೇವೇಗೌಡರ ಕುಟುಂಬ, ನರೇಂದ್ರ ಮೋದಿ ಹಾಗೂ ಅಮಿತ್ ಶಾಗೆ ಮಾಹಿತಿ ಇತ್ತು. ಆದರೂ ಆತನಿಗೆ ಟಿಕೆಟ್ ಕೊಡಲಾಯಿತು. ಇದೀಗ ಈ ಪ್ರಕರಣ ವಿಶ್ವಾದ್ಯಂತ ಸದ್ದು ಮಾಡುತ್ತಿದ್ದು, ಪ್ರಕರಣದಿಂದ ಬಿಜೆಪಿಗೆ ಲೋಕಸಭಾ ಚುನಾವಣೆಯಲ್ಲಿ ದೊಡ್ಡ ಹೊಡೆತ ಬೀಳುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಕೂಡಲೇ ಜೆಡಿಎಸ್ ಪಕ್ಷವನ್ನು ಎನ್‌ಡಿಎ ಮೈತ್ರಿ ಕೂಟದಿಂದ ಹೊರಹಾಕಬೇಕೆಂದು ಮಾಜಿ ಸಂಸದ ಹಾಗೂ ಬಿಜೆಪಿ ಮುಖಂಡ ಎಲ್.ಆರ್.ಶಿವರಾಮೇಗೌಡ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯು ಈ ತಿಂಗಳ ಅಂತ್ಯದವರೆಗೂ ಹಂತ ಹಂತವಾಗಿ ನಡೆಯುವುದರಿಂದ ಪ್ರಜ್ವಲ್ ಪ್ರಕರಣ ಚುನಾವಣೆಯ ಮೇಲೆ ಪರಿಣಾಮ ಬೀರಿ ಬಿಜೆಪಿಗೆ ನಷ್ಟವಾಗುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಜೆಡಿಎಸ್‌ನ್ನು ಮೈತ್ರಿಕೂಟದಿಂದ ಹೊರಗಿಡಬೇಕೆಂದು ಒತ್ತಾಯಿಸಿದರು.

ಇಳಿ ವಯಸ್ಸಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಇಂತಹ ನೋವನ್ನು ದೇವರು ಕೊಡಬಾರದಿತ್ತು. ರಾಜಕೀಯವಾಗಿ ನಮ್ಮಂತಹ ಮುಖಂಡರನ್ನು ಮುಗಿಸಿದ್ದಕ್ಕೆ ದೇವೇಗೌಡರು ಹಾಗೂ ಅವರ ಕುಟುಂಬಕ್ಕೆ ಇಂತಹ ಶಿಕ್ಷೆ ಬಂದೊದಗಿದೆ ಎಂದು ಕಿಡಿಕಾರಿದರು.

ನಾಗಮಂಗಲದಲ್ಲಿ ಪತ್ರಕರ್ತ ಕಂಚನಹಳ್ಳಿ ಗಂಗಾಧರ ಮೂರ್ತಿ ಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರವಿದೆ ಎಂದು ಹೆಚ್.ಡಿ.ದೇವೇಗೌಡರು ಮೂರ್ತಿ ಅವರ ಫೋಟೋವನ್ನು ತಲೆ ಮೇಲೆ ಹೊತ್ತುಕೊಂಡು ಬೆಳ್ಳೂರಿನಿಂದ ಕಂಚನಹಳ್ಳಿವರೆಗೆ ಪಾದಯಾತ್ರೆ ಮಾಡಿದರು. ನನ್ನ ವಿರುದ್ಧ ಅಪಪ್ರಚಾರ ಮಾಡಿದರು. ಆದರೆ ನ್ಯಾಯಾಲಯ ಗಂಗಾಧರ ಮೂರ್ತಿ ಹತ್ಯೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ ಎಂದು ತೀರ್ಪು ನೀಡಿತು. ಹತ್ಯೆ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡಿತು. ನಾನು ಒಂದು ವೇಳೆ ಹತ್ಯೆಯಲ್ಲಿ ಭಾಗಿಯಾಗಿದ್ದರೆ ನನಗೇಕೆ ಶಿಕ್ಷೆಯನ್ನು ಕೋರ್ಟ್ ನೀಡಲಿಲ್ಲ. ಪ್ರಕರಣದಲ್ಲಿ ಒಂದು ಕೂದಲಿನ ಎಳೆಯಷ್ಟು ನನ್ನ ಪಾತ್ರ ಇಲ್ಲ. ಆದರೆ ದೇವೇಗೌಡರು ನನ್ನನ್ನು ರಾಜಕೀಯವಾಗಿ ತುಳಿಯಲು ನನ್ನ ವಿರುದ್ಧ ಹೋರಾಟ ರೂಪಿಸಿದ್ದರು ಎಂದು ಆರೋಪಿಸಿದರು.

ನಾನು ಈ ಹಿಂದೆ ದೇವೇಗೌಡರು ಸಿಎಂ ಆಗುವಾಗ ಜನತಾ ದಳಕ್ಕೆ ಬೆಂಬಲ ಕೊಟ್ಟಿದ್ದೆ. ಅದರ ಫಲವಾಗಿ ನನ್ನನ್ನು ಬಿಡಿಎ ಅಧ್ಯಕ್ಷರನ್ನಾಗಿ ಮಾಡಿದರು. ಅದರಂತೆ 2017ರಲ್ಲಿ ಜೆಡಿಎಸ್ ಸೇರ್ಪಡೆಯಾದ ನಾನು 2018ರ ವಿಧಾನಸಭಾ ಚುನಾವಣೆಯಲ್ಲಿ ನಾಗಮಂಗಲ ಜೆಡಿಎಸ್ ಅಭ್ಯರ್ಥಿ ಕೆ.ಸುರೇಶ್‌ಗೌಡ ಗೆಲುವಿಗೆ ಶ್ರಮಿಸಿದ್ದಕ್ಕಾಗಿ ಅದೇ ವರ್ಷ ನಡೆದ ಮಂಡ್ಯ ಲೋಕಸಭಾ ಉಪ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ನೀಡಿತು. ಕೇವಲ ಐದೂವರೆ ತಿಂಗಳ ಅಧಿಕಾರಕ್ಕಾಗಿ 32 ಕೋಟಿ ಖರ್ಚು ಮಾಡಿದೆ. ಆದರೆ ನಂತರ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಪುತ್ರನನ್ನು ಪ್ರತಿಷ್ಠಾಪನೆ ಮಾಡಲು ನನ್ನನ್ನ ಬಲಿಕೊಟ್ಟರು ಎಂದು ಜೆಡಿಎಸ್ ವಿರುದ್ಧ ಕಿಡಿಕಾರಿದರು.

ಪ್ರಜ್ವಲ್ ಹಾಗೂ ರೇವಣ್ಣ ಒಕ್ಕಲಿಗರು ತಲೆ ತಗ್ಗಿಸುವಂತ ಕೆಲಸ ಮಾಡಿದ್ದಾರೆ. ಸುಮಾರು 3000 ಹೆಣ್ಣು ಮಕ್ಕಳ ಜೊತೆಗೆ ಅಸಭ್ಯವಾಗಿ ವರ್ತಿಸಿರುವ ಪ್ರಜ್ವಲ್ ವಿರುದ್ಧ ದೇವೇಗೌಡರು, ಕುಮಾರಸ್ವಾಮಿ ಹೋರಾಟ ಮಾಡಲಿ. ನನ್ನಂತಹ ಸಾಮಾನ್ಯನ ವಿರುದ್ಧ ಹೋರಾಟ ಮಾಡುವ ಶಕ್ತಿ ಇರುವ ಗೌಡರಿಗೆ ಸಾವಿರಾರು ಮಹಿಳೆಯರ ಜೀವನದ ಜೊತೆಗೆ ಆಟವಾಡಿರುವ ಮೊಮ್ಮಗ ಪ್ರಜ್ವಲ್ ವಿರುದ್ಧ ಹೋರಾಡುವ ಶಕ್ತಿ ಇಲ್ಲವೇ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಅನೇಕ ಒಕ್ಕಲಿಗ ನಾಯಕರನ್ನು ದೇವೇ ಗೌಡರು ಹಾಗೂ ಕುಮಾರಸ್ವಾಮಿ ಮೂಲೆ ಗುಂಪು ಮಾಡಿದ್ದಾರೆ. ಅದರ ಪ್ರತಿಫಲ ಈಗ ಅನುಭವಿಸುತ್ತಿದ್ದಾರೆ. ಕಳೆದ ಕೆಲ ವರ್ಷಗಳ ಹಿಂದೆ ನನಗೆ ಮೋಸ ಮಾಡಿದ ಕಾಂಗ್ರೆಸ್ ಪಕ್ಷದ ಮುಖಂಡನನ್ನು ಟೀಕಿಸಿದ್ದಕ್ಕೆ ಯಾವುದೇ ಮುಲಾಜಿಗೊಳಗಾಗದೇ ಅರ್ಧಗಂಟೆಯಲ್ಲಿ ಪಕ್ಷದಿಂದ ನನ್ನನ್ನು ಅಮಾನತು ಮಾಡಿದರು. ಇಷ್ಟೆಲ್ಲಾ ಕಳಂಕ ಹೊತ್ತಿರುವ ನಿಮ್ಮ ಮಗ ಹೆಚ್.ಡಿ.ರೇವಣ್ಣ ಅವರನ್ಯಾಕೆ ಇನ್ನು ಉಚ್ಚಾಟಿಸಿಲ್ಲ. ಈ ಕೂಡಲೇ ಸರ್ಕಾರ ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣರನ್ನು ಬಂಧಿಸಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಹೇಮರಾಜ್, ಚೇತನ್, ಉಮೇಶ್, ರಮೇಶ್, ನಾಗರಾಜು ಉಪಸ್ಥಿತರಿದ್ದರು.

ರಾಹುಲ್‌ಗಾಂಧಿ ವಿರುದ್ಧ ಬಿಜೆಪಿ ದೂರು



ಮಂಡ್ಯ, ಮೇ 3– ಹಾಸನದ ಲೋಕಸಭಾ ಸದಸ್ಯ ಪ್ರಜ್ವಲ್ ರೇವಣ್ಣನಂತಹ ರೇಪಿಸ್ಟ್‌ಗೆ ಕನ್ನಡಿಗರು ಮತ ಹಾಕಿದರೆ ನನಗೆ ಸಹಾಯವಾಗುತ್ತದೆ ಎಂದು ಮೋದಿ ಬಹಿರಂಗವಾಗಿ ಸಾರ್ವಜನಿಕ ಸಭೆಯಲ್ಲಿ ಹೇಳಿಕೆ ನೀಡಿದ್ದಾರೆಂದು ತಿಳಿಸಿರುವ ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗ, ರಾಜ್ಯ ಪೊಲೀಸ್ ವರಿಷ್ಠಾಧಿಕಾರಿಗೆ ಬಿಜೆಪಿ ದೂರು ನೀಡಿದೆ.

ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಬಿಜೆಪಿ ಕಾರ್ಯಕರ್ತರು, ಮನವಿ ಸಲ್ಲಿಸಿ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಅವರು ಪ್ರಜ್ವಲ್ ರೇವಣ್ಣ ರೇಪಿಸ್ಟ್ 400 ಮಹಿಳೆಯರನ್ನು ರೇಪ್ ಮಾಡಿದ್ದಾನೆ, ವೀಡಿಯೋ ಮಾಡಿದ್ದಾನೆ. ಪ್ರಧಾನಿ ಮೋದಿ ಅವರನ್ನು ಸಮರ್ಥನೆ ಮಾಡಿಕೊಂಡಿದ್ದಾರೆ. ಹೇಳಿರುವುದನ್ನು ತೀವ್ರವಾಗಿ ಖಂಡಿಸಿದರು.

ಪ್ರಜ್ವಲ್ ರೇವಣ್ಣ ಮೇಲೆ ಆರೋಪವಿರುವುದು ನಿಜ. ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ನೇಮಕ ಮಾಡಿದೆ. ಆಪಾದಿತನನ್ನು ವಿಚಾರಣೆಗೆ ಒಳಪಡಿಸಿಲ್ಲ. ಆರೋಪ ಸತ್ಯವೋ ಇಲ್ಲ ಮಿಥ್ಯವೋ ಎನ್ನುವುದು ಸಾಬೀತಾಗಬೇಕಿದೆ. ವೀಡಿಯೋಗಳು ಅಸಲಿಯೋ, ನಕಲಿಯೋ ಎಂಬುದು ತನಿಖೆಯಾಗಬೇಕು. ಅದಕ್ಕಾಗಿ ವಿಧಿ ವಿಜ್ಞಾನ ಪ್ರಯೋಗಾಲಯವಿದೆ. ನಂತರ ಪ್ರಜ್ವಲ್ ವಿಚಾರ ನ್ಯಾಯಾಲಯ ತೀರ್ಪು ನೀಡಿ ಅಪರಾಧಿಯೋ ಇಲ್ಲವೋ ಎಂಬುದನ್ನು ತೀರ್ಪು ನೀಡುತ್ತದೆ. ಆದರೆ ರಾಹುಲ್‌ಗಾಂಧಿಯವರು ತಾವೇ ನ್ಯಾಯಾಧೀಶರಂತೆ ರೇಪಿಸ್ಟ್ ಎಂದು ಆದೇಶ ನೀಡಿದ್ದಾರೆ ಎಂದು ಕಿಡಿಕಾರಿದರು.

ಇದು ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಅಪಮಾನ ಮಾಡುವ ವಿಚಾರವಾಗಿದೆ. ಇದನ್ನು ರಾಜಕೀಯಗೊಳಿಸುವುದು, ರಾಜ್ಯದ ಸಿಎಂ ಪ್ರಧಾನಿಗೆ ಪತ್ರ ಬರೆಯುವುದು, ಪಾಸ್‌ಪೋರ್ಟ್ ವಜಾಗೊಳಿಸಿ ಎಂದು ಹೇಳುವುದು ಸರಿಯಲ್ಲ, ಪೆನ್‌ಡ್ರೈವ್‌ನಲ್ಲಿ ಇದ್ದಾರೆನ್ನಲಾದ ಹೆಣ್ಣು ಮಕ್ಕಳ ಮಾನದ ವಿಚಾರದಲ್ಲಿ ಗೌಪ್ಯತೆ ಕಾಪಾಡಬೇಕಾಗಿದೆ. ನೊಂದ ಹೆಣ್ಣು ಮಕ್ಕಳು ಆತ್ಮಹತ್ಯೆಗೆ ಶರಣಾದರೆ ಯಾರು ಹೊಣೆ, ಲುಕ್‌ಔಟ್ ನೋಟೀಸ್ ಕೂಡ ನೀಡಿದ್ದಾರೆ ಇಂಟರ್‌ಪೋಲ್ ಸಹಕಾರ ಕೋರಿದ್ದಾರೆ. ಇದು ಪೊಲೀಸರ ಕರ್ತವ್ಯ. ಅದನ್ನು ಬಿಟ್ಟು ಪ್ರಧಾನಿಗೆ ಪತ್ರ ಬರೆಯುವ ಉದ್ದೇಶವಾದರೂ ಏನಿತ್ತು ಎಂದು ಪ್ರಶ್ನಿಸಿದ್ದಾರೆ.

ಇದೊಂದು ಸೂಕ್ಷ್ಮ ವಿಚಾರ. ಹೆಣ್ಣು ಮಕ್ಕಳ ವಿಚಾರದಲ್ಲಿ ತಾವೇ ನ್ಯಾಯಾಧೀಶರಂತೆ ಹೇಳಿಕೆ ನೀಡುವುದಕ್ಕೆ ತಕ್ಷಣ ರಾಹುಲ್‌ಗಾಂಧಿಯವರಿಗೆ ಕಡಿವಾಣ ಹಾಕಬೇಕು. ರೇಪಿಸ್ಟ್ ಹೇಳಿಕೆ ನೀಡಿರುವ ರಾಹುಲ್‌ಗಾಂಧಿ ಮೇಲೆ ಸ್ವಯಂಪ್ರೇರಿತ ದೂರು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಮುಖಂಡರಾದ ಸಿ.ಟಿ.ಮಂಜುನಾಥ್, ನಿತ್ಯಾನಂದ, ಹೊಸಹಳ್ಳಿ ಶಿವು, ಮಾದರಾಜೇ ಅರಸ್, ಎಸ್.ಸಿ.ಯೋಗೇಶ್, ಸಾಗರ್, ಜ್ಯೋತಿ ಕೃಷ್ಣೇಗೌಡ ಸೇರಿದಂತೆ ಹಲವರು ಇದ್ದರು.

ಇಂದು ಅಗ್ರಹಾರಬಾಚಹಳ್ಳಿ ಶ್ರೀ ಲಕ್ಷ್ಮೀದೇವಿ ಬ್ರಹ್ಮ ರಥೋತ್ಸವ

ಕೆ.ಆರ್.ಪೇಟೆ, ಮೇ 3– ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮೀದೇವಮ್ಮನವರ ಸಿಡಿ ಹಬ್ಬ ಹಾಗೂ ಬ್ರಹ್ಮ ರಥೋತ್ಸವ (ಗುರುವಾರ) ಇದೇ ಮೇ 4ರಿಂದ 6ರವರೆಗೆ ನಡೆಯಲಿದೆ.

ಹಬ್ಬ ಹಿನ್ನೆಲೆಯಲ್ಲಿ ಗ್ರಾಮವು ನವ ವಧುವಿನಂತೆ ಸಿಂಗಾರಗೊಂಡಿರುತ್ತದೆ. ಮೇ.04ರಂದು ಶನಿವಾರ ಶ್ರೀ ಲಕ್ಷ್ಮೀದೇವಿ ಅಮ್ಮನವರ ಬ್ರಹ್ಮ ರಥೋತ್ಸವವು ಮಧ್ಯಾಹ್ನ 3ಗಂಟೆಗೆ ನಡೆಯಲಿದೆ. ರಾತ್ರಿ 8ಗಂಟೆ ಶ್ರೀ ಲಕ್ಷ್ಮೀದೇವಿ ನಾಟಕ ಮಂಡಳಿ ವತಿಯಿಂದ ಕುರುಕ್ಷೇತ್ರ ನಾಟಕ ಪ್ರದರ್ಶನ ಇರುತ್ತದೆ. ಮೇ 5 ಭಾನುವಾರ ಓಕಳಿಯಾಟ, ಜಾತ್ರೆ, ಇತರೆ ಕಾರ್ಯಕ್ರಮಗಳು. ಮೇ 6ರಂದು ಸೋಮವಾರ ಸೋಮನ ಕುಣಿತ, ಮನೆ ಮನೆಗಳಲ್ಲಿ ಸೋಮ ದೇವರ ಪೂಜೆ, ಕೋಸಂಬರಿ ಪ್ರಸಾದ, ಮಜ್ಜಿಗೆ, ಪಾನಕ ವಿತರಣೆ ನಡೆಯಲಿವೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರಥೋತ್ಸವ, ಜಾತ್ರಾ ಮಹೋತ್ಸವ, ಸಿಡಿ ಹಬ್ಬವನ್ನು ಯಶಸ್ವಿಗೊಳಿಸಬೇಕೆಂದು ಪ್ರಕಟಣೆ ತಿಳಿಸಿದೆ.

ತಿ.ನರಸೀಪುರ, ನಂ.ಗೂಡಲ್ಲಿ ಬಿಸಿಲಿನ ತಾಪಕ್ಕೆ ತಂಪೆರದ ಮಳೆರಾಯ





ತಿ.ನರಸೀಪುರ, ಮೇ 3– ತಿ.ನರಸೀಪುರದಲ್ಲಿ ಶುಕ್ರವಾರ ವರ್ಷದ ಮೊದಲ ಮಳೆಯಾಗಿದ್ದು, ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಜನತೆಗೆ ಮಳೆರಾಯ ತಂಪೆರೆದಿದ್ದಾನೆ.

ಸಂಜೆ 5 ಗಂಟೆ ವೇಳೆ ಬಿರುಗಾಳಿ ಸಹಿತ ಮಳೆಯಾಗಿದ್ದು, ಉರಿ ಬಿಸಿಲಿನಿಂದ ಬಳಲಿದ್ದ ಜನತೆ ಸಂಜೆ ಬಿದ್ದ ವರ್ಷದ ಮೊದಲ ಮಳೆಯಿಂದ ಸಂತಸಗೊಂಡಿದ್ದಾರೆ. ಪಟ್ಟಣದಲ್ಲಿ ನಿರೀಕ್ಷೆಗೂ ಮೀರಿದ ಬಿಸಿಲಿನ ತಾಪಮಾನ ದಾಖಲಾಗಿತ್ತು. 38 ರಿಂದ 40 ಡಿಗ್ರಿ ಬಿಸಿಲಿನ ತಾಪಮಾನದಿಂದ ಜನತೆ ಮನೆಯಿಂದ ಹೊರಗೆ ಬರದೆ ಪರಿತಪಿಸುವಂತಾಗಿತ್ತು ಆದರೆ ಇಂದು ಸಂಜೆ ಬಿರುಗಾಳಿ ಸಮೇತ ತಾಲೂಕಿನಾದ್ಯಂತ ಮಳೆಯಾಗಿದ್ದು, ಜನತೆ ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ. ಬಿರುಸಾಗಿಯೇ ಬಂದ ಮಳೆ ಕೇವಲ ಅರ್ಧ ಗಂಟೆ ಮಾತ್ರ ಸುರಿದು ತನ್ನ ಅಬ್ಬರ ನಿಲ್ಲಿಸಿ ನಿರಾಸೆ ಉಂಟು ಮಾಡಿದೆ. ಆದರೆ ಮಳೆಯೇ ಬರುವುದಿಲ್ಲವೇನೋ ಎಂಬ ಆತಂಕದಲ್ಲಿದ್ದ ಆಕಾಶದ ಕಡೆ ದೃಷ್ಟಿ ನೆಟ್ಟಿದ್ದ ಜನರು ಸಂಜೆ ಬಿದ್ದ ಮಳೆಯಿಂದ ಸಂತುಷ್ಟರಾಗಿದ್ದಾರೆ.

ನಂಜನಗೂಡು: ಬಿಸಿಲಿನ ತಾಪಕ್ಕೆ ಸಿಲುಕಿ ಕಂಗೆಟ್ಟಿದ್ದ ಸಾರ್ವಜನಿಕರು ಶುಕ್ರವಾರ ಸುರಿದ ಮೊದಲ ವರ್ಷಧಾರೆಯಿಂದ ಹರ್ಷಗೊಂಡರು. ಕಳೆದೊಂದು ವರ್ಷದಿಂದ ಮಳೆ ಇಲ್ಲದೆ ಬರಗಾಲ ಆವರಿಸಿ ದಾಖಲೆಯ ತಾಪಮಾನ ಏರಿಕೆಯಾಗಿತ್ತು. ಜೊತೆಗೆ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆ ಎದುರಾಗಿತ್ತು. ಅಲ್ಲದೇ ಈ ಭಾಗದ ರೈತರು ನೀರಿಲ್ಲದೆ ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಪರದಾಡುವ ಸ್ಥಿತಿ ಎದುರಾಗಿತ್ತು. ಅಲ್ಲದೆ ತೀವ್ರ ಬರಗಾಲದಿಂದ ಸಾರ್ವಜನಿಕರು ಕಂಗೆಟ್ಟಿದ್ದರು. ಮಳೆ ಕೊರತೆಯಿಂದಾಗಿ ತರಕಾರಿ, ಸೊಪ್ಪು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಲೂ ಹೈರಾಣಾಗಿದ್ದರು. ಶುಕ್ರವಾರ ಸಂಜೆ 4.30ರ ವೇಳೆಗೆ ಸುರಿದ ವರ್ಷದ ಮೊದಲ ಮಳೆ ಭೂಮಿಗೆ ತಂಪೆರೆಯಿತು. ಸಾರ್ವಜನಿಕರು ಶುಕ್ರವಾರ ಸುರಿದ ಮೊದಲ ಮಳೆಯ ಮಣ್ಣಿನ ಸುವಾಸನೆ ಆಸ್ವಾದಿಸುವ ಜೊತೆಗೆ ಮಳೆಗೆ ಮೈಯೊಡ್ಡಿ ಹರ್ಷ ವ್ಯಕ್ತಪಡಿಸಿದರು. ಮಳೆ ಕಾಣದೆ ತಾಪಮಾನದಿಂದ ಬೇಸತ್ತಿದ್ದ ಸಾರ್ವಜನಿಕರು ವರ್ಷದ ಮೊದಲ ಮಳೆ ಕಂಡು ಆನಂದದಿಂದ ನಿಟ್ಟಿಸಿರು ಬಿಟ್ಟರು.

ಸಮಾಜ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದು



ಕಟ್ಟಡ ಕಾರ್ಮಿಕರ ಸಂಘದಿಂದ ಕಾರ್ಮಿಕರ ದಿನಾಚರಣೆ ನಡೆಯಿತು.

ಸರಗೂರು, ಮೇ 3– ದೇಶಾದ್ಯಂತ ಕಾರ್ಮಿಕರ ದಿನ ಆಚರಿಸಲಾಗುತ್ತಿದ್ದು, ಸಮಾಜ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ ಎಂದು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ರಾಚಯ್ಯ ತಿಳಿಸಿದರು.

ಪಟ್ಟಣದ ಕಟ್ಟಡ ಕಾರ್ಮಿಕರ ಸಂಘದಲ್ಲಿ ನಡೆದ ಕಾರ್ಮಿಕರ ದಿನಾಚರಣೆ ಅಂಗವಾಗಿ ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಪ್ರತಿಯೊಂದು ಕ್ಷೇತ್ರದಲ್ಲೂ ಶ್ರಮಪಟ್ಟು ದುಡಿಯುವ ಕಾರ್ಮಿಕರು ದೇಶ, ರಾಜ್ಯದ ಅಭಿವೃದ್ಧಿಗೆ ಹೆಗಲು ಕೊಡುತ್ತಾರೆ. ಇಂತಹ ಶ್ರಮಜೀವಿಗಳ ಪ್ರಯತ್ನದಲ್ಲಿ ದೇಶದ ಅಭಿವೃದ್ಧಿ ಅಡಗಿದೆ. ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುವ ಕಾರ್ಮಿಕರ ಶ್ರಮ ಮತ್ತು ಸೇವೆಯನ್ನು ಗೌರವಿಸುವ, ಅವರ ಸೇವೆಗೆ ಕೃತಜ್ಞತೆ ಸಲ್ಲಿಸುವ ದಿನವೇ ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಎಂದರು.

ಇದೇ ವೇಳೆ ಕಟ್ಟಡ ಕಾರ್ಮಿಕರ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು. ಗೌರವಾಧ್ಯಕ್ಷ ನಂಜುಂಡಶೆಟ್ಟಿ, ಉಪಾಧ್ಯಕ್ಷ ಭೋಗಯ್ಯ, ಪ್ರಧಾನ ಕಾರ್ಯದರ್ಶಿ ರಮೇಶ್, ಖಜಾಂಚಿ ಚಿಕ್ಕನಾಯಕ, ಮಾಜಿ ಅಧ್ಯಕ್ಷರಾದ ಶಿವರಾಜು, ಬಸವರಾಜು, ಶಿವಣ್ಣ, ಶ್ರೀನಿವಾಸ, ಸದಸ್ಯ ಗೋವಿಂದರಾಜು, ಮಾಜಿ ಉಪಾಧ್ಯಕ್ಷ ಪುಟ್ಟಹನುಮಯ್ಯ, ಬಸವರಾಜು, ಸಿದ್ದಪ್ಪ, ಆದಿಶೇಷ, ಮಹದೇವ, ನಾಗರಾಜು, ಪ್ರಚಾರಕ ಸತೀಶ್, ಎಸ್.ಎಸ್.ಪ್ರಕಾಶ್, ಮಹದೇವಸ್ವಾಮಿ, ಸಿದ್ದರಾಜು, ರಾಜಣ್ಣ, ಶಿವಣ್ಣ, ಪ್ರಸಾದ್, ಸ್ವಾಮಿ, ಮಹೇಶ್, ಪ್ರತಾಪ್ ಇತರರಿದ್ದರು.

ಭಾರೀ ಬಿರುಗಾಳಿ: ಬಾಳೆ ಬೆಳೆ ನಾಶ



ಮಲ್ಕುಂಡಿ, ಮೇ 3– ಭಾರೀ ಬಿರುಗಾಳಿಗೆ ಬಾಳೆ ಬೆಳೆ ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ಯಾಲಹಳ್ಳಿಯಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ನಿವಾಸಿ ಜಗದೀಶ್ ಅವರಿಗೆ ಸೇರಿದ ಬಾಳೆ ಬೆಳೆ ನಾಶವಾಗಿರುವುದು. ಈತ ತಮ್ಮ 2 ಎಕರೆ ಜಮೀನಿನಲ್ಲಿ ವಿವಿಧೆಡೆ ಸಾಲ ಮಾಡಿ ಕಷ್ಟಪಟ್ಟು ಬಾಳೆ ಬೆಳೆದಿದ್ದರು. ಆದರೆ ಶುಕ್ರವಾರ ಸಂಜೆ ಬೀಸಿದ ಭಾರೀ ಬಿರು ಗಾಳಿಗೆ ಬಾಳೆ ಬೆಳೆ ನಾಶ ವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಗ್ರಾಮದ ಮುಖಂಡ ನಾಗೇಂದ್ರ ಮಾತ ನಾಡಿ, ತೀವ್ರ ಬರಗಾಲದಲ್ಲೂ ಸಾಲ ಮಾಡಿ ಕಷ್ಟ ಪಟ್ಟು ಬೆಳೆದ ಫಸಲು ನಾಶವಾದರೇ ಮಾಡಿದ ಸಾಲ ತೀರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು ರೈತ ಸಾಲ ತೀರಿಸಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಶುಕ್ರವಾರ ಸಂಜೆ ಗುಡುಗು ಸಹಿತ ಭಾರೀ ಮಳೆ ಸುರಿಯಿತು.

ವಿ.ಶ್ರೀನಿವಾಸಪ್ರಸಾದ್ ವ್ಯಕ್ತಿತ್ವ ಇತರ ರಾಜಕಾರಣಿಗಳಿಗೆ ಪ್ರೇರಣೆ

ಕಸಾಪ ಗೌರವಾಧ್ಯಕ್ಷ ಸಿ.ಚಿಕ್ಕರಂಗನಾಯಕ ಅಭಿಪ್ರಾಯ



ಕಸಾಪ ಕಚೇರಿಯಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂಜನಗೂಡು, ಮೇ 3– ವಿ. ಶ್ರೀನಿವಾಸ ಪ್ರಸಾದ್ ಸಾಮಾಜಿಕ ನ್ಯಾಯದ ಹರಿಕಾರ, ಯಾವುದೇ ಕಪ್ಪು ಚುಕ್ಕೆ ಇಲ್ಲದ ನಿಷ್ಕಳಂಕ ರಾಜಕಾರಣಿ ಯಾಗಿದ್ದು, ಅವರ ವ್ಯಕ್ತಿತ್ವ ಇತರ ರಾಜಕಾರಣಿಗಳಿಗೆ ಪ್ರೇರಣೆಯಾಗಿದೆ ಎಂದು ಜಿಪಂ ಮಾಜಿ ಸದಸ್ಯ ಹಾಗೂ ಕಸಾಪ ಗೌರವಾಧ್ಯಕ್ಷ ಸಿ.ಚಿಕ್ಕರಂಗ ನಾಯಕ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ವಿ.ಶ್ರೀನಿವಾಸ ಪ್ರಸಾದ್ ಅವರು ತಮ್ಮ 50 ವರ್ಷಗಳ ರಾಜಕೀಯ ಜೀವನದಲ್ಲಿ ಎಲ್ಲಾ ವರ್ಗಕ್ಕೂ ಸಾಮಾಜಿಕ ನ್ಯಾಯ ಕಲ್ಪಿಸಿ ಎಲ್ಲಾ ವರ್ಗದ ನಾಯಕರಾಗಿ ಹೊರಹೊಮ್ಮಿದ್ದರು. ನಂಜನಗೂಡು ಪುರಸಭೆಗೆ ಪೌರ ಕಾರ್ಮಿಕರನ್ನು ಆಯ್ಕೆ ಮಾಡಿದ್ದು ಅವರ ಸಾಮಾಜಿಕ ನ್ಯಾಯ ಪರಿಕಲ್ಪನೆಗೆ ಉದಾಹರಣೆ. ಕೇಂದ್ರ ಸಚಿವರಾಗಿ, ರಾಜ್ಯ ಕಂದಾಯ ಸಚಿವರಾಗಿ ಅಭಿವೃದ್ಧಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಿಂದುಳಿದವರು, ದಲಿತರು, ಶೋಷಿತರ ಪರ ಗಟ್ಟಿ ಧ್ವನಿಯಾಗಿದ್ದ ಪ್ರಸಾದ್ ಎಂದಿಗೂ ತಮ್ಮ ತತ್ವಾದರ್ಶಗಳಲ್ಲಿ ರಾಜೀ ಮಾಡಿಕೊಳ್ಳದ ರಾಜಕಾರಣಿ. ಅವರ ಸ್ವಾಭಿಮಾನಕ್ಕೆ ಧಕ್ಕೆಯಾದಲ್ಲಿ ತಕ್ಷಣವೇ ಪಕ್ಷಬಿಟ್ಟು ಹೋರಾಟಕ್ಕೆ ನಿಂತು ಎದುರಾಳಿಗಳನ್ನು ಮಣ್ಣು ಮುಕ್ಕಿಸುತ್ತಿದ್ದರು. ಅವರು ಹೋದ ಪಕ್ಷಗಳಿಗೆ ಅವರು ಆಸ್ತಿಯಾಗಿದ್ದರು. ಡಿ.ಟಿ.ಜಯಕುಮಾರ್ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಪ್ರಸಾದ್ ಅವರು ಡಿ.ಟಿ.ಜಯಕುಮಾರ್ ಸಚಿವರಾಗಲೂ ಕಾರಣೀಭೂತರಾಗಿದ್ದರು. ಅವರ ಅಗಲಿಕೆ ಕೇಂದ್ರ ಹಾಗೂ ರಾಜ್ಯ ರಾಜಕಾರಣಕ್ಕೆ ವಿಶೇಷವಾಗಿ ಶೋಷಿತ ವರ್ಗಕ್ಕೆ ತುಂಬಲಾರದ ನಷ್ಟ ಎಂದರು.

ತಾಲೂಕು ಕಸಾಪ ಅಧ್ಯಕ್ಷೆ ಲತಾ ಮೋಹನ್ ಮಾತನಾಡಿ, ವಿ.ಶ್ರೀನಿವಾಸ ಪ್ರಸಾದ್ ಅವರು ದೈಹಿಕವಾಗಿ ನಮ್ಮನ್ನು ಅಗಲಿದ್ದರೂ ಸಹ ಅವರ ಅಭಿವೃದ್ಧಿ ಕೆಲಸಗಳು ಜೀವಂತವಾಗಿವೆ. ಅವರು ಎಂದಿಗೂ ಕೂಡ ದೀನ ದಲಿತರ, ಶೋಷಿತರ ಪರವಾಗಿ ಯೋಚನೆ ಮಾಡುತ್ತಿದ್ದರು. ಅಲ್ಲದೆ ಪ್ರತಿಯೊಂದು ಸಮುದಾಯಕ್ಕೂ ತಮ್ಮದೇ ಆದ ಕೊಡುಗೆಗಳನ್ನು ನೀಡುವ ಮೂಲಕ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಸಂಚಲನ ಮೂಡಿಸಿದವರು. ಅವರು ಇನ್ನಷ್ಟು ಕಾಲ ಬದುಕಿ ಯುವಕರಿಗೆ ಮಾರ್ಗ ದರ್ಶನ ನೀಡಬೇಕಿತ್ತು. ಅವರ ಅಗಲಿಕೆ ಸಮಾಜಕ್ಕೆ ತುಂಬಲಾರದ ನಷ್ಟ ಎಂದರು.

ಇದೇ ಸಂದರ್ಭ ಕಸಾಪ ಕಾರ್ಯದರ್ಶಿ ಎಂ.ಕೆ.ಮಂಜುನಾಥ್, ಎಂ.ರಂಗಸ್ವಾಮಿ, ಪ್ರಭಾಕರ್, ಶೋಭಾ, ಸಿ.ಎಂ. ಮಂಜುಳಾ, ಸತೀಶ್ ದಳವಾಯಿ, ಮಂಜುಳಾ ಅರಸ್, ತಾಲೂಕು ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಸಿದ್ದರಾಜು ಸೇರಿದಂತೆ ಹಲವರಿದ್ದರು.

ಅಪ್ರಾಪ್ತ ಬಾಲಕಿ ಮೇಲೆ ಸಂಬಂಧಿಯಿಂದಲೇ ಅತ್ಯಾಚಾರ

ಆರೋಪಿ ಪ್ರಭಾವಿಗಳ ಆಪ್ತ: ಬಂಧನ ವಿಳಂಬಕ್ಕೆ ಅನುಮಾನ

ನಂಜನಗೂಡು, ಮೇ 3– ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ನಡುವೆ ರಾಜಕೀಯ ಪ್ರಭಾವಿಗಳ ಆಪ್ತನೊಬ್ಬ ತನ್ನ ಹತ್ತಿರದ ಸಂಬಂಧಿ, ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರವೆಸಗಿರುವ ಬಗ್ಗೆ ನಂಜನಗೂಡು ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂಜನಗೂಡು ನಿವಾಸಿ ರಾಜೇಶ್ ಅಲಿಯಾಸ್ ದೈತ್ಯ ರಾಜೇಶ್ ತನ್ನ ಸಂಬಂಧಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಕಾಮುಕನಾಗಿದ್ದು, ಪ್ರಕರಣ ದಾಖಲಾಗಿ 8 ದಿನವಾದರೂ ಈತನನ್ನು ಬಂಧಿಸುವಲ್ಲಿ ನಂಜನಗೂಡು ಟೌನ್ ಠಾಣೆ ಪೊಲೀಸರು ವಿಫಲವಾಗಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ವಿವರ: ನಂಜನಗೂಡಿನ ಶ್ರೀರಾಂಪುರ ನಿವಾಸಿಯಾಗಿರುವ ಮಹಿಳೆ ಮೈಸೂರಿನ ಗಾರ್ಮೆಂಟ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಈಕೆಯ 16 ವರ್ಷದ ಪುತ್ರಿ ನಂಜನಗೂಡಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯು ವ್ಯಾಸಂಗ ಮಾಡುತ್ತಿದ್ದು, ಕಾಲೇಜಿಗೆ ರಜೆ ಇದ್ದಿದ್ದರಿಂದ ತನ್ನ ಸಂಬಂಧಿಯಾದ ರಾಜೇಶ್ ಅಲಿಯಾಸ್ ದೈತ್ಯ ರಾಜೇಶ್ ಅವರ ಮನೆಗೆ ಹೋಗಿ ಅಲ್ಲಿಂದ ಟ್ಯೂಷನ್‌ಗೆ ಹೋಗುತ್ತಿದ್ದಳು.

ಏ.24ರಂದು ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಬಾಲಕಿಯನ್ನು ಟ್ಯೂಷನ್‌ಗೆ ಬಿಡುವುದಾಗಿ ತಿಳಿಸಿ ಕಾರಿನಲ್ಲಿ ಕರೆದೊಯ್ದ ರಾಜೇಶ್, ಟ್ಯೂಷನ್‌ಗೆ ಕರೆದೊಯ್ಯದೇ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಮನೆಯೊಂದಕ್ಕೆ ಕರೆದೊಯ್ದು ಅತ್ಯಾಚಾರವೆಸಗಿದ್ದಾನೆ. ನಂತರ ಈ ವಿಚಾರವನ್ನು ಯಾರಿಗೂ ಹೇಳಬೇಡ ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದೆವು ಎಂದು ಹೇಳು, ನಿನಗೆ ಮೊಬೈಲ್ ಫೋನ್ ತೆಗೆದುಕೊಡುತ್ತೇನೆ ಎಂದು ಬಾಲಕಿಗೆ ಆಮಿಷವೊಡ್ಡಿದ ಈತ ಬೆಳಗ್ಗೆ 11 ಗಂಟೆ ಸುಮಾರಿಗೆ ಮನೆಗೆ ಬಿಟ್ಟು ಹೋಗಿದ್ದಾನೆ.

ಅತ್ಯಾಚಾರದಿಂದಾಗಿ ನೋವು ಅನುಭವಿಸುತ್ತಿದ್ದ ಬಾಲಕಿ ಈ ವಿಚಾರವನ್ನು ರಾಜೇಶ್‌ನ ತಾಯಿಗೆ ತಿಳಿಸಿದ್ದು, ಅವರು ತಮ್ಮ ಇತರ ಸಂಬಂಧಿಗಳಿಗೆ ವಿಷಯ ತಿಳಿಸಿ ಮೈಸೂರಿನ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಬಾಲಕಿಯ ತಾಯಿಯನ್ನು ಕರೆಸಿ ಎಲ್ಲವನ್ನು ವಿವರಿಸಿದ್ದಾನೆ ಈ ಹಿನ್ನೆಲೆಯಲ್ಲಿ ಬಾಲಕಿಯ ತಾಯಿ ನೀಡಿರುವ ದೂರಿನನ್ವಯ ಪೋಕ್ಸೋ ಕಾಯ್ದೆಯಡಿ ಏ.25ರಂದು ನಂಜನಗೂಡು ಟೌನ್ ಪೋಲಿಸರು ಪ್ರಕರಣ ದಾಖಲಿಸಿಕೊಂಡರಾದರೂ ರಾಜೇಶ್ ಅಲಿಯಾಸ್ ದೈತ್ಯ ರಾಜುವನ್ನು ಬಂಧಿಸಿಲ್ಲ. ಆರೋಪಿ ಆಡಳಿತರೂಢ ಪಕ್ಷದ ಪ್ರಭಾವಿಗಳಿಗೆ ಆಪ್ತನಾಗಿದ್ದು, ಏ.26ರಂದು ನಡೆದ ಚುನಾವಣೆಯಲ್ಲಿ ಈತ ಪ್ರಚಾರದಲ್ಲಿ ತೊಡಗಿಸಿಕೊಂಡು ಓಡಾಡಿಕೊಂಡಿದ್ದರೂ ಪೊಲೀಸರು ಬಂಧಿಸಿಲ್ಲ. ಅಲ್ಲದೇ ಘಟನೆ ನಡೆದು 8 ದಿನವಾಗಿದ್ದರೂ ಆತನ ಪತ್ತೆಗಾಗಿ ಪೊಲೀಸರು ಪ್ರಯತ್ನವನ್ನೇ ಪಟ್ಟಿಲ್ಲ ಎಂಬ ಆರೋಪಗಳು ಕೇಳಿ ಬಂದಿವೆ.

ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ ಮೇ 6ರವರೆಗೆ ಅವಕಾಶ

ಮೈಸೂರು, ಮೇ 3(ಎಂಕೆ)– ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರ, ನೈರುತ್ಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ ಹೊಸದಾಗಿ ಮತದಾರರ ಪಟ್ಟಿ ಸೇರ್ಪಡೆಗೆ ಅರ್ಜಿ ಸಲ್ಲಿಸಲು ಮೇ 6 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಚುನಾವಣಾ ದಿನಾಂಕ ಪ್ರಕಟಿಸಲಾಗಿದ್ದು, ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯನ್ನೊಳಗೊಂಡ ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 18,379 ಮಂದಿ(ಪುರುಷರು–10355, ಮಹಿಳೆಯರು–8022, ಇತರೆ–2)ಮತದಾರರಿದ್ದಾರೆ. ಅದರಂತೆ ಕರ್ನಾಟಕ ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ 19,380 ಮಂದಿ (ಪುರುಷರು–8943, ಮಹಿಳೆಯರು–10437)ಮತದಾರರಿದ್ದಾರೆ. ಕರ್ನಾಟಕ ನೈರುತ್ಯ ಪದವೀಧರರ ಕ್ಷೇತ್ರದಲ್ಲಿ 74,218 ಮಂದಿ(ಪುರುಷರು–38051, ಮಹಿಳೆಯರು–36162, ಇತರೆ–5)ಮತದಾರರಿದ್ದಾರೆ. ಈವರೆಗೆ ಮತದಾರರ ಪಟ್ಟಿಗಳಲ್ಲಿ ನೋಂದಾಯಿಸದೇ ಇರುವ ಅರ್ಹ ಮತದಾರರಿಂದ ನಿಗದಿತ ನಮೂನೆಗಳಲ್ಲಿ ಅರ್ಜಿಗಳನ್ನು ಸಲ್ಲಿಸಲು ಅಂತಿಮ ಅವಕಾಶ ಕಲ್ಪಿಸಲಾಗಿದೆ. ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತರ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ, ತಹಶೀಲ್ದಾರರ ಕಚೇರಿಗಳಲ್ಲಿ ಹಾಗೂ ಮಹಾನಗರಪಾಲಿಕೆ ಕಚೇರಿಗಳಲ್ಲಿ ಮೇ 6ರ ಸಂಜೆ 5 ಗಂಟೆಯವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ.

ಮತಗಟ್ಟೆ ಪುಡಿಗಟ್ಟಿ ಬಂಧನ ಭೀತಿಯಿಂದ ಊರು ಬಿಟ್ಟ ಜನ

ಕಟ್ಟಿ ಹಾಕಿದಲ್ಲೇ ಮೇವು, ನೀರಿಲ್ಲದೇ ಪ್ರಾಣ ಬಿಟ್ಟ ಜಾನುವಾರುಗಳು



ಚಾಮರಾಜನಗರ: ಬಂಧನ ಭೀತಿಯಿಂದ ಗ್ರಾಮಸ್ಥರು ಊರು ಬಿಟ್ಟು ಹೋಗಿದ್ದು ಮೇವು, ನೀರಿಲ್ಲದೆ ಜಾನುವಾರುಗಳು ಮೃತಪಟ್ಟಿರುವ ಘಟನೆ ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದಲ್ಲಿ ಬೆಳಕಿಗೆ ಬಂದಿದೆ. ಗ್ರಾಮದ ಪುಟ್ಟತಂಬಡಿ ಮುರುಗೇಶ್ ಎಂಬವರಿಗೆ ಸೇರಿದ ಒಂದು ಹಸು, ಎರಡು ಎಮ್ಮೆಗಳು ಕಟ್ಟಿ ಹಾಕಿದ ಸ್ಥಳದಲ್ಲೇ ಕೊನೆಯುಸಿರೆಳೆದಿವೆ.

ಇತ್ತೀಚಿಗೆ, ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಇಂಡಿಗನತ್ತ ಗ್ರಾಮದ ಜನರು ಮತದಾನ ಬಹಿಷ್ಕರಿಸಲು ತೀರ್ಮಾನಿಸಿದ್ದರು. ಈ ಬಗ್ಗೆ ಮಾಹಿತಿ ಪಡೆದ ಅಧಿಕಾರಿಗಳು ಮನವೊಲಿಕೆಗೆ ಗ್ರಾಮಕ್ಕೆ ತೆರಳಿದ್ದರು. ಇದರಿಂದ ಕೋಪಗೊಂಡ ಕೆಲವರು ಮತಗಟ್ಟೆ ಧ್ವಂಸ ಮಾಡಿದ್ದರು. ಈ ಘಟನೆಗೆ ಸಂಬಂಧಿಸಿದಂತೆ 25 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಬಂಧನ ಭೀತಿಯಿಂದ ಬಹುತೇಕ ಗ್ರಾಮಸ್ಥರು ಮನೆ ತೊರೆದಿದ್ದಾರೆ. ಪರಿಣಾಮ, ಕುಡಿಯಲು ನೀರು, ಮೇವಿಲ್ಲದೇ ಜಾನುವಾರುಗಳು ಪ್ರಾಣಬಿಟ್ಟಿವೆ.

ಬಿಜೆಪಿ ಜೊತೆಗಿನ ಮೈತ್ರಿ ಸದ್ಯಕ್ಕೆ ನನಗೆ ಮುಖ್ಯ ಅಲ್ಲ: ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ



ರಾಯಚೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ತೀವ್ರ ಪೇಚಿಗೆ ಸಿಲುಕಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ ಬಿಜೆಪಿಯೊಂದಿಗಿನ ಮೈತ್ರಿ ಉಳಿಸಿಕೊಳ್ಳುವ ಉತ್ಸಾಹ ಕಳೆದುಕೊಂಡಿದ್ದಾರೆ.

ರಾಯಚೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಚ್ ಡಿ ಕುಮಾರಸ್ವಾಮಿ, ಪ್ರಜ್ವಲ್ ರೇವಣ್ಣ 400 ಮಹಿಳೆಯರನ್ನು ರೇಪ್ ಮಾಡಿದ್ದಾರೆ ಎಂದು ರಾಹುಲ್ ಗಾಂಧಿ ಹೇಳುತ್ತಾರೆ. ಅವರಿಗೆ ಈ ಮಾಹಿತಿ ಕೊಟ್ಟವರು ಯಾರು, ರಾಜ್ಯ ಸರ್ಕಾರ ಕೊಡ್ತಾ. ಈ ಕುರಿತು ಬೇಕಾಬಿಟ್ಟಿ ಹೇಳಿಕೆ ನೀಡಿರುವ ರಾಹುಲ್‌ಗೆ ಮೊದಲು ಎಸ್‌ಐಟಿಯಿಂದ ನೋಟಿಸ್ ಕೊಡಿಸಲಿ ಎಂದು ಸಿಎಂ ಸಿದ್ದರಾಮಯ್ಯಗೆ ಎಚ್.ಡಿ. ಕುಮಾರಸ್ವಾಮಿ ಸವಾಲು ಹಾಕಿದರು.

ಈಗ ಬಿಡುಗಡೆಯಾಗಿರುವ ವಿಡಿಯೋಗಳಲ್ಲಿ ಪ್ರಜ್ವಲ್ ಮುಖ ಕಾಣುತ್ತಿಲ್ಲ. ಹಾಗಂತ ನಾನೇನು ಆ ವಿಡಿಯೋಗಳನ್ನು ನೋಡಿಲ್ಲ. ಇಷ್ಟಾದರೂ ಸಹಿಸಿಕೊಂಡಿದ್ದೇವೆ. ಕಾಂಗ್ರೆಸ್‌ನ ಮಹಾನಾಯಕ ತೋಟದಲ್ಲಿ ಏನೇನಾಗಿದೆ. 6–7 ಜನರನ್ನು ಹೋಟೆಲ್‌ನಲ್ಲಿ ಇಟ್ಟಿದಿಯಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು. ನಂತರ ಪತ್ರಕರ್ತರೊಬ್ಬರು ಬಿಜೆಪಿ ಮೈತ್ರಿ ಏನಾಗಬಹುದು ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸದ್ಯಕ್ಕೆ ತನಗೆ ಮೈತ್ರಿ ಮುಖ್ಯ ಅಲ್ಲ. ಮುಂದೆ ನೋಡೋಣ ಎಂದು ಹೇಳಿದರು.

ಅಮಿತ್ ಶಾ ನಕಲಿ ವೀಡಿಯೋ ಪ್ರಕರಣ: ಕಾಂಗ್ರೆಸ್ ಸದಸ್ಯನ ಬಂಧನ

ನವದೆಹಲಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಕಲಿ ವೀಡಿಯೊ ಅಪ್‌ಲೋಡ್ ಮತ್ತು ಹಂಚಿಕೆ ಆರೋಪದ ಮೇಲೆ ಕಾಂಗ್ರೆಸ್ ಸದಸ್ಯರೊಬ್ಬರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅರುಣ್ ರೆಡ್ಡಿ ಬಂಧಿತ ಆರೋಪಿ. ಈತ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಸ್ಪಿರಿಟ್ ಆಫ್ ಕಾಂಗ್ರೆಸ್ ಖಾತೆಯನ್ನು ನಿರ್ವಹಣೆ ಮಾಡುತ್ತಿದ್ದರು ಎನ್ನಲಾಗಿದೆ.

ಮೂರನೇ ಪುಟದಿಂದ

ರೇವಣ್ಣ ವಿರುದ್ಧ ಪ್ರಕರಣ ದಾಖಲು

ಮನೆಯಲ್ಲಿ 6 ವರ್ಷ ಕಾಲ ಕೆಲಸ ಮಾಡಿದ್ದು, ಕೊನೆಗೆ ಅಲ್ಲಿ ಬಿಟ್ಟು ಬಂದು ಕಳೆದ 3 ವರ್ಷದಿಂದ ತನ್ನ ಗ್ರಾಮದಲ್ಲೇ ಕೂಲಿ ಕೆಲಸ ಮಾಡಿಕೊಂಡಿದ್ದಳು. ಲೋಕಸಭಾ ಚುನಾವಣೆಗೆ 3–4 ದಿನದ ಹಿಂದೆ ಸತೀಶ್ ಬಾಬಣ್ಣ ಎಂಬಾತ ರೇವಣ್ಣ ಅವರ ಪತ್ನಿ ಭವಾನಿ ಅವರು ಕರೆಯುತ್ತಿದ್ದಾರೆ ಎಂದು ಮಹಿಳೆಯನ್ನು ಕರೆದೊಯ್ದಿದ್ದಾನೆ. ಚುನಾವಣೆ ದಿನ ಆಕೆಯನ್ನು ಮನೆಗೆ ತಂದು ಬಿಟ್ಟ ಸತೀಶ್, ಮಹಿಳೆ ಮತ್ತು ಆಕೆಯ ಪತಿಗೆ 'ನೀವು ಪೊಲೀಸರು ಕರೆದರೆ ಹೋಗಬೇಡಿ, ಪೊಲೀಸರಿಗೆ ಸಿಕ್ಕಬೇಡಿ, ನಿಮ್ಮ ಮೇಲೆ ಕೇಸ್ ಆಗುತ್ತದೆ' ಎಂದು ಹೆದರಿಸಿದ್ದಲ್ಲದೆ, ಪೊಲೀಸರು ಕರೆದರೆ ನನಗೆ ಹೇಳಿ ನಾನು ಕರೆದುಕೊಂಡು ಹೋಗುತ್ತೇನೆ ಎಂದು ತಿಳಿಸಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಹೇಳಲಾಗಿದೆ.

ನಂತರ ಮತ್ತೆ ಏ.29ರಂದು ರಾತ್ರಿ ಮಹಿಳೆ ಮನೆಗೆ ಬಂದ ಸತೀಶ್, ಆಕೆಯ ಮಗನೊಂದಿಗೆ 'ನಿಮ್ಮ ತಾಯಿ ಪೊಲೀಸರಿಗೆ ಸಿಕ್ಕಿಹಾಕಿಕೊಂಡರೆ ಕೇಸ್ ಆಗುತ್ತದೆ. ನೀವೂ ಜೈಲಿಗೆ ಹೋಗಬೇಕಾಗುತ್ತದೆ. ರೇವಣ್ಣ ಸಾಹೇಬರು ಕರೆದುಕೊಂಡು ಬರಲು ಹೇಳಿದ್ದಾರೆ' ಎಂದು ತಿಳಿಸಿ ಮಹಿಳೆಯನ್ನು ಕರೆದೊಯ್ದಿದ್ದಾನೆ. ಈ ನಡುವೆ ಮೇ.1ರಂದು ಮಹಿಳೆಯ ಪುತ್ರನ ಸ್ನೇಹಿತರು ಮತ್ತು ಸಂಬಂಧಿಕರು, ವೀಡಿಯೋ ಬಂದಿದೆ. ಅದರಲ್ಲಿ ನಿಮ್ಮ ತಾಯಿ ಕೈ ಕಾಲು ಕಟ್ಟಿದರೂ ಬಿಡದೇ ಪ್ರಜ್ವಲ್ ಅವರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ದೊಡ್ಡ ಕೇಸ್ ಆಗಿದೆ ಎಂದು ಪುತ್ರನಿಗೆ ತಿಳಿಸುತ್ತಾರೆ. ಈ ಹಿನ್ನಲೆಯಲ್ಲಿ ಮಹಿಳೆಯ ಪುತ್ರ ತನ್ನ ತಾಯಿಯ ಬಗ್ಗೆ ಸತೀಶ್‌ನನ್ನು ಕೇಳಿದಾಗ ಆತ, ರೇವಣ್ಣ ಸಾಹೇಬರ ಮಗ ಯಾರೊಂದಿಗೋ ಗಲಾಟೆ ಮಾಡುವಾಗ ನಿಮ್ಮ ತಾಯಿ ದೊಣ್ಣೆ ಹಿಡಿದುಕೊಂಡು ನಿಂತಿರುವ ಫೋಟೋ ಸಿಕ್ಕಿದೆ. ಅದಕ್ಕೆ ಎಫ್‌ಐಆರ್ ಆಗಿದೆ. ಆಕೆಯನ್ನು ಜಾಮೀನಿನಲ್ಲಿ ಬಿಡಿಸಿಕೊಂಡು ಬರಬೇಕು ಎಂದು ಹೇಳಿದ್ದಲ್ಲದೇ, ನೀನು ನಿನ್ನ ಫೋನಿನಲ್ಲಿ ಮಾತನಾಡಬೇಡ ಬೇರೆಯವರ ಫೋನಿನಲ್ಲಿ ಮಾತನಾಡು ಎಂದು ಮಹಿಳೆಯ ಮಗನಿಗೆ ಹೇಳಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.


ನಮ್ಮ ತಾಯಿಯನ್ನು ಅಪಹರಿಸಿ ಯಾವುದೋ ಜಾಗದಲ್ಲಿ ಕೂಡಿ ಹಾಕಿದ್ದಾರೆ. ಆಕೆಯ ಜೀವಕ್ಕೆ ಅಪಾಯವಿದೆ ಎಂದು ಮಹಿಳೆಯ ಪುತ್ರ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆ.ಆರ್.ನಗರ ಠಾಣೆ ಪೊಲೀಸರು ಈಗಾಗಲೇ ಸತೀಶ್ ಬಾಬಣ್ಣ ಎಂಬಾತನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಇತ್ತ ತಮ್ಮ ವಿರುದ್ಧ ಜಾಮೀನು ರಹಿತ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗುತ್ತಿದ್ದಂತೆಯೇ ಹೆಚ್.ಡಿ.ರೇವಣ್ಣ ಅವರು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ವಿಚಾರಣೆಯನ್ನು ನಾಳೆ ಬೆಳಗ್ಗೆ 11 ಗಂಟೆಗೆ ಮುಂದೂಡಿದೆ.

ಮೈಸೂರು ಮೃಗಾಲಯದ ನಿವಾಸಿಗಳು ಬಿರು ಬಿಸಿಲಲ್ಲೂ ತಂಪು... ತಂಪು...

ಎಂ.ಟಿ.ಯೋಗೇಶ್ ಕುಮಾರ್



ಚಿತ್ರಗಳು: ಎಂ.ಎನ್.ಲಕ್ಷ್ಮೀ ನಾರಾಯಣ ಯಾದವ್



ಮೈಸೂರು, ಮೇ 3– ಬಿಸಿಲಿನ ಬೇಗೆಯಿಂದ ಪ್ರಾಣಿ–ಪಕ್ಷಿ ಸಂಕುಲವನ್ನು ಸಂರಕ್ಷಿಸಲು ಮೈಸೂರು ಮೃಗಾಲಯದಲ್ಲಿ ವಿವಿಧ ಮಾರ್ಗೋಪಾಯ ಅನುಸರಿಸುತ್ತಿದ್ದು ಸ್ಪ್ರಿಂಕ್ಲರ್, ಫಾಗರ್ ಹಾಗೂ ದೇಹದಲ್ಲಿ ನೀರಿನ ಅಂಶ ಹೆಚ್ಚಿಸುವ ಆಹಾರ ಪೂರೈಸಿ ಪ್ರಾಣಿ–ಪಕ್ಷಿಗಳ ಹಿತಕಾಯುವ ಮೂಲಕ ಪ್ರಶಂಸೆಗೆ ಪಾತ್ರವಾಗಿದೆ.

ಇದುವರೆಗೂ 32ರಿಂದ 36 ಡಿಗ್ರಿ ಉಷ್ಣಾಂಶ ದಾಖಲಾಗುತ್ತಿದ್ದ ಮೈಸೂರಲ್ಲಿ ಇದೀಗ 40 ಡಿಗ್ರಿ ಉಷ್ಣಾಂಶ ದಾಖಲಾಗಿದ್ದು, ಜನ ಕಂಗಾಲಾಗಿದ್ದಾರೆ. ದೇಶದ ಮುಂಚೂಣಿ ಮೃಗಾಲಯಗಳಲ್ಲಿ ಒಂದಾಗಿರುವ ಮೈಸೂರು ಮೃಗಾಲಯದಲ್ಲಿ 1200ಕ್ಕೂ ಹೆಚ್ಚು ಪ್ರಾಣಿ–ಪಕ್ಷಿಗಳಿದ್ದು, ಅವುಗಳನ್ನು ಬಿಸಿಲಿನ ಬೇಗೆಯಿಂದ ಸಂರಕ್ಷಿಸುವುದು ಮೃಗಾಲಯದ ಸಿಬ್ಬಂದಿಗಳಿಗೆ ಸವಾಲಾಗಿ ಪರಿಣಮಿಸಿದೆ. ಆದರೂ ವಿವಿಧ ಕ್ರಮಗಳ ಮೂಲಕ ಪ್ರಾಣಿ–ಪಕ್ಷಿಗಳ ಹಿತಕಾಯಲಾಗುತ್ತಿದೆ.

ತಂಪೆರೆಯುತ್ತಿವೆ ಸ್ಪ್ರಿಂಕ್ಲರ್‌ಗಳು: ಮೃಗಾಲಯದಲ್ಲಿರುವ ಆನೆ, ಜಿರಾಫೆ, ಕಾಡೆಮ್ಮೆ, ಚಿಂಪಾಂಜಿ, ಗೊರಿಲ್ಲಾ, ಒರಾಂಗೂಟಾನ ಸೇರಿದಂತೆ ಇನ್ನಿತರ ಪ್ರಾಣಿಗಳ ವಿಶ್ರಾಂತಿ ತಾಣದಲ್ಲಿ ಬೆಳಗ್ಗೆ, ಮಧ್ಯಾಹ್ನ ಹಾಗೂ ಸಂಜೆ ವೇಳೆ ದಿನಕ್ಕೆ ಮೂರು ಬಾರಿ ಸ್ಪ್ರಿಂಕ್ಲರ್ ಮೂಲಕ ನೀರನ್ನು ಚಿಮುಕಿಸಿ ವಾತಾವರಣ ತಂಪಾಗಿಸಲಾಗುತ್ತಿದೆ ಇದರಿಂದ ಅಲ್ಲಿರುವ ಪ್ರಾಣಿಗಳು ಜಿನುಗುವ ನೀರಿಗೆ ಮೈಯೊಡ್ಡಿ ಆನಂದಿಸುತ್ತಿವೆ.

ಪಕ್ಷಿಗಳ ಮನೆಯೊಳಗೆ ಫಾಗರ್: ಮೃಗಾಲಯದಲ್ಲಿರುವ ಅಪರೂಪ ಪಕ್ಷಿ ಸಂಕುಲ, ವಿದೇಶಿ ಪಕ್ಷಿಗಳಿರುವ ಬೋನ್(ಮನೆ)ಗಳಲ್ಲಿ ಏರ್‌ಕೂಲರ್ ಮಾದರಿಯಲ್ಲಿ ಫಾಗರ್ ಅಳವಡಿಸಲಾಗಿದೆ. ಇದರಿಂದ ನೀರಿನ ಅಂಶ ಗಾಳಿಯಲ್ಲಿ ನಿಧಾನವಾಗಿ ಹರಡುವುದರಿಂದ ಪಕ್ಷಿಗಳಿರುವ ಮನೆಗಳ ತಂಪಾಗಿರುತ್ತವೆ. ಇದರಿಂದ ಪಕ್ಷಿಗಳು ಬಿಸಿಲಿನ ಬೇಗೆಯಿಂದ ರಕ್ಷಣೆ ಪಡೆದುಕೊಂಡಂತಾಗಿದೆ.

ಸಸ್ಯಹಾರಿ ಪ್ರಾಣಿಗಳಿಗೆ ಕೆಸರು ಗುಂಡಿ: ಜಿಂಕೆ, ಸಾಂಬರ್, ಆನೆ ಹಾಗೂ ಇನ್ನಿತರ ಪ್ರಾಣಿಗಳಿರುವ ಸ್ಥಳದಲ್ಲಿ ಕೆಸರು ಇರುವಂತೆ ಗುಂಡಿ ನಿರ್ಮಿಸಿ, ನೀರು ಸರಬರಾಜು ಮಾಡಲಾಗಿದೆ. ಇದರಿಂದ ಬಿಸಿಲು ಹೆಚ್ಚಾಗುತ್ತಿದ್ದಂತೆ ಈ ಪ್ರಾಣಿಗಳು ಕೆಸರಿನ ಗುಂಡಿಯಲ್ಲಿ ವಿರಮಿಸಿ ದೇಹವನ್ನು ತಣಿಸಿಕೊಳ್ಳುತ್ತಿವೆ.

ನೀರಿನ ಅಂಶವುಳ್ಳ ಆಹಾರ ಪದಾರ್ಥ: ಗೊರಿಲ್ಲಾ, ಚಿಂಪಾಂಜಿ, ಒರಾಂಗೂಟಾನ ಸೇರಿದಂತೆ ಕೋತಿ ಜಾತಿಗೆ ಸೇರಿದ ಪ್ರಾಣಿಗಳಿಗೆ ಆಹಾರದೊಂದಿಗೆ ಎಳನೀರು, ಗ್ಲೂಕೋಸ್, ಓಆರ್‌ಎಸ್, ಕರ್ಬೂಜಾ, ಕಲ್ಲಂಗಡಿ ಹಣ್ಣು, ಪರಂಗಿ ಹಣ್ಣು, ಐಸ್‌ಕ್ರೀಮ್, ಕರಡಿಗಳಿಗೆ ಐಸ್ ಟ್ಯೂಬ್ ಸೇರಿದಂತೆ ನೀರಿನ ಅಂಶವುಳ್ಳ ಹಣ್ಣುಗಳನ್ನು ಹೆಚ್ಚಾಗಿ ನೀಡಲಾಗುತ್ತಿದೆ. ಸಸ್ಯಹಾರಿ ಪ್ರಾಣಿಗಳಿಗೆ ಹಸಿ ಉಲ್ಲು, ವಿವಿಧ ಹಸಿ ಸೊಪ್ಪು ನೀಡಲಾಗುತ್ತಿದೆ.

ಮೇಲ್ಛಾವಣಿಯಲ್ಲಿ ಗಾರ್ಡನ್: ಇದೇ ಮೊದಲ ಬಾರಿಗೆ ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳಿರುವ ಮನೆಗಳ ಮೇಲೆ ಗಾರ್ಡನ್ ಬೆಳೆಸಲಾಗುತ್ತಿದ್ದು, ಇದರಿಂದ ಮೇಲ್ಛಾವಣಿಯಲ್ಲಿ ಬಿಸಿಲಿನ ತಾಪ ಕಡಿಮೆಗೊಳಿಸುವ ಪ್ರಯತ್ನ ಮಾಡಲಾಗಿದೆ. ಇದರಿಂದ ಬಿಸಿಲಿನ ಪ್ರಮಾಣ ನಿಯಂತ್ರಿಸಲು ಸಹಕಾರಿಯಾಗಿದೆ.

ಮಾಂಸಹಾರಿ ಪ್ರಾಣಿಗಳಿಗೂ ಡಯೆಟ್: ಮಾಂಸಹಾರಿ ಪ್ರಾಣಿಗಳ ಆರೋಗ್ಯ ಕಾಪಾಡಲು ದೈನಂದಿನ ಆಹಾರ ಪದ್ಧತಿಯಲ್ಲಿ ಮಾರ್ಪಾಡು ಮಾಡಲಾಗಿದೆ. ಬಿಸಿಲಿನ ಬೇಗೆಯಿಂದಾಗಿ ಈ ಹಿಂದೆ ನೀಡಲಾಗುತ್ತಿದ್ದ ಮಾಂಸದ ಪ್ರಮಾಣ ಕಡಿಮೆ ಮಾಡಲಾಗಿದ್ದು, ನೀರಿನ ಅಂಶ ದೇಹ ಸೇರುವಂತೆ ಕಟ್ಟೆಚ್ಚರ ವಹಿಸಲಾಗಿದೆ. ಅಲ್ಲದೆ ಹುಲಿ, ಸಿಂಹ, ಚಿರತೆ ಇರುವ ಸ್ಥಳದಲ್ಲೂ ಕೃತಕ ಜಲಪಾತ, ನೀರಿನ ಹಳ್ಳ ನಿರ್ಮಿಸಿರುವುದರಿಂದ ಅದರಲ್ಲೂ ಈ ಪ್ರಾಣಿಗಳು ವಿರಮಿಸಿ ದೇಹ ತಂಪಾಗಿಸಿಕೊಳ್ಳುತ್ತಿವೆ.

ಮೃಗಾಲಯದ ವಾತಾವರಣವೇ ಕೂಲ್: ಮೈಸೂರಿನ ಚಾಮರಾಜೇಂದ್ರ ಮಗಾಲಯದ ವಾತಾವರಣವೇ ತಂಪಾಗಿದೆ. ಮೈಸೂರು ನಗರದ ವಾತಾವರಣ 38–40 ಡಿಗ್ರಿ ಇದ್ದರೆ, ಮೃಗಾಲಯದ ಆವರಣದಲ್ಲಿ ಉಷ್ಣಾಂಶ 35–36 ಡಿಗ್ರಿ ಇರುತ್ತದೆ. ಸಾಕಷ್ಟು ಮರಗಳಿರುವುದರಿಂದ ಹಾಗೂ ಸಣ್ಣ–ಪುಟ್ಟ ಕೊಳ ಇರುವುದರಿಂದ ಮೃಗಾಲಯದ ವಾತಾವರಣ ಯಾವಾಗಲೂ ತಂಪಾಗಿರುತ್ತದೆ.




ನೀರಿಗೆ ಮೈಯೊಡ್ಡಿರುವ ಗೊರಿಲ್ಲಾ.

ಪ್ರಾಣಿ–ಪಕ್ಷಿಗಳ ಹಿತ ಮುಖ್ಯ

ಇತ್ತೀಚಿನ ದಿನಗಳಲ್ಲಿ ಉಷ್ಣಾಂಶ ಹೆಚ್ಚಾಗಿದ್ದರೂ, ಮೃಗಾಲಯದಲ್ಲಿ ಈ ಹಿಂದೆ ಕೈಗೊಂಡ ಕ್ರಮ ಉತ್ತಮ ಫಲಿತಾಂಶ ನೀಡಿದೆ. ಪ್ರಾಣಿಗಳಿಗೆ ನೀರು ಚಿಮುಕಿಸಲು ಸ್ಪ್ರಿಂಕ್ಲರ್‌ಗಳು, ಪಕ್ಷಿಗಳ ಮನೆಗಳಿಗೆ ಫಾಗರ್ ಅಳವಡಿಸಲಾಗಿದೆ. ಸಸ್ಯಹಾರಿ ಪ್ರಾಣಿಗಳಿಗೆ ಓಆರ್‌ಎಸ್, ಎಳನೀರು ನೀಡಲಾಗುತ್ತಿದೆ. ಜಿಂಕೆ ಹಾಗೂ ಇನ್ನಿತರ ಪ್ರಾಣಿಗಳಿಗೆ ಕೆಸರಿನ ಗುಂಡಿ ನಿರ್ಮಿಸಲಾಗಿದೆ. ಸಕ್ಕರೆ ಅಂಶವುಳ್ಳ ಪದಾರ್ಥ ಕಡಿಮೆ ಮಾಡಿ, ನೀರಿನ ಅಂಶ ಹೆಚ್ಚಾಗಿರುವ ಹಣ್ಣುಗಳನ್ನು ನೀಡಲಾಗುತ್ತಿದೆ. ಇದರಿಂದ ಮೃಗಾಲಯದಲ್ಲಿರುವ ಎಲ್ಲಾ ಪ್ರಾಣಿ–ಪಕ್ಷಿಗಳನ್ನು ಬಿಸಿಲಿನ ಬೇಗೆಯಿಂದ ರಕ್ಷಿಸಲಾಗಿದೆ. ಅವುಗಳ ಹಿತ ಕಾಯುವುದು ನಮ್ಮ ಗುರಿಯಾಗಿದ್ದು, ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲಾಗಿದೆ.

- ಡಿ.ಮಹೇಶ್ ಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕ ಮೈಸೂರು ಮೃಗಾಲಯ



ಐಸ್‌ಕ್ರೀಮ್ ಸವಿಯುತ್ತಿರುವ ಗೊರಿಲ್ಲಾ ಕ್ವಾಂಬೋ

ಕೆಎಸ್‌ಐಸಿ ಹೊರಗುತ್ತಿಗೆ; ಇತರೆ ನೌಕರರ ಸಂಘ ಉದ್ಘಾಟನೆ



ಮೈಸೂರಿನ ಕೆಎಸ್‌ಐಸಿ ಹೊರಗುತ್ತಿಗೆ ಮತ್ತು ಇತರೆ ನೌಕರರ ಸಂಘವನ್ನು ಮೈಸೂರು ಡಿಸ್ಟ್ರಿಕ್ಟ್ ಲೋಡರ್ಸ್ ಟ್ರಾನ್ಸ್‌ಪೋರ್ಟ್ಸ್ ಜನರಲ್ ವರ್ಕರ್ಸ್ ಅಸೋಸಿಯೇಷನ್ ಮಾಜಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಉದ್ಘಾಟಿಸಿದರು. ಇದೇ ವೇಳೆ ಕಾರ್ಮಿಕರ ದಿನ ಆಚರಿಸಲಾಯಿತು. ಮೈಸೂರಿನ ಪೀಪಲ್ಸ್ ಲೀಗಲ್ ಫೋರಮ್ ನಿರ್ದೇಶಕ ಪಿ.ಪಿ.ಬಾಬುರಾಜ್, ಎಪಿಎಂಸಿ ಮಾಜಿ ಉಪಾಧ್ಯಕ್ಷ, ಸಾಮಾಜಿಕ ಹೋರಾಟಗಾರ ಚಿಕ್ಕ ಜವರಯ್ಯ ಇನ್ನಿತರರಿದ್ದರು.

ಕಾರ್ಮಿಕ ದಿನಾಚರಣೆ ಅಂಗವಾಗಿ ರೈಲ್ವೆ ಸಿಬ್ಬಂದಿಗೆ ಅಭಿನಂದನೆ



ಮೈಸೂರಿನ ಯಾದವಗಿರಿಯ ಚಾಮುಂಡಿ ಕ್ಲಬ್‌ನಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಹಿನ್ನೆಲೆಯಲ್ಲಿ ವಿವಿಧ ವಿಭಾಗಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಅಭಿನಂದಿಸಿದರು.

ಮೈಸೂರು, ಮೇ.3(ಬಿಎಲ್‌ಯು)– ನೈರುತ್ಯ ರೈಲ್ವೆಯ ಮೈಸೂರು ವಿಭಾಗ ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿತು.

ನಗರದ ಯಾದವಗಿರಿಯ ಚಾಮುಂಡಿ ಕ್ಲಬ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರೈಲ್ವೆಯ ಸುರಕ್ಷತಾ ಸಂಬಂಧಿತ ವಿಭಾಗಗಳಲ್ಲಿ ಟ್ರ್ಯಾಕ್(ಹಳಿ) ನಿರ್ವಾಹಕರು, ಸಂವಹನ ನಿರ್ವಾಹಕರು, ಪಾಯಿಂಟ್ಸ್ ಮನ್, ಪಾಯಿಂಟ್ಸ್ ವುಮನ್, ಲೋಕೋ ಪೈಲೆಟ್, ರೈಲು ವ್ಯವಸ್ಥಾಪಕರು ಹಾಗೂ 20 ಕ್ಕಿಂತ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ 38 ಸಿಬ್ಬಂದಿಗಳನ್ನು ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ರಾಷ್ಟ್ರೀಯ ಪ್ರಗತಿಯನ್ನು ಮುನ್ನಡೆಸುವಲ್ಲಿ ಕಾರ್ಮಿಕರ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

ಸಿಬ್ಬಂದಿಗಳ ಅಚಲ ಸಮರ್ಪಣೆ, ಕಠಿಣ ಪರಿಶ್ರಮ ಮತ್ತು ಶ್ರೇಷ್ಠತೆಯ ನಿರಂತರ ಅನ್ವೇಷಣೆಗಾಗಿ ಇಡೀ ತಂಡಕ್ಕೆ ಶಿಲ್ಪಿ ಅಗರವಾಲ್ ಕೃತಜ್ಞತೆ ತಿಳಿಸಿದರು.

ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ವಿನಾಯಕ್ ನಾಯಕ್, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ವಿಷ್ಣುಗೌಡ, ಗತಿ ಶಕ್ತಿ ಘಟಕದ ಮುಖ್ಯ ಯೋಜನಾ ವ್ಯವಸ್ಥಾಪಕ ಆನಂದ ಭಾರತಿ, ಹಿರಿಯ ವಾಣಿಜ್ಯ ವ್ಯವಸ್ಥಾಪಕ ಲೋಹಿತೇಶ್ವರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಲಿಫ್ಟಿನಲ್ಲಿ ಸಿಲುಕಿದ್ದ ಹಿರಿಯ ವಕೀಲರ ರಕ್ಷಣೆ

ಹಾರೆಯ ಸಹಾಯದಿಂದ ಲಿಫ್ಟ್ ಬಾಗಿಲು ತೆರೆದರು

ಮೈಸೂರು, ಮೇ.3(ಜಿಎ)–ಮೈಸೂರಿನ ಜಯನಗರದಲ್ಲಿರುವ ನ್ಯಾಯಾಲಯದ ಲಿಫ್ಟಿನಲ್ಲಿ ಸಿಲುಕಿದ್ದ ಹಿರಿಯ ವಕೀಲರನ್ನು ಕಿರಿಯ ವಕೀಲರು ರಕ್ಷಿಸಿದ್ದಾರೆ.



ಎಂದಿನಂತೆ ವಕೀಲರು ನ್ಯಾಯಾಲಯದ ಲಿಫ್ಟ್ ಮೂಲಕ ತೆರಳುತ್ತಿರುವಾಗ ವಿದ್ಯುತ್ ಸಂಪರ್ಕ ಕಡಿತಗೊಂಡು 10 ಮಂದಿ ಹಿರಿಯ ವಕೀಲರು ಸಿಲುಕಿಕೊಂಡಿದ್ದರು. ಈ ವೇಳೆ ನ್ಯಾಯಾಲಯದ ಆವರಣದಲ್ಲಿದ್ದ ಕೆಲ ವಕೀಲರು ಲಿಫ್ಟ್ ತೆರೆಯಲು ಸಾಕಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ನಂತರ ಕೆಲ ಕಿರಿಯ ವಕೀಲರು ನ್ಯಾಯಾಲಯದ ಸಮೀಪದಲ್ಲಿದ್ದ ಮನೆಗೆ ತೆರಳಿ ಹಾರೆ ತಂದು ಲಿಫ್ಟ್‌ನ ಬಾಗಿಲು ಮೀಟಿ ಲಿಫ್ಟ್ ಬಾಗಿಲು ತೆರೆದರು. ಸುಮಾರು 20 ನಿಮಿಷಗಳ ಕಾಲ ಲಿಫ್ಟ್‌ನೊಳಗೆ ಸಿಲುಕಿದ್ದ ಹಿರಿಯ ವಕೀಲರು ಹೊರ ಬಂದು ನಿಟ್ಟುಸಿರು ಬಿಟ್ಟಿದ್ದಾರೆ. ಕಿರಿಯ ವಕೀಲರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ದೇವರಾಜ ಅರಸು ರಸ್ತೆಯಲ್ಲಿ ಹೊತ್ತಿ ಉರಿದ ಎಲೆಕ್ಟ್ರಿಕ್ ಸ್ಕೂಟರ್

ಮೈಸೂರು, ಮೇ 3(ಎಂಕೆ)– ನಗರದ ಡಿ.ದೇವರಾಜ ಅರಸು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಎಲೆಕ್ಟ್ರಿಕ್ ಸ್ಕೂಟರೊಂದು ಧಗಧಗನೆ ಹೊತ್ತಿ ಉರಿದ ಘಟನೆ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ. ಇಲ್ಲಿನ ಬಟ್ಟೆ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಸಿಬ್ಬಂದಿಯ ಎಲೆಕ್ಟ್ರಿಕ್ ಸ್ಕೂಟರ್ (ಕೆಎ.11.ಇಟಿ.4088)ನಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡ ಕ್ಷಣಾರ್ಧದಲ್ಲೇ ಬ್ಯಾಟರಿ ಸ್ಫೋಟಗೊಂಡು ಹೊತ್ತಿ ಉರಿಯಲಾರಂಭಿಸಿದೆ.



ಕೂಡಲೇ ಅಕ್ಕ–ಪಕ್ಕದ ಮಳಿಗೆದಾರರು, ದೇವರಾಜ ಸಂಚಾರ ಠಾಣೆ ಪೊಲೀಸರು ಹೊತ್ತಿ ಉರಿಯುತ್ತಿದ್ದ ಸ್ಕೂಟರ್‌ಗೆ ನೀರು ಎರಚಿ ಬೆಂಕಿ ನಂದಿಸಿದ್ದಾರೆ. ಅದೃಷ್ಟವಶಾತ್ ಮಳಿಗೆಗಳು, ಸಮೀಪದಲ್ಲಿ ನಿಲ್ಲಿಸಿದ್ದ ಇತರ ಸ್ಕೂಟರ್ ಹಾಗೂ ಬೈಕ್‌ಗಳಿಗೆ ಬೆಂಕಿ ವ್ಯಾಪಿಸಿಲ್ಲ.

ಪೋಷಕರ ಮನಕ್ಕೆ ಮುದ ನೀಡಿದ ಚಿಣ್ಣರ ನಾಟಕಗಳು





ಮೈಸೂರು, ಮೇ 3(ಎಂಕೆ)– ಹೊರಗೆ ಮಳೆಯ ಸಿಂಚನ... ಒಳಗೆ ಚಿಣ್ಣರ ಚಿಲಿಪಿಲಿಗಳ ನೃತ್ಯ– ನರ್ತನ...!

ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ಚಿಣ್ಣರಮೇಳ–2024ರ ಅಂಗವಾಗಿ ಹಮ್ಮಿಕೊಂಡಿರುವ ಚಿಣ್ಣರ ನಾಟಕೋತ್ಸವದ ಎರಡ ದಿನ 'ಕಿತ್ತಲೆ ಕೆಂಪು ಹೂ' ಮತ್ತು 'ಪಪ್ಪಾಯ ಕುಂಭಕರ್ಣನೆಬ್ಬಿಸಿ' ನಾಟಕ ಪ್ರದರ್ಶನ ನೀಡಿದ ಪುಟಾಣಿಗಳು ನೆರೆದಿದ್ದವರು ಮನ ಗೆದ್ದರು.

ಮಳೆಯಿಂದಾಗಿ ರಂಗಾಯಣದ ವನರಂಗದ ಬದಲು ಕಲಾಮಂದಿರದಲ್ಲಿ ನಾಟಕಗಳ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ರಂಗಾಯಣದ ಆವರಣದಲ್ಲೇ ವಸ್ತವಿನ್ಯಾಸದೊಂದಿಗೆ ಸಿದ್ದವಾಗಿದ್ದ ಪುಟಾಣಿಗಳು, ಕಟೌಟ್ ಆಸರೆಯಲ್ಲಿ ಮಳೆಯಲ್ಲಿ ನೆನೆಯದಂತೆ ಕಲಾಮಂದಿರ ವೇದಿಕೆ ಪ್ರವೇಶ ಮಾಡಿದರು. ನಂತರ ತಮ್ಮ ಅಮೋಘ ಅಭಿನಯದ ಮೂಲಕ ಮಳೆಯ ನಡುವೆಯೂ ದೌಡಾಯಿಸಿ ಬಂದ ಪೋಷಕರ ಮನಸ್ಸಿಗೆ ಮುದ ನೀಡಿದರು.

ಚಿಣ್ಣರಮೇಳದ ಒಂದನೇ ತಂಡದ ಪುಟಾಣಿಗಳು ಕಿತ್ತಳೆ ಕೆಂಪು ಹೂ ನಾಟಕ ಪ್ರದರ್ಶನ ನೀಡಿದರೆ, ಎಂಟನೇ ತಂಡದ ಮಕ್ಕಳು ಪಪ್ಪಾಯ ಕುಂಭಕರ್ಣ ನೆಬ್ಬಿಸಿ ನಾಟಕ ಪ್ರದರ್ಶನ ನೀಡಿ ಸೈ ಎನಿಸಿಕೊಂಡರು. ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ, ಚಿಣ್ಣರ ಮೇಳ ಶಿಬಿರದ ಸಂಚಾಲಕಿ ಗೀತಾ ಮೋಂಟಡ್ಕ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 4 ಮೇ 2024

ಬಿಸಿಲ ಬೇಗೆಗೆ ಕಾಫಿ ಗಿಡಗಳು ಕರಕಲು

ಶ್ರೀಮಂಗಲ ಹೋಬಳಿಯ ತೋಟಗಳ ಮಾಲೀಕರಿಗೆ ಆತಂಕ



ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿ ವ್ಯಾಪ್ತಿಯ ತೋಟಗಳಲ್ಲಿ ಬಿಸಿಲಿ ಬೇಗೆಗೆ ಕಾಫಿ ಗಿಡಗಳು ಒಣಗಿ ಹೋಗಿರುವುದು.

ಮಡಿಕೇರಿ, ಮೇ.3– ದಿನೇ ದಿನೇ ಏರಿಕೆಯಾಗುತ್ತಿರುವ ಬಿಸಿಲಿನ ತಾಪಮಾನಕ್ಕೆ ಜಲ ಮೂಲಗಳಾದ ನದಿ, ತೊರೆ, ಕೆರೆಕಟ್ಟೆಗಳು ಬರಿದಾಗಿ ಒಣಗಿದ್ದು, ಕೊಡಗಿನ ಪ್ರಮುಖ ವಾಣಿಜ್ಯ ಬೆಳೆಯಾದ ಕಾಫಿಗೂ ಬಿಸಿಲಿನ ಝಳ ತಟ್ಟಿದೆ. ಸೂರ್ಯನ ತಾಪಕ್ಕೆ ಕಾಫಿ ಗಿಡಗಳು ಒಣಗಿ ಹೋಗುತ್ತಿವೆ.

ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ನೆಮ್ಮಲೆ, ಕುರ್ಚಿ, ಬೀರುಗ, ಟಿ.ಶೆಟ್ಟಿಗೇರಿ, ಶ್ರೀಮಂಗಲ, ನಾಲ್ಕೇರಿ, ಮಂಚಳ್ಳಿ, ಪೂಜೆಕಲ್, ಕುಟ್ಟ ಸೇರಿದಂತೆ ಇತರ ಗ್ರಾಮಗಳಲ್ಲಿ ಕಾಫಿ, ಕರಿಮೆಣಸು, ಅಡಕೆ ಸೇರಿದಂತೆ ಇತರ ಬೆಳೆಗಳು ಬಿಸಿಲ ಬೇಗೆಗೆ ಕರಕಲಾಗುತ್ತಿದ್ದು, ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ.

ಶ್ರೀಮಂಗಲದ ಚಟ್ಟಂಗಡ ಪಟ್ಟು ಕರುಂಬಯ್ಯ, ಕಟ್ಟಿ ಕಾರ್ಯಪ್ಪ, ರತು ಲೋಕೇಶ್, ಅಭಿನ್ ಕುಮಾರ್ ಅವರ ತೋಟಗಳಲ್ಲಿ ಬಿಸಿಲ ತಾಪಕ್ಕೆ ಕಾಫಿ ಗಿಡಗಳು ಸುಟ್ಟು ಕರಕಲಾಗಿದ್ದು, ಅಪಾರ ನಷ್ಟ ಉಂಟಾಗಿದೆ ಪೊನ್ನಂಪೇಟೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬಿರುಬಿಸಿಲಿನ ಝಳಕ್ಕೆ ಕಾಫಿ ಗಿಡಗಳು ಸುಟ್ಟು ಕರಕಲಾಗುತ್ತಿರುವ ಬೆನ್ನಲ್ಲೇ ಇದೀಗ ಅಧಿಕ ಮಳೆಯಾಗುವ ಶ್ರೀಮಂಗಲ ಹೋಬಳಿಯಲ್ಲೂ ಕಾಫಿ ಗಿಡಗಳು ಒಣಗಿ ನಿಂತಿದ್ದು, ಕಾಫಿ ತೋಟಗಳನ್ನೇ ನಂಬಿ ಬದುಕು ಕಟ್ಟಿಕೊಂಡಿದ್ದ ಬೆಳೆಗಾರರು ಕಂಗಾಲಾಗುವಂತೆ ಮಾಡಿದೆ. ಕಾಫಿ ಗಿಡಗಳಲ್ಲಿ ಮೂಡಿದ್ದ ಹೂಗಳು ಕಪ್ಪಾಗಿ ಒಣಗಿ ಹೋಗಿದ್ದು, ಮುಟ್ಟಿದೊಡನೆ ಧೂಳಿನಂತೆ ನೆಲಕ್ಕುದುರುತ್ತಿವೆ.

ಕರಿಮೆಣಸು, ಬಾಳೆ ಇನ್ನಿತರ ಫಸಲುಗಳು ಸೂರ್ಯನ ಪ್ರಖರತೆಗೆ ಒಣಗಿ ಹೋಗಿವೆ. ಪ್ರಸ್ತುತ ಕಾಫಿಗೆ ಉತ್ತಮ ಧಾರಣೆಯಿದೆ. ಆದರೆ, ಕಾಫಿ ಗಿಡಗಳು ಒಣಗುತ್ತಿದ್ದು, ಸುಟ್ಟು ಮುರುಟಿ ಹೋಗುತ್ತಿರುವ ಕಾಫಿ ಗಿಡಗಳಿಂದ ಮುಂದಿನ ವರ್ಷದ ಫಸಲನ್ನು ನಿರೀಕ್ಷಿಸುವುದು ಅಸಾಧ್ಯವಾಗಿದೆ. ಹೊಸ ಗಿಡಗಳನ್ನು ನೆಟ್ಟು ಉತ್ತಮ ಫಸಲು ಪಡೆಯಲು ಸುಮಾರು 10 ವರ್ಷ ತಗಲುವುದರಿಂದ ಕಾಫಿ ಬೆಳೆಗಾರರು ಆರ್ಥಿಕ ಹೊಡೆತಕ್ಕೆ ಸಿಲುಕುವುದರಲ್ಲಿ ಯಾವುದೇ ಸಂದೇಹವಿಲ್ಲ.

> “ತೋಟಗಳಲ್ಲಿ ಕಾಫಿ ಗಿಡಗಳು ಬಿಸಿಲ ತಾಪಕ್ಕೆ ಒಣಗಿ ಹೋಗಿದ್ದು ಸಕಾಲಕ್ಕೆ ಮಳೆಯಾಗದೆ ಕೆರೆಗಳಲ್ಲೂ ನೀರಿಲ್ಲದೆ ಇರುವುದರಿಂದ ಬೆಳೆಗಾರರ ಸ್ಥಿತಿ ಶೋಚನೀಯವಾಗಿದೆ. ಮುಂದೆ ಮಳೆಯಾದರೂ ಕಾಫಿ ಗಿಡಗಳು ಚಿಗುರಿ ಫಸಲು ಬರಲು 2–3 ವರ್ಷ ಬೇಕಾಗಲಿದೆ. ಕೃಷಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಸೂಕ್ತ ಪರಿಹಾರ ನೀಡಬೇಕು.
>
> –ಚಟ್ಟಂಗಡ ಕಟ್ಟಿ ಕಾರ್ಯಪ್ಪ, ಕಾಫಿ ಬೆಳೆಗಾರ

ಕೊಡಗಿನ ವಿವಿಧೆಡೆ ಉತ್ತಮ ಮಳೆ



ಕುಶಾಲನಗರದಲ್ಲಿ ಶುಕ್ರವಾರ ಸಂಜೆ ಧಾರಾಕಾರ ಮಳೆ ಸುರಿಯಿತು.

ಮಡಿಕೇರಿ, ಮೇ.3–ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ಸಂಜೆ ಗುಡುಗು ಸಹಿತ ಕೆಲಕಾಲ ಉತ್ತಮ ಮಳೆಯಾಗಿದೆ.

ಕುಶಾಲನಗರ, ಸುಂಟಿಕೊಪ್ಪ ಹೊಸತೋಟ, ತಿತಿಮತಿ, ಗೋಣಿಕೊಪ್ಪ ಮಡಿಕೇರಿ, ಸಿದ್ದಾಪುರ, ಕಕ್ಕಬ್ಬೆ, ನಾಪೋಕ್ಲು, ಕೊಂಡಂಗೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಮಳೆ ವರದಿಯಾಗಿದೆ. ಸುಡು ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ವರುಣ ತುಸು ಕರುಣೆ ತೋರಿದ್ದು, ಅಲ್ಪ ಸಮಾಧಾನ ಮೂಡಿಸಿದೆ.

ಬಿಸಿಲ ಬೇಗೆಯಿಂದ ಅರಣ್ಯ ಹಾಗೂ ಜೀವ ಸಂಕುಲಗಳಿಗೂ ಕಾಡ್ಗಿಚ್ಚು ಅಪಾಯ ಮಳೆಯಿಂದ ದೂರವದಂತಾಗಿದೆ. ಕಾಫಿ, ಕರಿಮೆಣಸು ಹಾಗೂ ತೋಟಗಾರಿಕಾ ಬೆಳೆಗಳು ಮಳೆಗಾಗಿ ಎದುರು ನೋಡುತ್ತಿದ್ದು, ಮಳೆ ಭೂಮಿಗೆ ತಂಪೆರೆದಿದೆ.

ಧಾರಾಕಾರ ಮಳೆ: ಕುಶಾಲನಗರ ತಾಲೂಕಿನ ವಿವಿಧೆಡೆ ಶುಕ್ರವಾರ ಸಂಜೆ ಧಾರಾಕಾರ ಮಳೆ ಸುರಿಯಿತು.

ಬೆಳಗ್ಗೆಯಿಂದಲೇ ಮೋಡಕವಿದ ವಾತಾವರಣವಿದ್ದು, ಸಂಜೆ ತುಂತುರು ಹನಿಗಳೊಂದಿಗೆ ಮಳೆ ಆರಂಭವಾಯಿತು. ಆರಂಭದಲ್ಲಿ ಬೀಸಿದ ಗಾಳಿಯಿಂದ ಎಲ್ಲೆಡೆ ಧೂಳೆದ್ದಿತು.

ಕುಶಾಲನಗರ, ಗುಡ್ಡೆಹೊಸೂರು, ಹಾರಂಗಿ, ಮುಳ್ಳುಸೋಗೆ, ಕೂಡಿಗೆ, ಹೆಬ್ಬಾಲೆ, ಅಳುವಾರ, ಸಿದ್ದಲಿಂಗಪುರ, ಬಾಣವಾರ, ಆಲೂರು ಸೇರಿದಂತೆ ವಿವಿಧೆಡೆ ಒಂದು ತಾಸಿಗೂ ಹೆಚ್ಚು ಕಾಲ ಜೋರಾಗಿ ಮಳೆ ಸುರಿಯಿತು. ದಿಢೀರನೇ ಬಂದ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು. ಬೀದಿಬದಿ ವ್ಯಾಪಾರಿಗಳಿಗೆ ದಿಕ್ಕುತೋಚ ದಂತಾಯಿತು. ಬಿಸಿಲಿ ಧಗೆಯಿಂದ ಕೂಡಿದ್ದ ವಾತಾವರಣ ಸ್ವಲ್ಪ ಮಟ್ಟಿಗೆ ತಂಪಾಯಿತು. ಇದರಿಂದ ಶುಂಠಿ, ಜೋಳ, ಕೆಸ, ಸುವರ್ಣಗೆಡ್ಡೆ ಕಾಫಿ ತೋಟಗಳಿಗೆ ಅನುಕೂಲವಾಯಿತು.

ಸಿಡಿಲು ಬಡಿದು ಕಾರ್ಮಿಕ ಸಾವು

ಮಡಿಕೇರಿ, ಮೇ.3– ಸಿಡಿಲು ಬಡಿದು ತೋಟದ ಕಾರ್ಮಿಕ ಮೃತಪಟ್ಟಿರುವ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟಗೇರಿ ಗ್ರಾಮದಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಅಸ್ಸಾಂ ಮೂಲದ ಪ್ರಮಾತ್ ಗರ್ಮಾನಿ(37) ಮೃತ ಕಾರ್ಮಿಕ. ಈತ ಬೆಟ್ಟಗೇರಿ ಕಾಫಿ ಬೆಳೆಗಾರ ಕುಟ್ಟಪ್ಪ ಅವರ ಲೈನ್ ಮನೆಯಲ್ಲಿ ವಾಸವಾಗಿದ್ದರು. ಈತ ಮಳೆ ಸುರಿಯುವ ವೇಳೆ ಮನೆಯಿಂದ ಹೊರ ಬಂದಿದ್ದ ಎನ್ನಲಾಗಿದೆ. ಈ ವೇಳೆ ಸಿಡಿಲು ಬಡಿದು ಗಂಭೀರ ಸ್ಥಿತಿಯಲ್ಲಿದ್ದರು. ತಕ್ಷಣ ಮಡಿಕೇರಿ ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ಆದರೂ ಮೃತಪಟ್ಟಿದ್ದಾರೆ. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರಿಮೆಣಸು ಕಳ್ಳತನ ಮಾಡಿದವನ ಬಂಧನ

ಸುಂಟಿಕೊಪ್ಪ, ಮೇ.3–ಸಮೀಪದ ನಾಕೂರು ಶಿರಂಗಾಲ ವ್ಯಾಪ್ತಿಯ ತೋಟದ ಕಣದಲ್ಲಿ ಒಣಗಿಸಲು ಹಾಕಿದ್ದ ಕರಿಮೆಣಸು ಕಳ್ಳತನ ಮಾಡಿದ್ದ ಕಳ್ಳನನ್ನು ಸುಂಟಿಕೊಪ್ಪ ಪೊಲೀಸರು ಬಂಧಿಸಿದ್ದಾರೆ.

ಮಧುರಮ್ಮ ಬಡಾವಣೆ ನಿವಾಸಿ ಎಲ್.ಮಹೇಶ್(42)ನನ್ನು ಬಂಧಿಸಿದ್ದು, ಮತ್ತೋರ್ವ ತಲೆ ಮರೆಸಿಕೊಂಡಿದ್ದಾನೆ. ನಾಕೂರು ಶಿರಂಗಾಲ ಗ್ರಾಮದ ಭಾಗ್ಯಲಕ್ಷ್ಮಿ ಅವರಿಗೆ ಸೇರಿದ ತೋಟದಲ್ಲಿ ಏ.7ರಂದು ತಡರಾತ್ರಿ 2.30ರಲ್ಲಿ ಮಹೇಶ್ ಮತ್ತು ಮತ್ತೊಬ್ಬ ಕಣದಲ್ಲಿ ಒಣಗಿಸಿಟ್ಟಿದ್ದ 120 ಕೆಜಿ ಕರಿಮೆಣಸನ್ನು ಕಾರಿನಲ್ಲಿ ಕಳ್ಳತನ ಮಾಡಿದ್ದರು.

ಈ ಸಂಬಂಧ ತೋಟದ ಮಾಲೀಕರಾದ ಭಾಗ್ಯಲಕ್ಷ್ಮಿ ಸುಂಟಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಂತರ ಕುಶಾಲನಗರ ಡಿವೈಎಸ್‌ಪಿ ಗಂಗಾಧರಪ್ಪ ಮಾರ್ಗದರ್ಶನದಲ್ಲಿ ಸುಂಟಿಕೊಪ್ಪ ಪಿಎಸ್‌ಐ ಶ್ರೀಧರ್, ಕ್ರೈಂ ಪಿಎಸ್‌ಐ ನಾಗರಾಜು, ಸಿಬ್ಬಂದಿ ಸತೀಶ್, ಪ್ರವೀಣ, ಜಗದೀಶ್, ಲೀಲಾವತಿ ಅವರು ಮಹೇಶ್‌ನನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದ್ದಾರೆ.

ಸಂಘಟನೆ ಮೂಲಕ ಸೌಲಭ್ಯ ಪಡೆಯಬೇಕು



ವಿರಾಜಪೇಟೆಯ ಪುರಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆಯಲ್ಲಿ ಡಾ.ಐ.ಆರ್.ದುರ್ಗಾಪ್ರಸಾದ್ ಮಾತನಾಡಿದರು.

ವಿರಾಜಪೇಟೆ, ಮೇ.3–ಕಾರ್ಮಿಕರು ಸಂಘಟನೆ ಮೂಲಕ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ವೈದ್ಯ ಡಾ.ಐ.ಆರ್. ದುರ್ಗಾಪ್ರಸಾದ್ ಸಲಹೆ ನೀಡಿದರು.

ನಗರದ ಪುರಭವನದಲ್ಲಿ ಸಿಐಟಿಯು ಸಂಘಟನೆಯ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಕಾರ್ಮಿಕ ದಿನಾಚರಣೆಯಲ್ಲಿ ಮಾತನಾಡಿ ಅವರು, ಕಾರ್ಮಿಕರು ಹಿಂದಿನ ಕಾಲದಿಂದಲೂ ಹೋರಾಟ ನಡೆಸುತ್ತಾ ಬಂದಿರುವುದರಿಂದ ಇಂದು ಸೌಲಭ್ಯಗಳು ದೊರಕುತ್ತಿವೆ. ಸಂಘಟನೆ ಮೂಲಕ ಒಗ್ಗಟ್ಟಿನಿಂದ ಹೋರಾಟ ನಡೆಸಿದಾಗ ಮತ್ತಷ್ಟು ಶಕ್ತಿ ನೀಡಿದಂತಾಗುತ್ತದೆ. ಇದರಿಂದ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಿಐಟಿಯು ಸಂಘಟನೆ ಜಿಲ್ಲಾಧ್ಯಕ್ಷ ಪಿ.ಆರ್. ಭರತ್ ಮಾತನಾಡಿ, ಕಾರ್ಮಿಕರು ಮದ್ಯಪಾನದಿಂದ ಜೀವನ ಹಾಳು ಮಾಡಿಕೊಳ್ಳಬಾರದು. ಕಾರ್ಮಿಕರು ತಮ್ಮ ಮಕ್ಕಳು ಕಾರ್ಮಿಕರಾಗಿಯೇ ಉಳಿಯದಂತೆ ಉತ್ತಮ ಶಿಕ್ಷಣ ನೀಡಬೇಕು. ದಿನನಿತ್ಯ ಬಳಕೆ ವಸ್ತುಗಳ ಬೆಲೆ ಏರಿಕೆಯಿಂದ ಕಾರ್ಮಿಕರು ಹಾಗೂ ಬಡಕುಟುಂಬಗಳು ಸಂಕಷ್ಟ ಎದುರಿಸುವಂತಾಗಿದೆ. ದುಡಿಯುವ ವರ್ಗಕ್ಕೆ ಸೌಲಭ್ಯ ನೀಡಿದರೆ ಬಡತನ ಹೋಗಲಾಡಿಸಬಹುದು ಎಂದು ಹೇಳಿದರು.

ಸಂಘಟನೆ ಜಿಲ್ಲಾ ಕಾರ್ಯದರ್ಶಿ ಎ.ಸಿ. ಸಾಬು ಮಾತನಾಡಿ, ಸ್ವಾತಂತ್ರ ಬಂದು 76 ವರ್ಷ ಕಳೆದರು ಮಹಿಳೆಯರ ಮೇಲಿನ ಶೋಷಣೆ ನಿಂತಿಲ್ಲ. ನಮ್ಮ ಸಂಘಟನೆಯಲ್ಲಿ 4000ಕ್ಕೂ ಹೆಚ್ಚು ಸದಸ್ಯರಿದ್ದು, ಬಿಸಿಯೂಟ ಯೋಜನೆ ನೌಕರರು, ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರು ಸೇರಿದಂತೆ ಉಳಿದ ಕಾರ್ಮಿಕರು ಸದಸ್ಯತ್ವ ಪಡೆದು ಸೌಲಭ್ಯ ಪಡೆಯಲು ಮುಂದಾಗಬೇಕು. ಜಿಲ್ಲೆಯಲ್ಲಿ ಬಹಳಷ್ಟು ಕಾರ್ಮಿಕರಿಗೆ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆ ಮತ್ತು ಲೈನ್ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಸರ್ಕಾರ ಮನೆ ನಿರ್ಮಿಸಿಕೊಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಖಜಾಂಚಿ ಎನ್.ಡಿ.ಕುಟ್ಟಪ್ಪ, ಸಂಚಾಲಕಿ ಪದ್ಮಿನಿ, ಹರಿದಾಸ್, ರಾಚಪ್ಪಜಿ, ಶಾಜಿ ರಮೇಶ್ ಹಾಗೂ ಕಾರ್ಮಿಕರು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ.3– ಮಡಿಕೇರಿ



ವಿದ್ಯುತ್ ವಿತರಣಾ ಕೇಂದ್ರದ ಭಾಗಮಂಡಲ ಫೀಡರ್‌ನಲ್ಲಿ ಮಳೆಗಾಲ ಹಿನ್ನೆಲೆಯಲ್ಲಿ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಮೇ 4ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3.30 ಗಂಟೆವರೆಗೆ ಬೆಟ್ಟಗೇರಿ, ಚೇರಂಬಾಣೆ, ಭಾಗಮಂಡಲ, ಅಯ್ಯಂಗೇರಿ ಹಾಗೂ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊನ್ನಂಪೇಟೆಯಲ್ಲಿ ಮಹಿಳೆ ನಾಪತ್ತೆ

ಗೋಣಿಕೊಪ್ಪ: ಪೊನ್ನಂಪೇಟೆ ನಿವಾಸಿ ಪ್ರೇಮಾ(35) ಕಾಣೆಯಾಗಿದ್ದಾರೆ.

ಈಕೆ ಏ.24ರಂದು ನಾಪತ್ತೆಯಾಗಿದ್ದಾಳೆ ಎಂದು ತಾಯಿ ಚಿಕ್ಕತಾಯಮ್ಮ ಪೊನ್ನಂಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈಕೆ ಸುಮಾರು 5.5 ಅಡಿ ಎತ್ತರವಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಈಕೆ ಯಾರಿಗಾದರೂ ಪತ್ತೆಯಾದಲ್ಲಿ ಪೊನ್ನಂಪೇಟೆ ಪೊಲೀಸ್ ಠಾಣೆ ಅಥವಾ ದೂ.ಸಂ:0827–4249044, ಮೊ.ಸಂ: 9480804959ಕ್ಕೆ ತಿಳಿಸಬಹುದು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 8, 17ರಂದು ಲೋಕಾಯುಕ್ತರಿಂದ ದೂರು ಸ್ವೀಕಾರ

ಮಡಿಕೇರಿ: ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ಮೇ 8ರಂದು ಪೊನ್ನಂಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮತ್ತು ಮೇ 17ರಂದು ಮಡಿಕೇರಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ದೂರು ಸ್ವೀಕರಿಸಲಿದ್ದಾರೆ.

ಸರ್ಕಾರಿ ಕಚೇರಿಗಳ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಸಾರ್ವಜನಿಕರು ದೂರುಗಳ ಅರ್ಜಿಯನ್ನು ನೀಡಬಹುದು. ಮಾಹಿತಿಗೆ ಮಡಿಕೇರಿಯ ಗೌಳಿಬೀದಿಯಲ್ಲಿರುವ ಲೋಕಾಯುಕ್ತ ಪೊಲೀಸ್ ಕಚೇರಿ ಅಥವಾ ದೂ.ಸಂ: 08272–295297 ಅನ್ನು ಸಂಪರ್ಕಿಸಬಹುದು ಎಂದು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಂಡೀಪುರದಲ್ಲಿ ಹುಲಿ ಸಾವು



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದಲ್ಲಿ ಪತ್ತೆಯಾದ ಹುಲಿ ಕಳೇಬರವನ್ನು ಪರಿಶೀಲಿಸುತ್ತಿರುವ ಅರಣ್ಯಾಧಿಕಾರಿಗಳು.

ಮೈಸೂರು, ಮೇ.3(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ವಲಯದಲ್ಲಿ ವಯೋಸಹಜದಿಂದ 11 ವರ್ಷದ ಗಂಡು ಹುಲಿಯೊಂದು ಮೃತಪಟ್ಟಿದೆ.

ಹೆಡಿಯಾಲ ವಲಯದ ಹೆಬ್ಬಳ್ಳ ಗಸ್ತು ವ್ಯಾಪ್ತಿಯ ಚಾಮಲಾಪುರ ಕಟ್ಟೆ ಸಮೀಪ ಗಸ್ತಿನಲ್ಲಿದ್ದ ಸಿಬ್ಬಂದಿಗಳಿಗೆ ಹುಲಿ ಕಳೇಬರ ಕಂಡು ಬಂದಿದೆ. ಅದನ್ನು ಪರಿಶೀಲಿಸಿದ ಗಸ್ತು ಸಿಬ್ಬಂದಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಕೂಡಲೇ ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಆಗಮಿಸಿ ಪರಿಶೀಲಿಸಿದ್ದಾರೆ. ಬಂಡೀಪುರದ ಪಶುವೈದ್ಯ ಡಾ.ವಾಸಿಂ ಮಿರ್ಜಾ ಅವರಿಂದ ಹುಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಈ ವೇಳೆ ಹುಲಿಗೆ ವಯೋಸಹಜ ಆರೋಗ್ಯ ಸಮಸ್ಯೆ, ಎಡಗೈ ಭುಜದ ಮೂಳೆ ಮುರಿದಿರುವುದು ಹಾಗೂ ನಾಲ್ಕು ಕೋರೆ ಹಲ್ಲುಗಳು ಸವೆದಿರುವುದು ಧೃಡಪಟ್ಟಿದೆ. ಇದರಿಂದ ವಯೋಸಹಜದಿಂದ ಹುಲಿ ಮೃತಪಟ್ಟಿದೆ ಎಂದು ಖಚಿತಪಡಿಸಿದ್ದಾರೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ(ಎನ್‌ಟಿಸಿಎ) ನಿಯಮಾನುಸಾರ ಹುಲಿ ಕಳೇಬರ ಸುಡಲಾಯಿತು.

ಈ ಸಂದರ್ಭದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್. ಪ್ರಭಾಕರನ್, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಎಸಿಎಫ್ ಜಿ.ರವೀಂದ್ರ, ಹೆಡಿಯಾಲ ಆರ್‌ಎಫ್‌ಓ ಕೆ.ಆರ್.ನಾರಾಯಣ, ವನ್ಯಜೀವಿ ಪರಿಪಾಲಕಿ ಕೃತಿಕಾ ಆಲನಹಳ್ಳಿ, ಎನ್‌ಟಿಸಿಎ ಪ್ರತಿನಿಧಿ ಆರ್.ರಘುರಾಮ್, ಎಂ.ಸಿ.ತಳಲು ಗ್ರಾಪಂ ಉಪಾಧ್ಯಕ್ಷೆ ಕೆ.ಸಿ. ಲಕ್ಷ್ಮೀ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕುಡಿಯುವ ನೀರಿನ ಸಮಸ್ಯೆ ಶೀಘ್ರ ಪರಿಹರಿಸಿ

● ಜಾನುವಾರುಗಳಿಗೆ ಮೇವಿನ ಬ್ಯಾಂಕ್ ತೆರೆಯಿರಿ ● ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ



ಹನೂರು ಲೋಕೋಪಯೋಗಿ ಇಲಾಖೆಯ ವಸತಿಗೃಹದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ತಾಲೂಕಿನ ಬರ ನಿರ್ವಹಣೆ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹನೂರು, ಮೇ.3–ಸಾರ್ವಜನಿಕರ ದೂರುಗಳಿಗೆ 24 ಗಂಟೆಯೊಳಗೆ ಪರಿಹರಿಸುವ ಮೂಲಕ ಕುಡಿಯುವ ನೀರಿನ ಸಮಸ್ಯೆಗೆ ಶೀಘ್ರವಾಗಿ ಸ್ಪಂದಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ಪಟ್ಟಣದ ಲೋಕೋಪಯೋಗಿ ಇಲಾಖೆಯ ವಸತಿಗೃಹ ಸಭಾಂಗಣದಲ್ಲಿ ಶುಕ್ರವಾರ ತಾಲೂಕಿನ ಬರ ನಿರ್ವಹಣೆ ಸಂಬಂಧ ಕೈಗೊಂಡಿರುವ ಕ್ರಮಗಳ ಕುರಿತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ಗ್ರಾಮಗಳಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾಗಬಾರದು. ಸಮಸ್ಯೆ ಕಂಡು ಬಂದ ತಕ್ಷಣ ಪರಿಹಾರಕ್ಕೆ ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಜನ–ಜಾನುವಾರುಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಪ್ರಸ್ತುತ ಅಂತರ್ಜಲ ಕುಸಿದಿರುವುದರಿಂದ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಬೇಕು. ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಸಂಬಂಧ ದೂರುಗಳು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ತೀವ್ರ ಬರಗಾಲವಿದ್ದು, ಮಳೆ ಕೊರತೆ ಹಿನ್ನೆಲೆಯಲ್ಲಿ ಎಲ್ಲೆಡೆ ನೀರಿನ ಸಮಸ್ಯೆ ಎದುರಾಗಿದೆ. ಕುಡಿಯುವ ನೀರಿನ ಅಭಾವ ಉಂಟಾಗಿರುವ ಗ್ರಾಮಗಳಲ್ಲಿ ಬೋರ್‌ವೆಲ್ ಸೇರಿದಂತೆ ಇತರೆ ಯಾವುದೇ ಜಲ ಮೂಲಗಳಿಂದ ನೀರನ್ನು ಒದಗಿಸಬೇಕು. ಅವಶ್ಯವಿದ್ದರೆ ಹೆಚ್ಚುವರಿ ಬೋರ್‌ವೆಲ್ ಕೊರೆಯಿಸಬೇಕು. ಅಲ್ಲದೆ, ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು ಒದಗಿಸಲು ನೀರನ್ನು ಲ್ಯಾಬ್‌ಗೆ ಕಳುಹಿಸಿ, ಗುಣಮಟ್ಟವನ್ನು ಪರೀಕ್ಷಿಸಬೇಕು. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ಸಂಭವವಿದ್ದು, ಜನ–ಜಾನುವಾರುಗಳಿಗೆ ನೀರು, ಮೇವಿನ ಸಮಸ್ಯೆಯಾಗದಂತೆ ಹೆಚ್ಚಿನ ನಿಗಾವಹಿಸಬೇಕು ಎಂದು ನಿರ್ದೇಶಿಸಿದರು.

ಜಾನುವಾರುಗಳಿಗೆ ಮೇವು ಒದಗಿಸುವ ನಿಟ್ಟಿನಲ್ಲಿ ತಾಲೂಕಿನಲ್ಲಿ ತೆರೆಯಲಾಗಿರುವ 16 ಗೋ ಶಾಲೆಗಳನ್ನು ಮುಂದುವರೆಸಬೇಕು. ಮೇವು ಲಭ್ಯತೆಯನ್ನು ಅಗತ್ಯಕ್ಕೆ ಅನುಗುಣವಾಗಿ ಕಾಪಾಡಿಕೊಳ್ಳಬೇಕು. ಈ ಸಂಬಂಧ ಪಶುಪಾಲನೆ ಇಲಾಖೆ ಅಧಿಕಾರಿಗಳು ತಾಲೂಕಿನಾದ್ಯಂತ ಗೋ ಶಾಲೆಗಳ ಸಮೀಕ್ಷೆ ಕೈಗೊಂಡು ಅಗತ್ಯವಿರುವೆಡೆ ಮೇವಿನ ಬ್ಯಾಂಕ್‌ಗಳನ್ನು ತೆರೆಯಬೇಕು. ಹಸಿ ಅಥವಾ ಒಣಹುಲ್ಲೇ ಆಗಲಿ ಸಾಧ್ಯವಾದಷ್ಟು ಸ್ಥಳೀಯವಾಗಿ ಮೇವು ಖರೀದಿಸಿ ಗೋ ಶಾಲೆಗಳಿಗೆ ಒದಗಿಸಬೇಕು. ಗೋ ಶಾಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಎಚ್ಚರ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಈ ಬಾರಿ ಗರಿಷ್ಠ ಉಷ್ಣಾಂಶದ ಏರಿಕೆಯಿಂದ ಬಿಸಲಿನ ತಾಪ ಹೆಚ್ಚಾಗಿದೆ. ಇದರಿಂದ ಜನರಿಗೆ ಸನ್‌ಸ್ಟ್ರೋಕ್ (ಬಿಸಿಲಾಘಾತ) ಆಗುವ ಸಂಭವವಿರುವುದರಿಂದ ಜನರು ಸುರಕ್ಷಿತ ಮಾರ್ಗಗಳ ಅನುಸರಿಸಲು ಅನುಕೂಲವಾಗುವಂತೆ ಮುಂಜಾಗ್ರತೆ ಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು. ಜಾನುವಾರುಗಳಿಗೂ ಬಿಸಿಲಾಘಾತ ಉಂಟಾಗದಂತೆ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಶೀಲ್ದಾರ್ ಗುರುಪ್ರಸಾದ್, ತಾಪಂ ಇಓ ಉಮೇಶ್, ಪಶುಪಾಲನಾ ಇಲಾಖೆಯ ಉಪನಿರ್ದೇಶಕ ಡಾ.ಹನುಮೇಗೌಡ, ಸಹಾಯಕ ನಿರ್ದೇಶಕ ಡಾ. ಸಿದ್ದರಾಜು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಮಧುಸೂಧನ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಶ್ರೀಧರ್, ಎಇಇ ಹರೀಶ್, ಉಪ ತಹಸೀಲ್ದಾರ್ ಸುರೇಖಾ, ಶಿರಸ್ತೇದಾರ್ ನಾಗೇಂದ್ರ, ಗ್ರಾಮಲೆಕ್ಕಿಗ ಶೇಷಣ್ಣ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತದ್ದರು.

ಕಾಡಂಚಿನ ಗ್ರಾಮಗಳಲ್ಲಿ ಮುನ್ನೆಚ್ಚರಿಕೆ ವಹಿಸಿ

ಮಹದೇಶ್ವರಬೆಟ್ಟದ ಕಾಡಂಚಿನ ಗ್ರಾಮಗಳಾದ ಇಂಡಿಗನತ್ತ, ಪಡಸಲನತ್ತ, ಮೆಂದಾರೆ, ಕೊಕ್ಕೋರೆ ಸೇರಿದಂತೆ ಇತರೆ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸದಂತೆ ನೋಡಿಕೊಳ್ಳಬೇಕು. ಬೋರ್‌ವೆಲ್‌ಗಳಲ್ಲಿ ನೀರಿನ ಸೆಲೆ ಬತ್ತಿ ಹೋಗಿದ್ದರೆ ಟ್ಯಾಂಕರ್‌ಗಳ ಮೂಲಕ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು. ಜನರಿಂದ ಯಾವುದೇ ದೂರುಗಳು ಬರದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರು ಎಲ್ಲಿಯೂ ಪೋಲಾಗದಂತೆ ಎಚ್ಚರ ವಹಿಸಬೇಕು. ಮಾನ್ಸೂನ್ ಆರಂಭವಾಗುವವರೆಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮೋದಿ ಮತ್ತೆ ಪ್ರಧಾನಿಯಾಗಲು ಪೂಜೆ



ಚಾಮರಾಜನಗರ: ಪ್ರಧಾನಿ ಮೋದಿ ಅವರ ಒಳಿತಿಗೆ ಎಂದು ಪ್ರಾರ್ಥಿಸಿ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತೆಯರು ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ ನೇತೃತ್ವದಲ್ಲಿ ನಡೆದ ಪೂಜಾ ಕಾರ್ಯದಲ್ಲಿ ಪಕ್ಷದ ಮುಖಂಡರು ಹಾಗೂ ವಿವಿಧ ಪದಾಧಿಕಾರಿಗಳು ಭಾಗವಹಿಸಿದ್ದರು. ದೇವಸ್ಥಾನದ ಪ್ರಧಾನ ಅರ್ಚಕರು ನರೇಂದ್ರ ಮೋದಿ ಹೆಸರಿನಲ್ಲಿ ಅರ್ಚನೆ ಮಾಡಿದರು. ದೇಶ ಸುಭಿಕ್ಷೆಯಿಂದ ಇರಲಿ. ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಲಿ ಎಂದು ಪ್ರಾರ್ಥಿಸಿ ಪೂಜೆ ಸಲ್ಲಿಸಿದರು.

ಇದೇ ವೇಳೆ ಮಲೆಯುರು ಕಮಲಮ್ಮ ಮಾತನಾಡಿ, ವಿಶ್ವ ನಾಯಕ ನರೇಂದ್ರ ಮೋದಿಯವರ ಬಗ್ಗೆ ಕಾಂಗ್ರೆಸ್ ಶಾಸಕ ರಾಜು ಕಾಗೆ ನೀಡಿರುವ ಕೀಳು ಮಟ್ಟದ ಹೇಳಿಕೆ ಖಂಡನೀಯ. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ಸಿಗೆ ಕೆಟ್ಟ ಮನಸ್ಥಿತಿ ಇದೆ ಎಂದು ಟೀಕಿಸಿದರು. ಇದೇ ವೇಳೆ ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶೈಲಾ, ಉಪಾಧ್ಯಕ್ಷೆ ದಾಕ್ಷಾಯಿಣಿ, ಕಾರ್ಯದರ್ಶಿ ವನಜಾಕ್ಷಿ, ಗ್ರಾಮಾಂತರ ಮಂಡಲ ಅಧ್ಯಕ್ಷೆ ಮಹೇಶ್ವರಿ, ಕಾರ್ಯದರ್ಶಿ ರಾಧಾ ಇತರರು ಇದ್ದರು.

ಬಿರುಗಾಳಿ ಮಳೆಗೆ ಸಾವಿರಾರು ಬಾಳೆ ಗಿಡ ನಾಶ



ಗುಂಡ್ಲುಪೇಟೆ ತಾಲೂಕಿನ ಪಂಜನಹಳ್ಳಿ ಗ್ರಾಮದ ಮಂಜು ಅವರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಗಿಡಗಳು ನೆಲಕ್ಕುರುಳಿರುವುದು.

ಗುಂಡ್ಲುಪೇಟೆ, ಮೇ.3–ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಶುಕ್ರವಾರ ಬಿರುಗಾಳಿ ಮಳೆಗೆ ಗಿಡಮರಗಳು, ವಿದ್ಯುತ್ ಕಂಬಗಳು ಸೇರಿದಂತೆ ಸಾವಿರಾರು ಬಾಳೆಗಿಡಗಳು ನೆಲಕಚ್ಚಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಪಟ್ಟಣದ ರಸ್ತೆಬದಿಯ ಮರಗಳ ಕೊಂಬೆಗಳು ಮುರಿದು ಬಿದ್ದಿದ್ದು, ಅಯ್ಯಪ್ಪಸ್ವಾಮಿ ದೇವಾಲಯದ ಆವರಣದ ನಾಗರಕಟ್ಟೆಯ ಬೇವಿನ ಮರ ಧರೆಗುರುಳಿದೆ ಸದ್ಯ ಯಾವುದೇ ಅಪಾಯವಾಗಿಲ್ಲ. ಇದ್ದಕ್ಕಿದ್ದಂತೆ ಆವರಿಸಿದ ಧೂಳಿನಿಂದ ವಾಹನ ಸವಾರರು ಕಂಗಾಲಾದರು. ಪಾದಚಾರಿಗಳು ಸಿಕ್ಕಸಿಕ್ಕ ಅಂಗಡಿಗಳಿಗೆ ನುಗ್ಗಿ ಆಶ್ರಯ ಪಡೆದರು.

ಬಾಳೆ ಬೆಳೆ ನಾಶ: ಪಂಜನಹಳ್ಳಿನ ಮಂಜು ಅವರಿಗೆ ಸೇರಿದ ಎರಡು ಎಕರೆಯ ಬಾಳೆ ಬೆಳೆ ಸಂಪೂರ್ಣವಾಗಿ ನೆಲಕಚ್ಚಿದ್ದು, ಇದರಿಂದ 8 ಲಕ್ಷ ರೂ.ಗೂ ಹೆಚ್ಚು ನಷ್ಟವಾಗಿದೆ.

ಅಪಾರ ಹಾನಿ: ತಾಲೂಕಿನ ಮಲ್ಲಯ್ಯನಪುರ, ಪಂಜನಹಳ್ಳಿ, ತೆರಕಣಾಂಬಿ, ಕಗ್ಗಳ, ವೀರನಪುರ, ಮಾಡ್ರಹಳ್ಳಿ ಮುಂತಾದ ಗ್ರಾಮಗಳ ನೂರಾರು ರೈತರ ಜಮೀನುಗಳಲ್ಲಿ ಸುಮಾರು 1500ಕ್ಕೂ ಹೆಚ್ಚಿನ ಬಾಳೆಗಿಡಗಳು ನೆಲಕ್ಕುರುಳಿವೆ. ಬರಗಾಲದ ನಡುವೆಯೂ ಸಾಲ ಮಾಡಿ ಬೆಳೆದ ಲಕ್ಷಾಂತರ ರೂ. ಫಸಲು ನಷ್ಟವಾಗಿದೆ. ಆದ್ದರಿಂದ ಸರ್ಕಾರ ರೈತರಿಗೆ ಸೂಕ್ತ ಪರಿಹಾರ ನೀಡಬೇಕು.

ಬೇಸಿಗೆ ಮುಗಿಯುವವರೆಗೆ ಸಮವಸ್ತ್ರ ಕಡ್ಡಾಯ ಬೇಡ

ಚಾಮರಾಜನಗರ, ಮೇ.3–ಹೆಚ್ಚು ತಾಪಮಾನದ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಶಾಲಾ–ಕಾಲೇಜುಗಳ ತರಗತಿಗಳಲ್ಲಿ ಕಡ್ಡಾಯವಾಗಿ ಫ್ಯಾನ್ ಅಳವಡಿಸುವಂತೆ ಜಿಲ್ಲಾಧಿಕಾರಿ ಸುತ್ತೋಲೆ ಹೊರಡಿಸಿದ್ದಾರೆ.

ಬೇಸಿಗೆ ವೇಳೆ ಸಮವಸ್ತ್ರದಲ್ಲಿ ಟೈ ಹಾಗೂ ಕೋಟು ಧರಿಸುವುದರಿಂದ ಶಾಲೆ– ಕಾಲೇಜುಗಳ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುಬಹುದು. ಆದ್ದರಿಂದ ಟೈ ಹಾಗೂ ಕೋಟು ಧರಿಸುವುದನ್ನು ಬೇಸಿಗೆ ಮುಗಿಯುವವರೆಗೆ ಕಡ್ಡಾಯಗೊಳಿಸುವ ನಿಯಮವನ್ನು ಸಡಿಲಗೊಳಿಸಬೇಕು. ಬೆಳಗ್ಗಿನ ಪ್ರಾರ್ಥನೆಯನ್ನು ತರಗತಿಯ ಕೊಠಡಿಯೊಳಗೆ ನಡೆಸಬೇಕು. ಶಾಲೆ–ಕಾಲೇಜುಗಳ ಕೊಠಡಿಯಲ್ಲಿ ಕಡ್ಡಾಯವಾಗಿ ಫ್ಯಾನ್ ಅಳವಡಿಸಬೇಕು.

ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಆರ್‌ಓ ವ್ಯವಸ್ಥೆಯನ್ನು ಕಲ್ಪಿಸಬೇಕು. ಪ್ರಥಮ ಚಿಕಿತ್ಸೆಗೆ ಅವಶ್ಯಕವಿರುವ ವ್ಯವಸ್ಥೆ ಮಾಡಿಕೊಳ್ಳಬೇಕು. ಮಕ್ಕಳನ್ನು ಬಿಲಿಸಿನ ಸಮಯದಲ್ಲಿ ಆಟದ ಮೈದಾನಕ್ಕೆ ತೆರಳದಂತೆ ನೋಡಿಕೊಳ್ಳಬೇಕು.

ಈ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ತಪ್ಪಿದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಮೇ 8, ಶ್ರೀನಿವಾಸ ಪ್ರಸಾದ್‌ಗೆ ನುಡಿನಮನ

ಚಾಮರಾಜನಗರ, ಮೇ.3–ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರಿಗೆ ಮೇ 8ರಂದು ಅವರ ಅಭಿಮಾನಿ ಬಳಗ, ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟ ಹಾಗೂ ರಂಗವಾಹಿನಿ ಸಂಸ್ಥೆ ವತಿಯಿಂದ ನುಡಿನಮನ ಕಾರ್ಯಕ್ರಮ ಆಯೋಜಿಸಲಾಗಿದೆ.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ, ನುಡಿನಮನ ಕಾರ್ಯಕ್ರಮ ಆಯೋಜಿಸಲು ತೀರ್ಮಾನಿಸಲಾಯಿತು. ಕಲ್ಯಾಣ ಸಿರಿ ಬಂತೇಜಿ ಹಾಗೂ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀನಿವಾಸ ಪ್ರಸಾದ್ ಅವರ ಪತ್ನಿ ಹಾಗೂ ಪುತ್ರಿಯರು ಭಾಗವಹಿಸಲಿದ್ದಾರೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್ ತಿಳಿಸಿದರು. ಸಭೆಯಲ್ಲಿ ರಂಗವಾಹಿನಿ ಸಂಸ್ಥೆ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ನಗರಸಭಾ ಮಾಜಿ ಸದಸ್ಯ ಬಸವರಾಜು, ಎಸ್‌ಸಿ, ಎಸ್ಟಿ ಪದವೀಧರ ಒಕ್ಕೂಟದ ಅಧ್ಯಕ್ಷ ನಾಗಸುಂದರ್, ಪ್ರಧಾನ ಕಾರ್ಯದರ್ಶಿ ಸುರೇಶ್, ಆಲೂರು ನಾಗೇಂದ್ರ, ರಾಮಸಮುದ್ರ ಪ್ರಸನ್ನ, ಬಂಗಾರು, ರವಿಚಂದ್ರ ಪ್ರಸಾದ್ ಇತರರು ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

Commercial Property for sale
50x80 (North Facing) Devaihana Hundi Main Road, (80 feet Road) Srirampura 2nd Stage
Price: 6,500 Per Sq.ft
9519511866
9886582603

ವಿಮಾನ ಪ್ರವಾಸ
09–06–2024 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಮಧ್ಯಪ್ರದೇಶ, 27–06–2024 ರಾಜಸ್ಥಾನ 14–05–2024 ಶಿರಡಿ (ಎಸಿ ಬಸ್) ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು
8496044942

New House for Sale
In Vijayanagar 1st Stage, 1st Main, 40x60 East face, 60 Ft. Road, 4 rooms (all attached). Duplex.
Price: 3.60 Cr.
Slightly negotiable.
Mob: 9880718980

MUDA Sites for Sale
'KENCHALAGUDU', Mysuru
Near KHB Layout, 3 km from R.T. Nagar Ring Road
ALL DIMENSION SITES AVAILABLE
Bank loan available. Ready for Regn.
Mob: 9066801322

WANTED
Wanted Teaching staff for reputed institution (Experience Preferred) for all subjects.Transport facilities available. Drop your resume through WhatsApp
8971577685
9980631121

SITE FOR SALE
No. 905/67, 4th Main, 4th Cross, Vidyaranyapuram, Mysore-8 (Size 20x68 North face). Rs. 7500 per sq.ft. Negotiable. Opp. Park.
Mob: 9916946467

Sri Vinayaka TECHNOLOGIES

All types of Laptop, Desktop, CCTV Smart Classes, Projector, Printer, Networking Products
SALES & SERVICE
M: 7348 977 948 / 9481 349 347

ಬೇಕಾಗಿದ್ದಾರೆ
ಮೈಸೂರಿನ ಬೋಗಾದಿಯಲ್ಲಿರುವ ಅಪಾರ್ಟ್‌ಮೆಂಟ್ ಒಂದಕ್ಕೆ ಹಾಗೂ ಆಕರ್ಷಕ ಸಂಬಳದೊಂದಿಗೆ ಮದ್ದೂರು ಮತ್ತು ಶ್ರೀರಂಗಪಟ್ಟಣ ನಗರಗಳಿಗೆ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮಾಹಿತಿಗಾಗಿ ಸಂಪರ್ಕಿಸಿ:
9986985929
9035050652

ಮೈಸೂರಿನ ಹಳೆಕೆಸರೆಯಲ್ಲಿರುವ MIT ಇಂಜಿನಿಯರಿಂಗ್ ಕಾಲೇಜಿನ ಹಿಂಭಾಗದಲ್ಲಿರುವ ದಾತ್ರಿ ಬಡಾವಣೆಯಲ್ಲಿ West Facing 30x40 ಅಳತೆಯ ಸೈಟು ಕೇವಲ 28 ಲಕ್ಷಕ್ಕೆ ಲಭ್ಯವಿದೆ.
8073300783
9591544080

SITE FOR SALE
1420 SQFT North East Corner Muda Layout Ramakrishna Nagar, Mysore
9620302755
9886245930

ಮುಡಾಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್, 28.1 x40
ಬೆಲೆ 34 ಲಕ್ಷ
9342123373

ಸೈಟುಗಳು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ ಜೆಎಸ್‌ಎಸ್ ಲೇಔಟ್, ನಿರ್ಮಾಣ್ ನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರಿಸೆಪ್ಷನಿಸ್ಟ್ ಕೆಲಸಕ್ಕೆ ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ. ವಯಸ್ಸಿನ ವಯೋಮಿತಿ–21 ರಿಂದ 45ರ ಒಳಗೆ
9663747452
9663427888

ಅನುಬಂಧ ಮ್ಯಾರೇಜಸ್
ವಧು ವರರನ್ನು ಹುಡುಕಲು ಸಹಾಯಬೇಕೆ?
ನಮಗೆ ಕರೆ ಮಾಡಿ
6361740552

DTCP APPROVED ಸೈಟ್ ಮಾರಾಟಕ್ಕಿದೆ
ಮೈಸೂರು ಇಲವಾಲ ಕುಬೇರಾನಂದ ಸಾಗರ ಲೇಔಟ್‌ನಲ್ಲಿ 41x42 (1700) ಚದರ ಅಡಿಯ ಕಾರ್ನರ್ ಸೈಟ್ ಮಾರಾಟಕ್ಕಿದೆ. ತೆಗೆದುಕೊಳ್ಳಲು ಇಚ್ಛಿಸುವವರು ಮಾಲೀಕರ ಫೋನ್ ನಂಬರ್‌ನ್ನು ಸಂಪರ್ಕಿಸಬಹುದಾಗಿದೆ.
7348903991

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

SITE / HOUSE FOR SALE
- 50x80 N/F 15sqrs., Building MUDA site Vijayanagar 4th & 2nd Phase.
- 40x60 N/F 55 sqrs., Building 2 Car parking, Ramakrishna Nagar site 40x60, 30x40 Vijayanagar, Srirampura.

WANTED MUDA SITE SALE & PURCHASE
Call : 94489 38989 / 78920 35789
Brokers Excuse

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

SITE FOR SALE
MUDA ALLOTMENT SITE 20/30 Kuvempunagar Mysore
MUDA SITE 20/30 & 30/40 Bogadi Mysore
PH: 9900464111

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲೊಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ ಮೈಸೂರು.
9916908454

WANTED TEACHERS
LENIN CONVENT -Srirangapatna
Freshers Can apply
Sub: ENGLISH (with fluent English) -1, Mathematics and Science -1, Hindi - 1, Social Science -1, Interview From May 06-2024 at 11.00 am
9844854461
6362000950

ಬೇಕಾಗಿದ್ದಾರೆ
ಮಹಿಳಾ ಅಡುಗೆ ಕೆಲಸದವರು ಬೇಕಾಗಿದ್ದಾರೆ (ಜಯಲಕ್ಷ್ಮಿಪುರಂ ಸುತ್ತಮುತ್ತ)
9110467744

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

JOIN TODAY JOBS
Age (18-24) 10th, PUC, ಮೇಲ್ಪಟ್ಟಿರುವ Traineeಗಳಾಗಿ
ONLY FRESHERS, *NO FEE*
Earn (9000/- ರಿಂದ 16500/-) Pm
ಪರಸ್ಥಳದವರಿಗೆ ವಸತಿ ತಮ್ಮ ವಿವರಗಳೊಂದಿಗೆ ಖುದ್ದಾಗಿ ಭೇಟಿಗಾಗಿ
WALK IN TIME (11 AM to 3PM)
ಮಂಡ್ಯ: 9342827788
ಮೈಸೂರು: 9342238667

DTCP SITES FOR SALE
DTCP Sites With RERA
Near Jayapura, H.D. Kote Road, Mysore.
9590491194, 9606783264

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

WANTED SUPERVISOR
Job Role- Quality Control - Production Follow Up 2 Years Minimum Experience in Automobile Manufacturing Industry Location: Hebbal Industrial Area, Mysore
9880104160
8792926944

FLAT FOR RENT
30X40 - 2 Bed Room at (1st Floor)
Ganesh Residency Chamarajapuram Near Ballal Circle
Life Facility Available
Vegitarians Preferred
7975957605

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

INVESTORS ಬೇಕಾಗಿದ್ದಾರೆ
Food Products ಕಂಪನಿಯ Export Business ಗಾಗಿ 50 K to 2 Lakhs Invest ಮಾಡುವವರಿಗೆ ವಾರ್ಷಿಕ 20% ಡಿವಿಡೆಂಡ್ (Dividend) ನೀಡಲಾಗುವುದು ಸೂಕ್ತ ಭದ್ರತೆಯೊಂದಿಗೆ
Call: 7019012485

Sudarshan Saur

SOLAR WATER HEATER
ATTRACTIVE OFFER
ಸೇಲ್ಸ್ & ಸರ್ವೀಸ್
10 years Guarantee
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

DTCP Sites for Sale
Amruthaa Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

SITES FOR SALE
30x40, 30x50
Near Srirampura Ring Road junction. MUDA Approved sites. Contact:
Mob: 9900375763

ಜಮೀನು ಮಾರಾಟಕ್ಕಿದೆ
ಸರ್ವೆ ನಂ. 97/5 & 5 & 97/9 ಒಂದು ಎಕರೆ ಜಮೀನು ಮಾಣಿಕ್ಯನಹಳ್ಳಿ ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ–571434ನಲ್ಲಿ ಇದೆ
9740285064

ಬೇಕಾಗಿದ್ದಾರೆ
ನ್ಯೂ ಶಾರದಾ ರೆಸಾರ್ಟ್ ಕೆ.ಆರ್.ಎಸ್. ಮೇನ್ ರೋಡ್, ನಿಯರ್ ಪಂಪ್ ಹೌಸ್ ಸರ್ಕಲ್
1) ಹೌಸ್‌ಕೀಪಿಂಗ್ ಬಾಯ್ಸ್ ಅಥವಾ ಲೇಡಿಸ್ 2) ರೂಂ ಬಾಯ್ಸ್, 3) ಅಕೌಂಟ್ ಸೆಕ್ಷನ್ ಅನುಭವವುಳ್ಳವರಿಗೆ ಮಾತ್ರ ಆದ್ಯತೆ.
ಸಂಪರ್ಕಿಸಿ:
Mob: 9880185785

ST. MIRA'S INCLUSIVE CONVENT, SUJJLUR
Wanted experienced HM, Trs (all subjects & Languages). Clerk & Part time Art faculty. Applicants should be proficient in English and Computer.
Mob: 9900118453
Send resume to smic.af.13@gmail.com / kalash03@gmail.com

Job Opening for Woman Employees only
(30 vacancies left)
Age group 30 to 45 years
Education: Degree / Diploma
Salary: 15K to 20K
ESI and PF. Contact:
Mob: 8050292837

Wanted Teachers
Social Sciene B.A., B.Ed. (English medium only)
Freshers / Experienced / Recently retired
Jnana Gangothri Convent Rajendra Nagara, Mysore.
Walk-in with originals
WhatsApp 9113980741

AFFIDAVIT
I, Shivakumari, residing at Door No. 116, Hosa Beedi, Kumbarakoppal, Metagalli Post, Mysuru-570 016, declare that my correct name is Shivakumari (Aadhaar Card No. 3199 4296 9402) it is mentioned correctly as Shivakumari. But in my Bank account No. 1315101015470 (Canara Bank, Brindavan Extensiion, Mysore) my name was mentioned as Kumari. Hence I make this affidavit infront of Notary C. Mangala tht both Shivakumari and Kumari names belong to my name and same one person.
Sd/- Shivakumari

HOUSE FOR SALE
30x40 Duplex house for sale in Unviersity Layout, Mysuru inside the Ring Road, West facing.
Call: 9449601309

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು): ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಸೂರ್ಯ ಬೇಕರಿ, ಲಕ್ಷ್ಮೀಕಾಂತ ನಗರ, ಬಸವನ ಗುಡಿ ಸರ್ಕಲ್, ಬೋಗಾದಿ ರಿಂಗ್ ರೋಡ್, ರೂಪ ನಗರ, SBM Layout, ಬಸವನಹಳ್ಳಿ, ಹಿನಕಲ್ (ಇಎಸ್‌ಐ) ಕೊಡಲಾಗುವುದು. ಆಸಕ್ತಿ ಇದ್ದವರು ಸಂಪರ್ಕಿಸಿ:
Mob: 83100 98788

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ ಮುಡಾ ಅನುಮೋದಿತ ಲೇಔಟ್ 20*40 ಅಡಿ. ಪೂರ್ವ ದಿಕ್ಕು. 3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು ಪಿಲ್ಲರ್ ಹೊಂದಿದೆ, 100% ವಾಸ್ತು, ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

REQUIRED
For a Reputed Firm in Hebbal Industrial Estate, Mysore.
1.OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

WANTED
1) Residential Teacher Male and Female
2) Marketing Executives
3) Watchman
6361717308, 9980918990

ಸಾಲ / Loans
* House / Site Purchase
* Construction Loan
* House / Site Mortgage
Loans for MUDA, Corporation & Revenue Property.
77605-98705

FOR SALE
3rd Stairs building, near DC Office, Double Road, Chamarajanagar-571313
Mob: 9742031155

ನ್ಯೂ ವಿಲ್ಲಾ ಮಾರಾಟಕ್ಕಿದೆ
ಆರ್ಕಿಟೆಕ್ಟ್ ಡಿಸೈನ್, ಈಸ್ಟ್, MUDA ಖಾತೆ, ಆಲ್ ಟೀಕ್, ಗ್ರಾನೈಟ್, 3 BHK, built area 2550 sq.ft. ಬೆಲೆ: 3800 per sq.ft., VTU ಸಾತಗಳ್ಳಿ, ಮೈಸೂರು
30x40 ನಿವೇಶನ, ನ. 3 ಖಾತೆ 1250 sq.ft, K.S. ಹುಂಡಿ, ಮೈಸೂರು
Mob: 9900840025

ದೈವ ಕೃಪ
ಕನ್ನಡ, ತೆಲುಗು, ತಮಿಳು ಎಲ್ಲಾ ವಿದ್ಯೆಯ ಎಲ್ಲಾ ಜನಾಂಗದ ಉನ್ನತ ನೌಕರಿಯಲ್ಲಿರುವ ವಧು ವರರಿಗೆ ಹಾಗೂ ಎರಡನೆ ಸಂಬಂಧಕ್ಕೆ ಮತ್ತು Caste no bar also.
ಕೂಡಲೇ ಸಂಪರ್ಕಿಸಿ: ಪುಟ್ಟಸ್ವಾಮಿ ನಂ. 535/A, 1ನೇ ಮುಖ್ಯ ರಸ್ತೆ, 13ನೇ ಕ್ರಾಸ್, ಬಿ.ಎಂ. ಶ್ರೀನಗರ, ಮೇಟಗಳ್ಳಿ, ಮೈಸೂರು–16
Mob: 9902802154

ತಕ್ಷಣ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
35 ವರ್ಷದ ಒಳಗೆ ಇರುವವರಿಗೆ ಮಾತ್ರ, ವೇತನ: ರೂ. 18,020. 10th, 12th Degree, Diploma, ITI pass or fail.
1) Field work.
2) Front office work.
Mob: 9880151303

HOUSE FOR SALE
20x30 newly construction house for sale, West facing, North door G+2 3 BHK, Dattagalli.
9900251194, 9738884779

HOUSE FOR RENT
2 BHK house in Aravinda Nagara, Srirampura 2nd Stage, Near Rossello Central School, East facing door, semi furnished, 24 hours water facility with solar water heater. Contact:
Mob: 9880361191

TEAM LEADERS ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನವುಳ್ಳವರು ಸಂಬಳ – 12000 ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ (10000)
8150005111
Field work ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ (15000) DRA Exam ಆಗಿರಬೇಕು
6361283482

Prime Location 3 BHK flat for sale
No. A-34, Akshata Abode, Adichunchanagiri Road, next to Godrej Interio, Kuvempunagar, 'K' Block.
Mob: 9483982170

VIDYAVAHINI SCHOOL (R)
Hebbal, 2nd Stage, Mysuru-570 017
TEACHERS REQUIRED
Subject: English, B.A., B.Ed.
Suibject: Mathematics, B.Sc., B.Ed. Email: vidyavahini06@gmail.com
9844032278 / 7795115811

WE ARE HIRING
* Accountant - 1 Open position (Female) 2 years exp. with Tally & Excel.
* Interior Site Supervisor - 2 Open position, Exp 2-5 years with Excel , BOQ, BOM & quotation.
* Construction & Interior Manager: 1 open position. 3-5 years.
ilinmysuru@gmail.com, Saraswathipuram, Mysore.
6363051826, 9538283848

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಿವಾನ್ಸ್ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
ONE FEMALE OFFICE AUDIT ASSISTANT
Qualification: PUC plus computer knowledge is essential. Preferably to Hebbal surrounding areas. Contact:
Nagaraje Gowda
Auditor & Tax Consultants
Mob: 9740285064

ಬೇಕಾಗಿದ್ದಾರೆ
PG ಯಲ್ಲಿ ಉಳಿದುಕೊಂಡು ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
8970132554

WANTED TEACHERS
NST- 2 POSTS, EVS - 1 POST
ENGLISH - 2 POST, SCIENCE - 2 POST, MATHS - 2 POST
HINDI - 1 POST
SDET - SCHOOL
SIDDALINGAPURA POST OFFICE ROAD, MYSORE
9845924194, 9535587045

ನಿವೇಶನಗಳು ಮಾರಟಕ್ಕಿದೆ
B.S.N.L ಲೇಔಟ್ ಸಾತಗಳ್ಳಿ ಲೇಔಟ್ ವಾಣಿವಿಲಾಸ ನಗರ
30x40, 20x30, 40x60
9448447035

ನಿವೇಶನಗಳು ಮಾರಾಟಕ್ಕಿವೆ
Govt ಹೈಸ್ಕೂಲ್ ಮತ್ತು ಕಾಲೇಜ್ ಹತ್ತಿರ ಇಲವಾಲ ನಂತರ ಅಳತೆಗಳು 30x40 ಬ್ಯಾಂಕ್ ಲೋನ್ ದೊರೆಯುತ್ತದೆ.
9880774395

ಪುರುಷರು ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸ ವಯಸ್ಸು 18 ರಿಂದ 45, 8hrs Duty ಸಂಬಳ 16700+ESI+PF-21500 Week off ಹಾಗೂ 3 Shift ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಬಂದು ಸಂಪರ್ಕಿಸಿ ಯಾವುದೇ Fees ಇರುವುದಿಲ್ಲ
ಸ್ಥಳ : CIPET ಕಾಲೇಜು ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಸಂಪರ್ಕಿಸಿ:
9901080314

20x30 ಅಡಿ ಅಳತೆಯ ಸೌತ್ ಫೇಸ್ ನಿವೇಶನ ವಿಜಯನಗರ, 4ನೇ ಹಂತ, 2ನೇ ಫೇಸ್‌ನಲ್ಲಿ ಮಾರಾಟಕ್ಕಿದೆ. (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ಪ್ರೋತ್ಸಾಹಕ ನಿವೇಶನ)
9606238146
9242395092

S.K. CONSTRUCTION
ಹೊಸ ಮನೆ ಕಟ್ಟಬೇಕೇ? ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತೀ ಉತ್ತಮ ಗುಣಮಟ್ಟದಲ್ಲಿ Engineer Plan, 3D Elivation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ.
9620528490

ದರ್ಶನ್ ಮ್ಯಾಟ್ರಿಮೊನಿಯಲ್
ಮೊದಲಿಯಾರ್ ಹಾಗೂ 2ನೇ ಮದುವೆಗೆ ವರ ಮತ್ತು ವಧು ಬೇಕಾಗಿದ್ದಾರೆ. 40 ವರ್ಷದ ಹಾಗೂ 42 ವರ್ಷದ ಮರಾಠಿ ವರರಿಗೆ ವಧು ಬೇಕಾಗಿದ್ದಾರೆ. (Cast no bar)
9740797851
9972355161

ಸುವರ್ಣ ಯಾತ್ರ
1) ನೇಪಾಳ ಪಶುಪತಿನಾಥ ಅಯೋಧ್ಯ ಮುಕ್ತಿನಾಥ ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 27–05–2024 – 9 ದಿನಗಳು
2) ಕಾಶಿ ಪ್ರವಾಸ 2 ಜ್ಯೋತಿರ್ಲಿಂಗದೊಂದಿಗೆ 24–05–2024 – 7 ದಿನಗಳು
3) 7 ದಿನಗಳು ಭೂತಾನ್ ಪ್ರವಾಸ 6–6–24
6360146483
8660233673

WANTED DRIVERS
For Mysore International Travels Pvt. Ltd.
9611957301
9945203003
0821-4247111

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮುಕ್ತಿಧಾಮಕ್ಕೆ 'ಮುಕ್ತಿ' ಕಲ್ಪಿಸಬೇಕಿದೆ!

ಬಾಪುಲಿಂಗರಾಜ್ ಅರಸ್

ಮೈಸೂರು, ಮೇ 3– ರಸ್ತೆ, ಕುಡಿಯುವ ನೀರು, ಒಳ ಚರಂಡಿ, ಬೀದಿ ದೀಪ, ಕಟ್ಟಡಗಳ ನಿರ್ಮಾಣ, ಸೇರಿದಂತೆ ನಗರ ಪಾಲಿಕೆಯಲ್ಲಿ 'ಮಾಮೂಲಿ' ಇಲ್ಲದ ಯೋಜನೆಗಳೇ ಇಲ್ಲ. ನಗರ ಪಾಲಿಕೆಯ ಯಾವುದೇ ಯೋಜನೆಯ ಒಳ ಹೊಕ್ಕು ನೋಡಿದರೆ, ಅಲ್ಲಿ ಭ್ರಷ್ಟಾಚಾರ ರಾರಾಜಿಸುತ್ತಿದೆ. ಎಲ್ಲೆಲ್ಲೂ ನುಂಗಣ್ಣಗಳದ್ದೇ ಕಾರುಬಾರು. ಇವರು ಕೇವಲ ಯೋಜನೆಗಳಲ್ಲಿ ಮಾತ್ರ 'ಹಣ' ನೋಡುತ್ತಿಲ್ಲ. ಉಸಿರು ಚೆಲ್ಲಿದವರಿಗೆ ಮುಕ್ತಿ ಕಲ್ಪಿಸುವ ಸ್ಥಳದಲ್ಲೂ ಮಾನವೀಯತೆಯ ಮಾರಿಕೊಂಡು ಹಣ ಮಾಡಲಾಗುತ್ತಿದೆ.

ಮೈಸೂರಿನ ವಿಜಯನಗರ 4 ನೇ ಹಂತ 3 ನೇ ಘಟ್ಟದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 5 ಎಕರೆ 10 ಗುಂಟೆ ಪ್ರದೇಶದಲ್ಲಿ 9 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಅತ್ಯಾಧುನಿಕ ಚಿತಾಗಾರ (ಹೈಟೆಕ್ ಕ್ರಿಮೇಟೋರಿಯಂ) ಇದಕ್ಕೆ ಸಾಕ್ಷಿಯಾಗಿದೆ. ಮೊದಲ ಅತ್ಯಾಧುನಿಕ ಚಿತಾಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆಯನ್ನು ಆಧುನಿಕ ತಂತ್ರಜ್ಞಾನ ವಿಧಾನದಲ್ಲಿ ನೆರವೇರಿಸುವ ವ್ಯವಸ್ಥೆ ಮಾಡಲಾಗಿದೆ. ಆದರೆ, ಮೂಲ ಸೌಕರ್ಯಗಳೇ ಇಲ್ಲದೆ ಅತ್ಯಾಧುನಿಕ ಚಿತಾಗಾರ ಎಂಬ ಹೆಸರಿಗೆ ಕಳಂಕ ತರುವಂತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಈ ಮುಕ್ತಿಧಾಮವನ್ನು 2016ರಲ್ಲಿ ಜನರ ಸೇವೆಗೆ ಮುಕ್ತಗೊಳಿಸಿತು. ನಂತರ ಇದರ ನಿರ್ವಹಣೆಯನ್ನು ನಗರ ಪಾಲಿಕೆಯ ಸುಪರ್ದಿಗೆ ನೀಡಲಾಗಿತ್ತು. ಈ ಮುಕ್ತಿಧಾಮದಲ್ಲಿ 2 ವಿದ್ಯುತ್, 1 ಅನಿಲ ಹಾಗೂ 6 ಸೌದೆ ಚಿತಾಗಾರವಿದೆ. ಹೊರ ಬರುವ ಹೊಗೆ ಸುತ್ತ ಮುತ್ತಲ ಬಡಾವಣೆಗಳಿಗೆ ಆವರಿಸದಂತೆ ನೂರು ಅಡಿ ಎತ್ತರದ ಎರಡು ವಿದ್ಯುತ್, ಒಂದು ಅನಿಲ ಚಿಮಣಿ ಅಳವಡಿಸಲಾಗಿದೆ. ಇಷ್ಟೆಲ್ಲಾ ಆಧುನಿಕ ತಂತ್ರಜ್ಞಾನ ಅಳವಡಿಸಿಯೂ ಮುಕ್ತಿಧಾಮ ಗಬ್ಬೆದ್ದು ನಾರುತ್ತಿದೆ, ಇಲ್ಲಿನ ಅಶುಚಿತ್ವದ ವಾತಾವರಣದಿಂದಾಗಿ ಮೃತ ದೇಹದ ಅಂತ್ಯಕ್ರಿಯೆಗೆ ಬಂದ ಜನರು ಮೂಗು ಮುಚ್ಚಿಕೊಂಡು ಬಂದ ಕೆಲಸ ಮುಗಿಸಿ ಹೋಗುವ ದುಃಸ್ಥಿತಿ ನಿರ್ಮಾಣವಾಗಿದೆ. ಮುಕ್ತಿಧಾಮದ ಸ್ವಚ್ಛತೆ ಹಾಗೂ ನಿರ್ವಹಣೆಯನ್ನು ಕಳೆದ 7 ವರ್ಷಗಳಿಂದ ಒಬ್ಬನೇ ವ್ಯಕ್ತಿಗೆ ಗುತ್ತಿಗೆ ನೀಡಲಾಗಿದೆ. ಆತ ಗ್ಯಾಸ್ ಸಿಲಿಂಡರ್ ತರಬೇಕಾಗುತ್ತದೆ ಎಂಬ ಕಾರಣಕ್ಕೆ ಇಲ್ಲಿ ತನಕ ಅನಿಲ ಚಿತಾಗಾರವನ್ನು ಬಳಕೆಗೇ ನೀಡದೇ ಮುಚ್ಚಿದ್ದಾನೆ.

ವಿದ್ಯುತ್ ಹಾಗೂ ಸೌದೆ ಚಿತಾಗಾರದಲ್ಲಿ ಮಾತ್ರ ಅಂತ್ಯ ಸಂಸ್ಕಾರಗಳು ನಡೆಯುತ್ತಿವೆ. ಅಂತ್ಯ ಸಂಸ್ಕಾರ ಉಚಿತವಾದರೂ ಹಣ ಕೊಡದೆ ಯಾವ ದೇಹಕ್ಕೂ ಇಲ್ಲಿ ಮುಕ್ತಿ ದೊರೆಯುವುದಿಲ್ಲ. ಬೇರೆ ದಾರಿ ಕಾಣದೇ ದುಃಖತಪ್ತ ಕುಟುಂಬದವರು ಹಿಡಿಶಾಪ ಹಾಕಿಕೊಂಡೇ ಸಂಸ್ಕಾರ ಮುಗಿಸಿದ ನಂತರ ಕೈ ಕಾಲು ತೊಳೆಯೋಣ ಎಂದು ನಲ್ಲಿ ಬಳಿ ಹೋದರೆ ಅಲ್ಲಿ ನೀರೇ ಬರುವುದಿಲ್ಲ. ಒಂದು ಬಡಾವಣೆಗೆ ನೀರು ಪೂರೈಕೆ ಮಾಡುವಷ್ಟು ದೊಡ್ಡ ಟ್ಯಾಂಕ್ ನಿರ್ಮಾಣ ಮಾಡಲಾಗಿದ್ದರೂ ಮೋಟಾರ್ ಕೆಟ್ಟಿರುವ ಕಾರಣ ಸಂಪ್‌ನಿಂದ ಟ್ಯಾಂಕ್‌ಗೆ ನೀರು ಏರಿಸಿಲ್ಲ. ಇದರಿಂದ ಅಂತ್ಯ ಸಂಸ್ಕಾರ ಮಾಡಿ ಹೊರ ಬರುವವರಿಗೆ ಕೈ ಕಾಲು ತೊಳೆಯಲು ನೀರಿಲ್ಲ. ಇನ್ನು ಕುಡಿಯುವ ನೀರಂತೂ ಇಲ್ಲಿ ಸಿಗುವುದೇ ಇಲ್ಲ ಎಂದು ಮತ್ತೆ ಹೇಳಬೇಕಿಲ್ಲ. ಇನ್ನು ಶೌಚಾಲಯದ ಪರಿಸ್ಥಿತಿಯಂತೂ ಗಬ್ಬೆದ್ದು ನಾರುತ್ತಿದ್ದು ಬಳಸಲು ಸಾಧ್ಯವಾಗದಂತಿವೆ.

ಮುಕ್ತಿಧಾಮಕ್ಕೆ ಕಾವಲೇ ಇಲ್ಲ. ರಾತ್ರಿಯಾದರೆ ಮುಕ್ತಿದಾಮದಲ್ಲಿ ಗುಂಡು ಪಾರ್ಟಿ ನಡೆಯುತ್ತದೆ. ಅನೈತಿಕ ಚಟುವಟಿಕೆಗಳ ತಾಣವೂ ಆಗಿದೆ. ನಾಲ್ಕೂವರೆ ಲಕ್ಷ ರೂಪಾಯಿ ವಿದ್ಯುತ್ ಬಿಲ್ ಪಾವತಿ ಮಾಡದ ಕಾರಣ ಚೆಸ್ಕಾಂನವರು ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರು. ಇದರಿಂದ ಸುಮಾರು ಒಂದು ವಾರ ಮುಕ್ತಿಧಾಮಕ್ಕೆ ವಿದ್ಯುತ್ ಇರಲಿಲ್ಲ. ಹಾಗಾಗಿ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯದೆ ಸೌದೆ ಬಳಸಿ ಅಂತ್ಯ ಸಂಸ್ಕಾರ ಮಾಡಲಾಗುತ್ತಿತ್ತು. ತರುವಾಯ ಸ್ಥಳೀಯರ ಮನವಿ ಮೇರೆಗೆ ಮಾನವೀಯತೆ ದೃಷ್ಟಿಯಿಂದ ಚೆಸ್ಕಾಂನವರು ವಿದ್ಯುತ್ ಸಂಪರ್ಕ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಮುಕ್ತಿಧಾಮದಲ್ಲಿ ಇಷ್ಟೆಲ್ಲಾ ಅವ್ಯವಸ್ಥೆಗಳಿದ್ದರೂ ಅದು ನಗರ ಪಾಲಿಕೆಯ ಅಧಿಕಾರಿಗಳಿಗೆ ಗೊತ್ತೇ ಇಲ್ಲವೇನೋ ಎನ್ನುವಂತಿದೆ. ಅಧಿಕಾರಿಗಳು ಇತ್ತ ತಲೆಯೂ ಹಾಕದೇ ಪ್ರತಿ ತಿಂಗಳೂ ಗುತ್ತಿಗೆದಾರನಿಗೆ ಲಕ್ಷಾಂತರ ರೂಪಾಯಿ ಬಿಲ್ ಪಾವತಿ ಮಾಡುತ್ತಿದ್ದಾರೆ ಎಂದು ದೂರಲಾಗಿದೆ ಮುಕ್ತಿಧಾಮದ ಇಂತಹ ವಾತಾವರಣದಲ್ಲಿ ಸತ್ತ ವ್ಯಕ್ತಿಗೆ ಮುಕ್ತಿ ದೊರೆಯುವುದೇ? ಮುಕ್ತಿಧಾಮದ ಸಮಸ್ಯೆಗೆ ಮುಕ್ತಿ ನೀಡುವುದಾದರೂ ಯಾರು? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ.



"ಮುಕ್ತಿಧಾಮದ ಅವ್ಯವಸ್ಥೆ ವಿಚಾರ ಈಗ ನನ್ನ ಗಮನಕ್ಕೆ ಬಂದಿದೆ ಈ ಸಂಬಂಧ ಅಧಿಕಾರಿಗಳನ್ನು ಕಳುಹಿಸಿ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇನೆ.

-ಡಾ.ಮಧು, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ.





ಲೋಕಸಭೆ ಚುನಾವಣೆ ದೃಷ್ಟಿಯಿಂದ 'ಸುಪ್ರೀಂ' ಕೇಜ್ರಿವಾಲ್‌ಗೆ ಮಧ್ಯಂತರ ಜಾಮೀನು ಸಾಧ್ಯತೆ

ನವದೆಹಲಿ: ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರದ್ದಾಗಿರುವ ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ನೀಡುವ ಬಗ್ಗೆ ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.



ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ದೀಪಂಕರ್ ದತ್ತಾ ನೇತೃತ್ವದ ದ್ವಿಸದಸ್ಯ ಪೀಠ, ಕೇಜ್ರಿವಾಲ್ ಪರ ಅಭಿಷೇಕ್ ಮನು ಸಿಂಘ್ವಿ ಮತ್ತು ಜಾರಿ ನಿರ್ದೇಶನಾಲಯದ ಎಸ್ ವಿ ರಾಜು ಅವರ ವಾದ ಮತ್ತು ಪ್ರತಿವಾದಗಳನ್ನು ಆಲಿಸಿದ ಸಂದರ್ಭದಲ್ಲಿ ಈ ಸೂಚನೆ ನೀಡಿದೆ.

ಆದರೆ ಅವರಿಗೆ ಮಧ್ಯಂತರ ಜಾಮೀನು ನೀಡಬೇಕೇ ಅಥವಾ ಬೇಡವೇ ಎಂಬುದರ ಕುರಿತು ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ವಿಚಾರಣೆಯು ಶೀಘ್ರದಲ್ಲೇ ಮುಕ್ತಾಯಗೊಳ್ಳುವ ಸಾಧ್ಯತೆ ಇಲ್ಲದಿದ್ದರೆ ಮಧ್ಯಂತರ ಜಾಮೀನು ಮಂಜೂರು ಮಾಡುವ ಬಗ್ಗೆ ಪರಿಗಣಿಸಬಹುದು ಎಂದು ಎಲ್ಲಾ ಪಕ್ಷಗಳ ಪರವಾಗಿ ಹಾಜರಾಗುವ ವಕೀಲರಿಗೆ ಮಾತ್ರ ತಿಳಿಸುವುದಾಗಿ ಹೇಳಿದೆ.

ಇಡಿ ಮತ್ತು ಕೇಜ್ರಿವಾಲ್ ಎರಡೂ ಕಡೆಯ ವಕೀಲರಿಗೆ ಜಾಮೀನು ನೀಡುವ ಬಗ್ಗೆ ಪರಿಗಣಿಸುವಂತೆ ಕೇಳಿಕೊಂಡಿದೆ ಮತ್ತು ಈ ಪ್ರಕರಣ ಸಾಕಷ್ಟು ಸಮಯ ತೆಗೆದುಕೊಳ್ಳಬಹುದು ಎಂದು ನ್ಯಾಯಾಲಯ ಮೌಖಿಕವಾಗಿ ಗಮನಿಸಿದ್ದು, ನಾವು ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈ ಹಂತದಲ್ಲಿ ಮಧ್ಯಂತರ ಜಾಮೀನು ನೀಡುವುದನ್ನು ಪರಿಗಣಿಸಬಹುದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಮುಂದಿನ ವಿಚಾರಣೆಯನ್ನು ಮೇ 7ಕ್ಕೆ ಸುಪ್ರೀಂಕೋರ್ಟ್ ನಿಗದಿಪಡಿಸಿದೆ.

ಪ್ರಕರಣದಲ್ಲಿ ಕೇಜ್ರಿವಾಲ್ ಅವರು ನಿರಪರಾಧಿ ಎಂದು ಪ್ರತಿಪಾದಿಸಿದ ಸಿಂಘ್ವಿ, ನ್ಯಾಯಸಮ್ಮತವಲ್ಲದ ಬಂಧನಗಳನ್ನು ತಡೆಯಲು PMLA ಅಡಿಯಲ್ಲಿ ಕೆಲವು ಸುರಕ್ಷತೆಗಳನ್ನು ಒದಗಿಸಲಾಗಿದೆ ಎಂದು ಹೇಳಿದರು. ಇಡಿ ನಿಷ್ಪಕ್ಷಪಾತವಾಗಿ ಮತ್ತು ನ್ಯಾಯಯುತವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ರಮ ಹಣ ವರ್ಗಾವಣೆ ನಡೆದಿದೆ ಎಂಬ ಆರೋಪದ ಮೇಲೆ ಮಾರ್ಚ್ 21 ರಂದು ಜಾರಿ ನಿರ್ದೇಶನಾಲಯ ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿತ್ತು. ತಮ್ಮ ಬಂಧನ ಪ್ರಶ್ನಿಸಿ ಕೆಳ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿದ್ದ ಕೇಜ್ರಿವಾಲ್, ಬಳಿಕ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ರಾಯ್ ಬರೇಲಿಯಿಂದ ರಾಹುಲ್, ಅಮೇಥಿಯಿಂದ ಕೆಎಲ್ ಶರ್ಮಾ ಸ್ಪರ್ಧೆ

● ಚುನಾವಣಾ ಪ್ರಚಾರಕ್ಕೆ ಪ್ರಿಯಾಂಕಾ ಸೀಮಿತ!
● ತಾಯಿ ಪ್ರತಿನಿಧಿಸುತ್ತಿದ್ದ ಕ್ಷೇತ್ರದಲ್ಲಿ ಪುತ್ರನ ಸರದಿ!

ನವದೆಹಲಿ: ಗಾಂಧಿ ಕುಟುಂಬದ ಭದ್ರ ಕೋಟೆಯಾದ ರಾಯ್‌ಬರೇಲಿಯಿಂದ ಸಂಸದ ರಾಹುಲ್ ಗಾಂಧಿ ಸ್ಪರ್ಧಿಸಲಿದ್ದು, ಹಿರಿಯ ನಾಯಕ ಕೆಎಲ್ ಶರ್ಮಾ ಅಮೇಥಿಯಿಂದ ಕಣಕ್ಕಿಳಿದಿದ್ದಾರೆ. ಪ್ರತಿಷ್ಠಿತ ಸ್ಥಾನಗಳಿಗೆ ನಾಮಪತ್ರ ಸಲ್ಲಿಸುವ ಕೆಲವೇ ಗಂಟೆಗಳ ಮೊದಲು ಹೆಸರು ಘೋಷಣೆಯಾಗಿದೆ.




ರಾಹುಲ್ ಗಾಂಧಿ ಕೆಎಲ್ ಶರ್ಮಾ

ಲೋಕಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ಕ್ಷಣದಲ್ಲಿ ಕಾಂಗ್ರೆಸ್ ಹೊಸ ತಂತ್ರಗಾರಿಕೆಯನ್ನು ನಡೆಸಿದೆ. ಲೋಕಸಭಾ ಚುನಾವಣೆಯಲ್ಲಿ ಈಗಾಗಲೇ ವಯನಾಡಿನಿಂದ ಸ್ಪರ್ಧಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇದೀಗ ರಾಯ್ ಬರೇಲಿಯಿಂದಲೂ ಕಣಕ್ಕಿಳಿದಿದ್ದಾರೆ.

ನಾಮಪತ್ರ ಸಲ್ಲಿಸುವ ಗಡುವು ಇಂದು ಮಧ್ಯಾಹ್ನ 3 ಗಂಟೆಗೆ ಕೊನೆಗೊಂಡಿತು. ಎರಡೂ ಕ್ಷೇತ್ರಗಳನ್ನು ಗಾಂಧಿ–ನೆಹರು ಕುಟುಂಬದ ಸಾಂಪ್ರದಾಯಿಕ ಭದ್ರಕೋಟೆ ಎಂದು ಪರಿಗಣಿಸಲಾಗುತ್ತದೆ ಏಕೆಂದರೆ ಗಾಂಧಿ ಕುಟುಂಬಸ್ಥರು ಹಲವಾರು ದಶಕಗಳಿಂದ ಈ ಕ್ಷೇತ್ರಗಳನ್ನು ಪ್ರತಿನಿಧಿಸಿದ್ದಾರೆ. ರಾಯ್ ಬರೇಲಿಯಲ್ಲಿ ಮೇ 20ರಂದು ಮತದಾನ ನಡೆಯಲಿದೆ. ಇನ್ನೂ ಇಷ್ಟು ದಿನಗಳ ಕಾಲ ಸಾಕಷ್ಟು ಕುತೂಹಲ ಮೂಡಿಸಿದ್ದ ಪ್ರಿಯಾಂಕಾ ಗಾಂಧಿ ಸ್ಪರ್ಧೆ ವಿಚಾರಕ್ಕೆ ಇಂದು ತೆರೆ ಬಿದಿದ್ದು, ಪ್ರಿಯಾಂಕಾ ಗಾಂಧಿ ಎಲ್ಲೂ ಸ್ಪರ್ಧಿಸುತ್ತಿಲ್ಲ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ರಾಯ್‌ಬರೇಲಿಯಿಂದ ಚುನಾವಣಾ ಪಾದಾರ್ಪಣೆ ಮಾಡಬಹುದೆಂದು ಊಹಿಸಲಾಗಿತ್ತು. ಆದರೆ, ಪ್ರಿಯಾಂಕಾ ಪ್ರಚಾರದತ್ತ ಗಮನ ಹರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಹುಲ್ ಗಾಂಧಿ ಅಮೇಥಿಯಿಂದ ಮತ್ತು ಪ್ರಿಯಾಂಕಾ ಗಾಂಧಿ ರಾಯ್‌ಬರೇಲಿಯಿಂದ ಸ್ಪರ್ಧಿಸುತ್ತಾರೆ ಎಂದು ಹೇಳಲಾಗುತ್ತಿತ್ತು.

ರಾಯ್ ಬರೇಲಿ ಸಂಸದರಾಗಿ ಸತತ ನಾಲ್ಕು ಬಾರಿ ಸೇವೆ ಸಲ್ಲಿಸಿದ ನಂತರ, ಮಾಜಿ ಕಾಂಗ್ರೆಸ್ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ರಾಯ್‌ಬರೇಲಿ ಕ್ಷೇತ್ರವು ಕಾಂಗ್ರೆಸ್‌ಗೆ ಪ್ರತಿಷ್ಠಿತ ಕ್ಷೇತ್ರವಾಗಿದೆ ಏಕೆಂದರೆ ಇದನ್ನು ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ಮೂರು ಬಾರಿ ಮತ್ತು ಇಂದಿರಾ ಅವರ ಪತಿ ಫಿರೋಜ್ ಗಾಂಧಿಯವರು 1952 ಮತ್ತು 1957 ರಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಸೋನಿಯಾ ಗಾಂಧಿ 2004 ರಿಂದ 2024 ರವರೆಗೆ ಪ್ರತಿನಿಧಿಸಿದ್ದರು.

ರಾಹುಲ್ ಗಾಂಧಿಯವರು 2004 ರಿಂದ 2019 ರವರೆಗೆ ಮೂರು ಬಾರಿ ಅಮೇಥಿಯನ್ನು ಪ್ರತಿನಿಧಿಸಿದ್ದರು ಮತ್ತು 2019 ರ ಲೋಕಸಭೆ ಚುನಾವಣೆಯಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ, ಅವರನ್ನು 50,000ಕ್ಕೂ ಹೆಚ್ಚು ಮತಗಳಿಂದ ಸೋಲಿಸಿದ್ದರು. ಇರಾನಿ ವಿರುದ್ಧ ಗಾಂಧಿ ಕುಟುಂಬದ ಆಪ್ತ ಕೆಎಲ್ ಶರ್ಮಾ ಕಣಕ್ಕಿಳಿದಿದ್ದಾರೆ. ಮೇ 20 ರಂದು ಐದನೇ ಹಂತದಲ್ಲಿ ಅಮೇಥಿ ಮತ್ತು ರಾಯ್‌ಬರೇಲಿ ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಿಗದಿಯಾಗಿದೆ.

ಮೇ 26, ಸಾಮೂಹಿಕ ಉಪನಯನ

ಮೈಸೂರು, ಮೇ 3–ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಮಂಟಿ ಸಮೀಪದ ಸಾಧನಹಳ್ಳಿ ಶ್ರೀ ಸಪ್ತರ್ಷಿ ಗುರುಕುಲ ಸೇವಾಕೇಂದ್ರದಲ್ಲಿ ಮೇ 26ನೇ ಭಾನುವಾರ ಸಾರ್ವಜನಿಕ ಸಾಮೂಹಿಕ ಉಪನಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಶ್ರೀ ಸಪ್ತರ್ಷಿ ಗುರುಕುಲ ಸೇವಾ ಕೇಂದ್ರದ ಪೀಠಾಧ್ಯಕ್ಷರಾದ ಶ್ರೀ ಅಭಿನವ ರಾಮಾನುಜಚಾರ್ಯರನ್ನು 9481319111, 8861573934 ಸಂಪರ್ಕಿಸಬಹುದು.

ಕೆಕೆಆರ್ ಗೆಲುವು: ಪ್ಲೇಆಫ್ ರೇಸ್‌ನಿಂದ ಹೊರಬಿದ್ದ ಮುಂಬೈ

ಮುಂಬೈ, ಮೇ 3– ವೆಂಕಟೇಶ್ ಅಯ್ಯರ್ ಅರ್ಧಶತಕ, ಮಿಚೆಲ್ ಸ್ಟಾರ್ಕ್ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಮುಂಬೈ ಇಂಡಿಯನ್ಸ್ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ 24 ರನ್‌ಗಳ ಜಯ ಸಾಧಿಸಿದೆ.

ಆ ಮೂಲಕ ಕೆಕೆಆರ್ ಆಡಿರುವ 10 ಪಂದ್ಯಗಳಲ್ಲಿ 7 ಗೆಲುವು, 3 ಸೋಲಿನೊಂದಿಗೆ 14 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 2ನೇ ಸ್ಥಾನ ಅಲಂಕರಿಸಿದರೇ ಮುಂಬೈ ಆಡಿರುವ 11 ಪಂದ್ಯಗಳಲ್ಲಿ 3 ಗೆಲುವು, 8 ಸೋಲಿನೊಂದಿಗೆ 6 ಅಂಕ ಗಳಿಸಿದ್ದು, ಪ್ಲೇ ಆಫ್‌ನಿಂದ ಹೊರಬಿದ್ದಿದೆ.



ಇಲ್ಲಿನ ವಾಂಖೆಡೆ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ 19.5 ಓವರ್‌ಗಳಲ್ಲಿ 169 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಮೊತ್ತ 57 ರನ್ ಆಗುವಷ್ಟರಲ್ಲೇ ಪ್ರಮುಖ 5 ವಿಕೆಟ್‌ಗಳನ್ನು ಕಳೆದುಕೊಂಡು ಕೋಲ್ಕತ್ತಾ ಸಂಕಷ್ಟಕ್ಕೆ ಸಿಲುಕಿತು. ಫಿಲ್ ಸಾಲ್ಟ್ 5 ರನ್ ಗಳಿಸಿದರೆ, ಮತ್ತೋರ್ವ ಆರಂಭಿಕ ಬ್ಯಾಟರ್ ಸುನೀಲ್ ನರೈನ್ 8 ರನ್ ಗಳಿಸಿ ಹಾರ್ದಿಕ್ ಪಾಂಡ್ಯ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ರಘುವಂಶಿ 13 ರನ್ ಗಳಿಸಿದರೆ, ನಾಯಕ ಶ್ರೇಯಸ್ ಅಯ್ಯರ್ 6 ರನ್ ಗಳಿಸಿ ತುಷಾರಗೆ ಮೂರನೇ ಬಲಿಯಾದರು. ಇನ್ನು ರಿಂಕು ಸಿಂಗ್ 9 ರನ್ ಗಳಿಸಿ ಪೀಯೂಷ್ ಚಾವ್ಲಾಗೆ ವಿಕೆಟ್ ಒಪ್ಪಿಸಿದರು.

6ನೇ ವಿಕೆಟ್‌ಗೆ ಜೊತೆಯಾದ ವೆಂಕಟೇಶ್ ಅಯ್ಯರ್ ಹಾಗೂ ಮನೀಶ್ ಪಾಂಡೆ 83 ರನ್‌ಗಳ ಜತೆಯಾಟವಾಡಿ ತಂಡಕ್ಕೆ ಆಸರೆಯಾದರು. ಈ ವೇಳೆ ಮನೀಶ್ ಪಾಂಡೆ 31 ಎಸೆತಗಳಲ್ಲಿ ತಲಾ 2 ಬೌಂಡರಿ, ಸಿಕ್ಸರ್ ಒಳಗೊಂಡ 42 ರನ್ ಬಾರಿಸಿ ಪಾಂಡ್ಯಗೆ ವಿಕೆಟ್ ಒಪ್ಪಿಸಿದರು. ಇನ್ನು ವೆಂಕಟೇಶ್ ಅಯ್ಯರ್ 52 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಒಳಗೊಂಡ 70 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮುಂಬೈ ಇಂಡಿಯನ್ಸ್ ಪರ ನುವಾನ್ ತುಷಾರ ಹಾಗೂ ಜಸ್ಪ್ರೀತ್ ಬುಮ್ರಾ ತಲಾ 3, ಹಾರ್ದಿಕ್ ಪಾಂಡ್ಯ 2 ಹಾಗೂ ಪಿಯೂಷ್ ಚಾವ್ಲಾ ಒಂದು ವಿಕೆಟ್ ಪಡೆದರು.


170 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 18.5 ಓವರ್‌ಗಳಲ್ಲಿ 145 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಏಕಾಂಗಿ ಹೋರಾಟ ನಡೆಸಿದ ಸೂರ್ಯಕುಮಾರ್ ಯಾದವ್ 35 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಒಳಗೊಂಡ 56 ರನ್ ಗಳಿಸಿದರು. ಉಳಿದಂತೆ ಟೀಮ್ ಡೇವಿಡ್ 24, ರೋಹಿತ್ ಶರ್ಮಾ, ನಮನ್ ಧೀರ್ ತಲಾ 11, ಇಶಾನ್ ಕಿಶನ್ 13 ರನ್ ಗಳಿಸಿದರು.

ಕೋಲ್ಕತ್ತಾ ಪರ ಸ್ಟಾರ್ಕ್ 4, ವರುಣ್ ಚಕ್ರವರ್ತಿ, ಸುನೀಲ್ ನರೈನ್, ರಸೆಲ್ ತಲಾ 2 ವಿಕೆಟ್ ಪಡೆದರು. ವೆಂಕಟೇಶ್ ಅಯ್ಯರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ (ಮೇ 4)
ರಾಯಲ್ ಚಾಲೆಂಜರ್ಸ್ ಬೆಂಗಳೂರು / ಗುಜರಾತ್ ಟೈಟಾನ್ಸ್
ಸ್ಥಳ: ಬೆಂಗಳೂರು, ಎಂ.ಚಿನ್ನಸ್ವಾಮಿ ಕ್ರೀಡಾಂಗಣ
ಸಮಯ: ಸಂಜೆ 7.30ಕ್ಕೆ

ಕಬಿನಿ ಹಿನ್ನೀರಲ್ಲಿ ಜೂನಿಯರ್ ಅರ್ಜುನನ ದರ್ಶನ!

ಕಣ್ತುಂಬಿಕೊಂಡ ಪ್ರವಾಸಿಗರು



● ಬೀಚನಹಳ್ಳಿ ಮಂಜು

ಹೆಚ್.ಡಿ.ಕೋಟೆ, ಮೇ 3– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದವೇರಿದ ಸಲಗ ನಡೆಸಿದ ದಾಳಿಗೆ ಉಸಿರು ನಿಲ್ಲಿಸಿದ ದಸರಾ ಆನೆ ಅರ್ಜುನನ ನೆನಪು ಮಾಸುವ ಮುನ್ನವೇ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಅರ್ಜುನ ಆನೆಯನ್ನೇ ಹೋಲುವ ಕಾಡಾನೆಯೊಂದು ಕಂಡು ಬಂದಿದ್ದು, ಪ್ರಾಣಿ ಪ್ರಿಯರಲ್ಲಿ ಅಚ್ಚರಿ ಮೂಡಿಸಿದೆ.

ನಾಡಹಬ್ಬ ದಸರಾ ಮಹೋತ್ಸವದಲ್ಲಿ ಸತತ 8 ಬಾರಿ ಚಿನ್ನದ ಅಂಬಾರಿ ಹೊತ್ತು ಲಕ್ಷಾಂತರ ಅಭಿಮಾನಿಗಳನ್ನು ಹೊಂದಿದ್ದ ಅರ್ಜುನ ಹಾಸನದಲ್ಲಿ ಕಾಡಾನೆ ಸೆರೆ ಕಾರ್ಯಾ ಚರಣೆಯಲ್ಲಿ ತೊಡಗಿದ್ದಾಗ ಮದವೇರಿದ ಆನೆಯೊಂದು ನಡೆಸಿದ ದಾಳಿಗೆ ಒಳಗಾಗಿ ಮೃತಪಟ್ಟಿತ್ತು. ಕಳೆದ ದಸರಾ ಮಹೋತ್ಸವದಲ್ಲಿ ನಿಶಾನೆ ಆನೆಯಾಗಿ ಮೆರವಣಿಗೆಯ ಮುಂಚೂಣಿಯಲ್ಲಿ ಸಾಗಿ, ದಾರಿಯುದ್ದಕ್ಕೂ ನೆರೆದಿದ್ದ ಅಪಾರ ಜನಸ್ತೋಮದತ್ತ ಸೊಂಡಿಲು ಎತ್ತಿ ಮನಸೂರೆಗೊಂಡಿದ್ದ ಅರ್ಜುನನ ಅಕಾಲಿಕ ಸಾವು ಪ್ರಾಣಿ ಪ್ರಿಯರಿಗೆ ನೋವುಂಟು ಮಾಡಿತ್ತು. ಅರ್ಜುನ ನೆಲೆಸಿದ್ದ ಹೆಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಬಳ್ಳೆ ಶಿಬಿರ ಸಮೀಪದ ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಅರ್ಜುನ ಆನೆಯನ್ನೇ ಹೋಲುವ ಮತ್ತೊಂದು ಕಾಡಾನೆ ಪ್ರವಾಸಿಗರ ಕಣ್ಣಿಗೆ ಬಿದ್ದಿದೆ. ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಜೂನಿಯರ್ ಅರ್ಜುನ ಕಂಡು ಬಂದಿದ್ದು, ದಸರಾ ಆನೆ ಅರ್ಜುನನ ಪ್ರತಿರೂಪ ಎಂದು ಪ್ರವಾಸಿಗರು ಕಾಡಾನೆಯನ್ನು ಕಣ್ತುಂಬಿಕೊಂಡಿದ್ದಾರೆ.

ಬೇಸಿಗೆ ಹಿನ್ನೆಲೆಯಲ್ಲಿ ಕಬಿನಿ ಹಿನ್ನೀರಿನಲ್ಲಿ ಪ್ರಾಣಿಗಳ ಹಿಂಡು ಬೀಡು ಬಿಟ್ಟಿವೆ. ಆಹಾರ ಅರಸಿ ವಿವಿಧೆಡೆಯಿಂದ ಬರುವ ಆನೆಗಳು ಹಿನ್ನೀರಿನ ಪ್ರದೇಶದಲ್ಲಿ ಓಡಾಡುತ್ತಿವೆ. ಆನೆಗಳ ಹಿಂಡಲ್ಲಿ 'ಜೂನಿಯರ್ ಅರ್ಜುನ' ಆನೆಯೂ ಒಂದಾಗಿದ್ದು, ಸಫಾರಿಗೆ ತೆರಳಿದ್ದ ಛಾಯಾಗ್ರಾಹಕ ಮನೋಜ್ ಗನ್ನ ಎಂಬುವರು ಅರ್ಜುನ ಆನೆಯನ್ನೇ ಹೋಲುವ ಕಾಡಾನೆಯ ಚಿತ್ರ ತೆಗೆದಿದ್ದಾರೆ. ಈ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.


ಅರ್ಜುನ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂಗರೂ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲೂಡೋ ಈಸ್ ಬ್ಯಾಕ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾರಕಾಸ್ತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ–4(ತ)	4 ಪ್ರದರ್ಶನಗಳು
ಸಂಗಂ	
ಉಸಿರೇ ಉಸಿರೇ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಿಲ್ಲ (ತ)	4 ಪ್ರದರ್ಶನಗಳು
ಪ್ರಭಾ	
ಮಾರಣಾಯುದ್ಧಂ (ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.40ಕ್ಕೆ, ಗಿಲ್ಲಿ (ತ): ಸಂ.4ಕ್ಕೆ, ದಿ ಫಾಲ್ ಗಾಯ್ (ಇಂ): ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಅಂಜಾಮ್ ವೇದಂ (ಮ): ಬೆ.11ಕ್ಕೆ, O2 (ಕ): ಮ.1.45ಕ್ಕೆ, ಉಸಿರೇ ಉಸಿರೇ (ಕ): ಸಂ.4.05ಕ್ಕೆ, ಆವೇಶಂ (ಮ): ರಾ.7.05ಕ್ಕೆ, ನಡಿಕರ್ (ಮ): ರಾ.10.05ಕ್ಕೆ,
ಸ್ಕ್ರೀನ್ 3	ಕಾಂಗರೂ (ಕ): ಬೆ.11ಕ್ಕೆ, ಬಿಲ್ಲಾ (ತ): ಮ.1.35ಕ್ಕೆ, ಅರಮನೈ 4 (ತ): ಸಂ.4.20ಕ್ಕೆ, ರಾ.10.05ಕ್ಕೆ, ಪ್ರಸನ್ನವದನಂ (ತೆ): ರಾ.7.15ಕ್ಕೆ.
ಸ್ಕ್ರೀನ್ 4	ದಿ ಫಾಲ್ ಗಾಯ್ (ಇಂ): ಬೆ.11.10ಕ್ಕೆ, ಸಂ.4.35ಕ್ಕೆ, ಸಬರಿ (ತೆ): ಮ.1.50ಕ್ಕೆ, ಮಲಯಾಳಿ ಫ್ರಂ ಇಂಡಿಯಾ (ಮ): ರಾ.7.10ಕ್ಕೆ, ಆ ಒಕ್ಕಟಿ ಅಡಕ್ಕು (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಿಯಾಲಿಟಿ ಶೋನಲ್ಲಿ ಮೆಕ್ಯಾನಿಕ್‌ಗಳಿಗೆ ಅವಹೇಳನ: ಠಾಣೆಯಲ್ಲಿ ದೂರು ದಾಖಲು



ತಿ.ನರಸೀಪುರ, ಮೇ 3– 'ಮಹಾನಟಿ' ಎಂಬ ರಿಯಾಲಿಟಿ ಶೋನಲ್ಲಿ ಮೆಕ್ಯಾನಿಕ್‌ಗಳನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ಜೀ ವಾಹಿನಿ ಮತ್ತು ಕಾರ್ಯಕ್ರಮದ ಪಾಲ್ಗೊಂಡಿದ್ದ ನಟ–ನಟಿಯರ ವಿರುದ್ಧ ಪಟ್ಟಣದ ಮೈಸೂರು ಸೂಪರ್ ಟೀಮ್ ತ್ರಿವೇಣಿ ದ್ವಿಚಕ್ರ ವಾಹನ ದುರಸ್ತಿಗಾರರ ಸಂಘದಿಂದ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ರಂಗಸ್ವಾಮಿ, ಕಾರ್ಯಕ್ರಮದ ತೀರ್ಪುಗಾರರಾಗಿರುವ ನಟ ರಮೇಶ್ ಅರವಿಂದ್ ಅವರು ಸ್ಪರ್ಧಿಯೊಬ್ಬರಿಗೆ ನೀಡುವ ಟಾಸ್ಕ್‌ನಲ್ಲಿ ನಿಮ್ಮ ತಂಗಿ ಒಬ್ಬ ಮೆಕ್ಯಾನಿಕ್ ಜೊತೆ ಓಡಾಡುವುದನ್ನು ನೋಡಿ, ನಿಮ್ಮ ತಂಗಿ ಮನೆಗೆ ಬಂದಾಗ ಏನು ಹೇಳು ತ್ತೀರಿ ಎಂದು ಪ್ರಶ್ನಿಸಿ, ಅಭಿನಯಿಸಲು ಹೇಳುವ ಸಂದರ್ಭದಲ್ಲಿ ಸ್ಪರ್ಧಿಯೊಬ್ಬ, 'ಕೊಚ್ಚೆಯ ಕೊಳದಲ್ಲಿ ಬೀಳಬಾರದು, ನೀನು ಮೆಕ್ಯಾ ನಿಕ್ ಜೊತೆಗೆ ಹೋಗಿ ಅವನ ಜೊತೆ ಗ್ರೀಸ್ ತಿಂದು ಇರ್ತೀಯಾ' ಎಂದು ಹೇಳುವ ಮೂಲಕ ಮೆಕ್ಯಾನಿಕ್ ಸಮುದಾಯವನ್ನು ಅವಮಾನಿಸಿ ನಮ್ಮ ವೃತ್ತಿಗೆ ಅಗೌರವ ಮಾಡಿದ್ದಾರೆ ಎಂದು ದೂರಿದರು.

ಸಂಘದ ಗೌರವಾಧ್ಯಕ್ಷ ಎನ್. ಲೋಕೇಶ್ ಮಾತನಾಡಿ, ರಿಯಾಲಿಟಿ ಶೋ ಸ್ಪರ್ಧಿ ಮೆಕ್ಯಾನಿಕ್‌ಗಳನ್ನು ಅವಮಾನಿಸಿದ್ದರೂ ತೀರ್ಪುಗಾರರು, ನಿರೂಪಕರು ಸ್ಪರ್ಧಿಗಳ ತಪ್ಪು ತಿದ್ದುವ ಬದಲು ಅವರ ಮಾತುಗಳಿಗೆ ಚಪ್ಪಾಳೆ ಹೊಡೆದು ಪ್ರೋತ್ಸಾಹಿಸಿರುವುದು ವಿಷಾದನೀಯ ಎಂದರು.

ಈ ವೇಳೆ ಕಾರ್ಯದರ್ಶಿ ದಿನೇಶ್ (ಗಣೇಶ್), ಸದಸ್ಯರಾದ ಮಂಜು, ಸೈಪುಲ್ಲಾ, ತೌಸಿಫ್, ಮಂಜುನಾಥ್, ಶ್ರೀಕಂಠ, ಮಹ ದೇವ್, ಕುಮಾರ್, ಜಾಫರ್, ಸೂರಿ, ಗಿರೀಶ್, ವಿನಯ್, ದಿಲೀಪ್, ಜಗದೀಶ್, ಪ್ರದೀಪ್, ಶಂಕರ್ (ಕುಮಾರ್), ರಾಕೇಶ್, ಶಿವು, ಪರಮೇಶ್, ಚಂದ್ರು, ಕಿರಣ್, ಹರೀಶ್ ಹಾಜರಿದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಹುಣಸೂರು, ಮೇ 3– ಹುಣಸೂರು ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ವ್ಯಾಪ್ತಿಯ ಎಂಡಿಸಿಸಿ ಸರ್ಕಲ್ ಬಳಿ ಸುಮಾರು 35 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಪತ್ತೆಯಾಗಿದೆ.

ಈತ ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದ ಎನ್ನಲಾಗಿದ್ದು, ಈತನ ವಿಳಾಸ ತಿಳಿದು ಬಂದಿಲ್ಲ. ಈತನ ವಾರಸು ದಾರರು ಇದ್ದಲ್ಲಿ ಹುಣಸೂರು ಟೌನ್ ಪೊಲೀಸ್ ಠಾಣಾ ನಿರೀಕ್ಷಕರನ್ನು (ಮೊ.9480805034) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಂ.ಗೂಡು ಕಾಂಗ್ರೆಸ್ ಕಚೇರಿಯಲ್ಲಿ ಶ್ರೀನಿವಾಸಪ್ರಸಾದ್‌ಗೆ ಶ್ರದ್ಧಾಂಜಲಿ


ನಂಜನಗೂಡಿನ ಕಾಂಗ್ರೆಸ್ ಕಚೇರಿಯಲ್ಲಿ ವಿ.ಶ್ರೀನಿವಾಸಪ್ರಸಾದ್‌ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂಜನಗೂಡು, ಮೇ 3– ಸಂಸದ ವಿ.ಶ್ರೀನಿವಾಸಪ್ರಸಾದ್ ಮೌಲ್ಯಯುತ, ಯಾವುದೇ ಕಪ್ಪು ಚುಕ್ಕೆ ಇಲ್ಲದ ನಿಷ್ಕಳಂಕ, ಆದರ್ಶ ರಾಜಕಾರಣಿ, ಜೊತೆಗೆ ಶೋಷಿತ ವರ್ಗದ ಗಟ್ಟಿ ಧ್ವನಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ವಿ.ಶ್ರೀನಿವಾಸಪ್ರಸಾದ್ ಅವರು ಎಂದಿಗೂ ತಮ್ಮ ತತ್ವ ಸಿದ್ಧಾಂತದೊಂದಿಗೆ ರಾಜೀ ಮಾಡಿಕೊಂಡವರಲ್ಲ. ರೈತರು, ಮಹಿಳೆಯರು, ಶೋಷಿತರಿಗೆ ಅನ್ಯಾಯವಾದಾಗ ಅವರ ಪರ ಯಾವುದೇ ಅಂಜಿಕೆ ಇಲ್ಲದೆ ಧ್ವನಿ ಎತ್ತುತ್ತಿದ್ದವರು. ಯಾವುದೇ ದೊಡ್ಡ ಸಮಾಜವಿದ್ದರೂ ತಪ್ಪು ಮಾಡಿದಾಗ ಅಡ್ಡ ಪರಿಣಾಮ ಬೀರಬಹುದು ಎಂಬುದನ್ನು ಯೋಜಿಸದೆ ಧ್ವನಿ ಎತ್ತುವ ಮೂಲಕ ತಪ್ಪನ್ನು ತಪ್ಪು ಎಂದು ಹೇಳುತ್ತಿದ್ದ ಎದೆಗಾರಿಕೆಯುಳ್ಳ ರಾಜಕಾರಣಿ. ನಮ್ಮಂತಹ ಯುವ ರಾಜಕಾರಣಿಗಳನ್ನು ಬೆನ್ನು ತಟ್ಟಿ ಬೆಳೆಸುತ್ತಿದ್ದ ಮಹಾನ್ ನಾಯಕ. ಅವರ ಪ್ರೋತ್ಸಾಹದಿಂದಲೇ ನಾನು ಪುರಸಭೆ ಅಧ್ಯಕ್ಷನಾಗಿ ಆಯ್ಕೆಯಾಗಲು ಸಾಧ್ಯವಾಯಿತು. ಹಿಂದುಳಿತ, ಶೋಷಿತ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ದೊರಕಿಸಿಕೊಡುವುದರಲ್ಲಿ ಸದಾ ಮುಂದಿದ್ದ ಆದರ್ಶ ರಾಜಕಾರಣಿಯನ್ನು ಕಳೆದುಕೊಂಡಿರುವುದು ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟ ಎಂದರು.

ಕಾಂಗ್ರೆಸ್ ಎಸ್ಸಿ, ಎಸ್ಟಿ ವಿಭಾಗದ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್ ಅವರು ಯಾವುದೇ ಪಕ್ಷದಲ್ಲಿದ್ದರೂ ಸಹ ಜಾತ್ಯಾತೀತತೆ, ಸಂವಿಧಾನ ಪರವಾಗಿದ್ದರು. ಸಂವಿಧಾನಕ್ಕೆ ಧಕ್ಕೆಯಾದಾಗ ಸ್ವಪಕ್ಷದವರನ್ನೇ ತರಾಟೆಗೆ ತೆಗೆದುಕೊಳ್ಳುತ್ತಿದ್ದ ದಕ್ಷ ರಾಜಕಾರಣಿ, ಬುದ್ಧ, ಬಸವ ಡಾ.ಬಿ.ಆರ್. ಅಂಬೇಡ್ಕರ್ ತತ್ವಗಳನ್ನು ಮೈಗೂಡಿಸಿಕೊಂಡಿದ್ದ ಆದರ್ಶ ರಾಜಕಾರಣಿ ಸಾಮಾಜಿಕ ನ್ಯಾಯದ ಹರಿಕಾರ ಅವರ ಅಗಲಿಕೆ ದಲಿತ ವರ್ಗಕ್ಕೆ ತುಂಬಲಾರದ ನಷ್ಟ ಎಂದರು.

ಇದೇ ವೇಳೆ ಮುಖಂಡರಾದ ಗೋವಿಂದ ರಾಜು, ದೊರೆಸ್ವಾಮಿ ನಾಯಕ, ಕಾಂಗ್ರೆಸ್ ಯುವ ಅಧ್ಯಕ್ಷ ಅಶೋಕ್, ಹಿಂದುಳಿದ ವರ್ಗದ ಅಧ್ಯಕ್ಷ ರಂಗಸ್ವಾಮಿ, ವೀರೇಂದ್ರ, ಸತೀಶ್‌ಗೌಡ ಸೇರಿದಂತೆ ಹಲವರಿದ್ದರು.

ಶಿಕ್ಷಕರ ಸಮಸ್ಯೆಗಳ ವಿರುದ್ಧ ಹೋರಾಡಲು ಅವಕಾಶ ನೀಡಿ

ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಪಿ.ಪುಟ್ಟಸಿದ್ದಶೆಟ್ಟಿ ಮನವಿ


ಸುದ್ದಿಗೋಷ್ಠಿಯಲ್ಲಿ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಪಿ.ಪುಟ್ಟಸಿದ್ದಶೆಟ್ಟಿ ಮಾತನಾಡಿದರು.

ಹುಣಸೂರು, ಮೇ 3– ಗುಣಾತ್ಮಕ ಶಿಕ್ಷಣ ದೊರಕದೆ ಕೆಲವು ಸರ್ಕಾರಿ ಪ್ರಾಥಮಿಕ ಶಾಲೆಗಳು ಮುಚ್ಚಿದರೇ, ಮತ್ತೆ ಕೆಲವು ಶಾಲೆಗಳು ವಿಲೀನಗೊಂಡಿವೆ. ಅನುದಾನಿತ ಶಾಲೆಗಳಿಗೆ 2015ರ ಡಿ.31ರ ಬಳಿಕ ನೇಮಕಾತಿ ನಡೆದಿಲ್ಲ. ಅಲ್ಲದೇ ಶಿಕ್ಷಕರಿಗೆ ಆರೋಗ್ಯ ವಿಮೆ, ವೈದ್ಯಕೀಯ ಸೌಲಭ್ಯಗಳು, ಶಿಶುಪಾಲನಾ ರಜೆಗಳು ಸಿಗುತ್ತಿಲ್ಲ ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಪಿ.ಪುಟ್ಟಸಿದ್ದಶೆಟ್ಟಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಒಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಈ ಬಾರಿ ಸ್ಪರ್ಧಿಸುತ್ತಿದ್ದೇನೆ ಎಂದ ಅವರು ಪ್ರಸ್ತುತ ಶಿಕ್ಷಣ ಇಲಾಖೆ ಆಡಳಿತದ ಹಳಿ ತಪ್ಪಿದೆ. ಶಿಕ್ಷಕರಿಂದ ಆಯ್ಕೆಯಾದ ಪ್ರತಿನಿಧಿಗಳ ವೈಫಲ್ಯ ಎದ್ದು ಕಾಣುತ್ತಿದೆ. ಕಳೆದ 22 ವರ್ಷಗಳಲ್ಲಿ 80 ಸಾವಿರ ಹುದ್ದೆಗಳನ್ನು ಸರ್ಕಾರ ನೇಮಕ ಮಾಡಿಲ್ಲ. ಇದರಿಂದ ಎಸ್‌ಸಿ, ಎಸ್‌ಟಿ ವರ್ಗದವರಿಗೆ ಮೀಸಲಾತಿ ಲಾಭ ದೊರೆತಿಲ್ಲ. ಶಿಕ್ಷಕ ವೃತ್ತಿಗೆ ತರಬೇತಿ ಪಡೆದ ಡಿ.ಎಡ್ ಮತ್ತು ಬಿ.ಎಡ್ ಅಭ್ಯರ್ಥಿಗಳು ಕೂಲಿ ಕೆಲಸ ಮಾಡುತ್ತಿದ್ದಾರೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ 1755 ಪ್ರಾಥಮಿಕ ಶಾಲೆಗಳಿದ್ದು, ಶಿಕ್ಷಕರು ನೇಮಕವಾಗದೇ ಭೋದನಾ ಚಟುವಟಿಕೆಗಳು ನಡೆಯುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ 2240 ಪ್ರೌಢಶಾಲೆಗಳಿವೆ. ಕಳೆದ 9 ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಇದು ಸರ್ಕಾರದ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತದೆ. ಉನ್ನತ ಶಿಕ್ಷಣದಲ್ಲಿ ಮೂಲ ಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಕಟ್ಟಡದ ಚಾವಣಿ, ವಿದ್ಯುತ್ ದುರಸ್ತಿ ಕಾಮಗಾರಿಗಳು, ಪ್ರಯೋಗಾಲಯಗಳು, ಕಟ್ಟಡಕ್ಕೆ ಬಣ್ಣ, ನೆಲ ದುರಸ್ತಿ, ಕಿಟಕಿ–ಬಾಗಿಲು ದುರಸ್ತಿ, ಶೌಚಾಲಯ, ನೀರಿನ ವ್ಯವಸ್ಥೆ ಆಗಬೇಕಿದೆ ಎಂದರು.

ಕರ್ನಾಟಕದಲ್ಲಿ 2018–19ನೇ ಸಾಲಿನಲ್ಲಿ ಒಟ್ಟು ವಿದ್ಯಾರ್ಥಿಗಳ ನೋಂದಣಿ ಪ್ರಮಾಣ ಶೇ.28.80 ಇತ್ತು. 2019–20ನೇ ಸಾಲಿನಲ್ಲಿ ಶೇ.32.80ಕ್ಕೆ ಏರಿಕೆಯಾಗಿದೆ. ಇದರ ಪ್ರಮಾಣ ಮತ್ತಷ್ಟು ಏರಿಕೆ ಆಗುವ ಸಾಧ್ಯತೆಗಳಿವೆ. ಆದ್ದರಿಂದ ಸರ್ಕಾರ ಕಾಲೇಜುಗಳ ಉನ್ನತೀಕರಣಕ್ಕೆ ಅನುದಾನ ಬಿಡುಗಡೆ ಮಾಡಬೇಕು ಎಂದ ಅವರು, ಈ ಎಲ್ಲಾ ಸಮಸ್ಯೆಗಳ ಬಗ್ಗೆ ಸದನದ ಕಲಾಪದಲ್ಲಿ ಹೋರಾಟ ಮಾಡಿ ಸಮಸ್ಯೆ ಬಗೆಹರಿಸಲು ನನಗೆ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಕೋಟೆಯಲ್ಲಿ ಭಾರೀಮಳೆ: ಲಕ್ಷಾಂತರ ರೂ. ನಷ್ಟ




ಹೆಚ್.ಡಿ.ಕೋಟೆ, ಮೇ 3– ತಾಲೂಕಿನಾದ್ಯಂತ ಶುಕ್ರವಾರ ಮಿಂಚು, ಗುಡುಗು, ಬಿರುಗಾಳಿ ಸಹಿತ ಭಾರೀ ಮಳೆಯಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಪಟ್ಟಣದ ಮುಸ್ಲಿಂ ಬ್ಲಾಕ್, ಟೈಗರ್ ಬ್ಲಾಕ್ ಹಾಗೂ ಹೊಸ್ಕೆರೆ ಸುಂಡ ಗ್ರಾಮಗಳಲ್ಲಿ ತೆಂಗಿನ ಮರಗಳಿಗೆ ಸಿಡಿಲು ಹೊಡೆದ ಪರಿಣಾಮ ಹೊತ್ತಿ ಉರಿದಿದೆ. ಅಲ್ಲದೇ ಮೇಟಿಕುಪ್ಪೆ, ಸಿದ್ದಾಪುರ ಗ್ರಾಮಗಳಲ್ಲಿ ಹಸುವಿನ ಶೆಡ್(ಕೊಟ್ಟಿಗೆ) ಮೇಲ್ಛಾವಣಿಗೆ ಭಾರೀ ಗಾಳಿಗೆ ಹಾರಿ ಹೋಗಿದೆ. ಪಟ್ಟಣದ ಬಸ್ ನಿಲ್ದಾಣದ ಬಳಿ ಇರುವ ಪೆಟ್ಟಿಗೆ ಅಂಗಡಿಗಳ ಮೇಲ್ಛಾವಣಿಗಳು ಹಾರಿಹೋಗಿದೆ. ಅಲ್ಲದೇ ತಾಲೂಕಿನ ವಿವಿಧೆಡೆ ಭಾರೀ ಗಾತ್ರದ ಮರಗಳು, ವಿದ್ಯುತ್ ಕಂಬಗಳು ನೆಲಕುರುಳಿವೆ. ಇದರಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.



ಪಿ.ಹೆಚ್‌ಡಿ ಪದವಿ ಪಡೆದ ಹಿನ್ನೆಲೆಯಲ್ಲಿ ಹೆಮ್ಮಿಗೆ ಪಿಎಸಿಎಸ್ ಸಿಇಓ ಹೆಚ್.ಎಸ್.ರಂಜನ್ ಕುಮಾರ್ ಅವರನ್ನು ಸಂಘದಿಂದ ಸನ್ಮಾನಿಸಲಾಯಿತು.

ಟಿ.ಜಾನಕೀರಾಂ ನಿಧನ



ಸರಗೂರು, ಮೇ 3– ಪಟ್ಟಣದ 10ನೇ ವಾರ್ಡ್ ನಿವಾಸಿ ಟಿ.ಜಾನಕೀರಾಂ (63) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ನಡೆಯಲಿದೆ.

ರಾಜಮ್ಮ



ಸರಗೂರು, ಮೇ 3– ಮೂಲತಃ ತಾಲೂಕಿನ ಸಾಗರೆ ಗ್ರಾಮದ ನಿವಾಸಿ ರಾಜಮ್ಮ (80) ಅವರು ಶುಕ್ರವಾರ ಮೈಸೂರಿನ ದಟ್ಟಗಳ್ಳಿ ನಿವಾಸದಲ್ಲಿ ನಿಧನರಾದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಶನಿವಾರ ಮೈಸೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಚಿರತೆ ದಿನಾಚರಣೆ

ತಿ.ನರಸೀಪುರ ಆಜುಬಾಜು ಮಾನವ–ಚಿರತೆ ಸಂಘರ್ಷ ಜಾಗೃತಿ



ತಿ.ನರಸೀಪುರ, ಮೇ 3(ಎಂಟಿವೈ)– ಅಂತರರಾಷ್ಟ್ರೀಯ ಚಿರತೆ ದಿನದ ಅಂಗವಾಗಿ ಮಾನವ ಹಾಗೂ ಚಿರತೆ ಸಂಘರ್ಷ ಹೆಚ್ಚಾಗಿರುವ ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚಿರತೆ ಕಾರ್ಯಪಡೆ ಸಿಬ್ಬಂದಿ ಭಿತ್ತಿಪತ್ರ ಹಂಚಿ ಜಾಗೃತಿ ಮೂಡಿಸಿತು.


ಕಳೆದ ವರ್ಷ ಚಿರತೆ–ಮಾನವ ಸಂಘರ್ಷದಿಂದ ತಿ.ನರಸೀಪುರ ತಾಲೂಕಿನ ವಿವಿಧ ಗ್ರಾಮದಲ್ಲಿ ಮೂವರು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಮೈಸೂರು ವಿಭಾಗದ ಅರಣ್ಯ ಇಲಾಖೆ ಅಧಿಕಾರಿಗಳ ತಂಡ ಹಾಗೂ ಚಿರತೆ ಕಾರ್ಯಪಡೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಂತರ ರಾಷ್ಟ್ರೀಯ ಚಿರತೆ ದಿನದ ಕಾರ್ಯಕ್ರಮ ಆಯೋಜಿಸಿ ಗ್ರಾಮಸ್ಥರಲ್ಲಿ ಚಿರತೆ ಕುರಿತಂತೆ ಇರುವ ಆತಂಕ ನಿವಾರಿಸುವ ಪ್ರಯತ್ನ ಮಾಡಿದರು.

ಉಕ್ಕಲಕೆರೆ ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಆಯೋಜಿಸಿದ್ದ 'ಅಂತರ ರಾಷ್ಟ್ರೀಯ ಚಿರತೆ ದಿನಾಚರಣೆ' ಕಾರ್ಯಕ್ರಮದಲ್ಲಿ ಡಿಸಿಎಫ್ ಡಾ.ಕೆ.ಎನ್. ಬಸವರಾಜ್ ಮಾತನಾಡಿ, ಚಿರತೆ ನಾಚಿಕೆ ಸ್ವಭಾವದ ಪ್ರಾಣಿಯಾಗಿದ್ದು, ಜನರನ್ನು ಕಂಡರೆ ಓಡಿ ಹೋಗುತ್ತವೆ. ಕೆಲ ಪ್ರಕರಣಗಳನ್ನು ಹೊರತು ಪಡಿಸಿದರೆ ಬೇರೆ ಯಾವುದೇ ಸಂದರ್ಭದಲ್ಲಿಯೂ ಮಾನವರ ಮೇಲೆ ಚಿರತೆ ದಾಳಿ ಮಾಡಿರುವ ಉದಾಹರಣೆಯಿಲ್ಲ. ಕಬ್ಬು ಕಟಾವು ಸಂದರ್ಭದಲ್ಲಿ ಕಬ್ಬಿನ ಗದ್ದೆಗಳಲ್ಲಿ ಚಿರತೆ ಮರಿಗಳಿರುತ್ತವೆ. ಈ ಸಂದರ್ಭದಲ್ಲಿ ಮರಿಗಳ ರಕ್ಷಣೆಗಾಗಿ ಹೆದರಿಸುವ ಪ್ರಯತ್ನ ಮಾಡಬಹುದು. ಆದರೂ, ಜಿಲ್ಲೆಯಲ್ಲಿ ಚಿರತೆ ಹಾವಳಿಗೆ ಸಂಬಂಧಿಸಿದಂತೆ ಜನರಿಂದ ಬರುವ ದೂರುಗಳಿಗೆ ಸಕಾಲಕ್ಕೆ ಸ್ಪಂದಿಸುವ ನಿಟ್ಟಿನಲ್ಲಿ ಚಿರತೆ ಕಾರ್ಯಪಡೆ ರಚಿಸಲಾಗಿದೆ. ಕಡಿಮೆ ಅವಧಿಯಲ್ಲಿಯೇ ಚಿರತೆ ಕಾರ್ಯಪಡೆ ಉತ್ತಮವಾಗಿ ಕಾರ್ಯಾಚರಣೆ ಮಾಡಿ, ಚಿರತೆ ಹಾವಳಿಯ ದೂರುಗಳಿಗೆ ಸ್ಪಂದಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶ ಜನರು ಆತಂಕಕ್ಕೆ ಒಳಗಾಗಬಾರದು. ಚಿರತೆ ಹಾವಳಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿದ್ದರೂ ಅರಣ್ಯ ಇಲಾಖೆಗೆ ನೀಡಬೇಕು. ಅದಕ್ಕೆ ಸ್ಪಂದಿಸಿ, ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಎಸಿಎಫ್ ಎನ್.ಲಕ್ಷ್ಮೀಕಾಂತ, ಸಂಪನ್ಮೂಲ ವ್ಯಕ್ತಿಗಳಾದ ನಂಜರಾಜ ಅರಸ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಬಳಿಕ ಉಕ್ಕಲಗೆರೆ, ಕಲ್ಲೀಪುರ, ಖೇತುಪುರ, ಅತ್ತಳ್ಳಿ, ಬೆಟ್ಟಹಳ್ಳಿ, ಸೇನಾಪತಿ ಹಳ್ಳಿ, ಎಂ.ಎಲ್ ಹುಂಡಿ ಗ್ರಾಮಗಳಿಗೆ ತೆರಳಿ ಚಿರತೆ–ಮಾನವ ಸಂಘರ್ಷ ನಿಯಂತ್ರಣದ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಿ ಕರಪತ್ರ ಹಂಚಿ ಅರಿವು ಮೂಡಿಸಿದರು. ಶಾಲಾ ಮಕ್ಕಳಿಗೆ ರಸಪ್ರಶ್ನೆ ಹಾಗೂ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಒಂದು ದಿನವೂ ರಜೆ ಇಲ್ಲದೆ ದುಡಿಯುವ ಮೋದಿ ಬೇಕೆ...! ವರ್ಷದಲ್ಲಿ ಮೂರು ತಿಂಗಳಿಗೊಮ್ಮೆ ವಿದೇಶದಲ್ಲಿ ಮೋಜು ಮಾಡುವ ರಾಹುಲ್ ಗಾಂಧಿ ಬೇಕೆ...!!

- ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದ ಜನರ ಮುಂದೆ ಗಂಭೀರ ಪ್ರಶ್ನೆ
- ಅಧಿಕಾರಕ್ಕೆ ಬಂದ ಕೇವಲ 10 ತಿಂಗಳಲ್ಲಿ ರಾಜ್ಯವನ್ನು ಕಾಂಗ್ರೆಸ್ ಹಾಳು ಮಾಡಿದೆ
- ಕೇಂದ್ರದ ರೈತ ಸಮ್ಮಾನ್ ಯೋಜನೆಗೆ ರಾಜ್ಯದ ಪಾಲು 4 ಸಾವಿರ ಸ್ಥಗಿತಗೊಳಿಸಿದ್ದಾರೆ
- ರಾಜ್ಯದಲ್ಲಿರುವುದು ಜನವಿರೋಧಿ ಮಾತ್ರವಲ್ಲ ರೈತ ವಿರೋಧಿ ಸರ್ಕಾರ



ಬೆಂಗಳೂರು, ಮೇ 3 (ಕೆಎಂಶಿ)– ಕರ್ನಾಟಕದಲ್ಲಿ ಆಡಳಿತಕ್ಕೆ ಬಂದ 10 ತಿಂಗಳಲ್ಲಿ ಇಡೀ ರಾಜ್ಯವನ್ನು ಕಾಂಗ್ರೆಸ್ ಹಾಳು ಮಾಡಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಟೀಕಿಸಿದ್ದಾರೆ.

ರಾಜ್ಯದಲ್ಲಿ ಎರಡನೇ ಹಂತದ ಲೋಕಸಭಾ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಎಸ್‌ಡಿಪಿಐ ಬೆಂಬಲದೊಂದಿಗೆ ಕಾಂಗ್ರೆಸ್ ಆಡಳಿತಕ್ಕೆ ಬರುತ್ತಿದ್ದಂತೆ ಬೆಂಗಳೂರು ರಾಮೇಶ್ವರಂ ಕೆಫೆ ಸ್ಫೋಟ ಸಂಭವಿಸಿತು. ಈ ಸ್ಫೋಟವನ್ನು ಗ್ಯಾಸ್ ಸಿಲಿಂಡರ್ ಸ್ಫೋಟ ಎಂದು ಕಾಂಗ್ರೆಸ್ ಹೇಳಿತು. ನಂತರ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆಯನ್ನು ಕೈಗೊತ್ತಿಕೊಳ್ಳುತ್ತಿದ್ದಂತೆ ಇದು ಭಯೋತ್ಪಾದಕರು ನಡೆಸಿದ ದುಷ್ಕೃತ್ಯ ಎಂಬುದನ್ನು ಬೆಳಕಿಗೆ ತಂದಿತು.

ಹುಬ್ಬಳ್ಳಿಯಲ್ಲಿ ಧರ್ಮಾಂತರಕ್ಕೆ ಒಪ್ಪದ ಒಬ್ಬ ಹೆಣ್ಣು ಮಗಳನ್ನು ಕೊಲೆ ಮಾಡಲಾಯಿತು. ಕಾಂಗ್ರೆಸ್ ಈ ಘಟನೆಯನ್ನು ಖಾಸಗಿ ವಿಷಯ ಎಂಬಂತೆ ಬಿಂಬಿಸಿತು. ಈ ಕೊಲೆ ಘಟನೆಯನ್ನು ಸಿಬಿಐ ತನಿಖೆಗೆ ಕೊಟ್ಟರೆ, ಕೊಲೆ ಅಪರಾಧಿಗಳನ್ನು ಉಲ್ಟಾ ನೇತುಹಾಕಿ, ಶಿಕ್ಷೆಗೆ ಗುರಿಪಡಿಸುವ ಮೂಲಕ ನೇಹಾ ಹಿರೇಮಠ್ ಅವರಿಗೆ ನ್ಯಾಯ ಕೊಡಿಸುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಲಿದೆ ಎಂದರು.

ಕಾಂಗ್ರೆಸ್ ಬೆದರಿಕೆ: ರಾಜ್ಯದಲ್ಲಿ ನೀರು ಮತ್ತು ವಿದ್ಯುತ್ ಸಮಸ್ಯೆ ತೀವ್ರವಾಗಿದೆ. ಕಾಂಗ್ರೆಸ್‌ಗೆ ಮತ ಹಾಕದಿದ್ದರೆ, ವಿದ್ಯುತ್ ನಿಲ್ಲಿಸುವುದಾಗಿ ಜನರಿಗೆ ಬೆದರಿಕೆ ಹಾಕಲಾಗುತ್ತಿದೆ.

ರಾಜ್ಯದಲ್ಲಿ ಬಿಜೆಪಿ ಆಡಳಿತವಿದ್ದಾಗ, ಕೇಂದ್ರ ಸರ್ಕಾರ ರೈತ ಸಮ್ಮಾನ್ ನಿಧಿ ಯೋಜನೆಯಡಿ ನೀಡುತ್ತಿದ್ದ 6 ಸಾವಿರ ರೂ. ಜೊತೆಗೆ ಹೆಚ್ಚುವರಿಯಾಗಿ ರಾಜ್ಯದಲ್ಲಿ ಬಿಜೆಪಿ ಆಡಳಿತವಿದ್ದಾಗ 4 ಸಾವಿರ ರೂ. ಸೇರಿ ಒಟ್ಟು 10 ಸಾವಿರ ರೂ.ಗಳನ್ನು ರೈತರಿಗೆ ನೀಡುತ್ತಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಆ 4 ಸಾವಿರ ರೂ.ಗಳನ್ನು ಕಡಿತ ಮಾಡುವ ಮೂಲಕ ರೈತ ವಿರೋಧಿ ಕೆಲಸ ಮಾಡಿತು.

ರಾಜ್ಯದಲ್ಲಿ ಅಭಿವೃದ್ಧಿ ಪರ್ವ: ಕೇಂದ್ರದ ಎನ್‌ಡಿಎ ಸರ್ಕಾರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ನೀಡಿದೆ. 13 ಸಾವಿರ ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ. 930 ಕೋಟಿ ರೂ. ವೆಚ್ಚಲ್ಲಿ ಹೊಸ ರೈಲ್ವೆ ಮಾರ್ಗಗಳ ನಿರ್ಮಾಣಕ್ಕೆ ಮುಂದಾಗಿದೆ.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ 11 ಸಾವಿರ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. ಬಡ ಕುಟುಂಬದ ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆಜಿ ಉಚಿತ ಆಹಾರಧಾನ್ಯ ನೀಡಲಾಗುತ್ತಿದೆ. ಮೂರು ಲಕ್ಷ ಮನೆಗಳಿಗೆ ನಲ್ಲಿ ನೀರು ಸಂಪರ್ಕ ಒದಗಿಸಲಾಗಿದೆ. ಉಜ್ವಲ ಯೋಜನೆಯಡಿ ಮೂರು ಲಕ್ಷ ಕುಟುಂಬಕ್ಕೆ ಉಚಿತ ಗ್ಯಾಸ್ ಸಂಪರ್ಕ ಒದಗಿಸಲಾಗಿದೆ. ಉಚಿತ ಶೌಚಾಲಯಗಳನ್ನು ನಿರ್ಮಿಸಿ ಕೊಡಲಾಗಿದೆ.

ಉತ್ತರ ಕರ್ನಾಟಕದಲ್ಲಿ ಎರಡು ಲಕ್ಷ ರೈತರು ಕಿಸಾನ್ ಸಮ್ಮಾನ್ ನಿಧಿ ಫಲಾನುಭವಿಗಳಿದ್ದಾರೆ, ಕಬ್ಬು ಬೆಳೆಗಾರರಿಗೆ ಅನುಕೂಲ ಮಾಡಿಕೊಡಲು ಪ್ರತಿ ಟನ್ ಕಬ್ಬಿಗೆ 340 ರೂ. ಸಬ್ಸಿಡಿ ಹೆಚ್ಚಳ ಮಾಡಲಾಯಿತು ಎಂದರು.

ಒಂದೇ ಒಂದು ಭ್ರಷ್ಟಾಚಾರ ಇಲ್ಲ: ನರೇಂದ್ರ ಮೋದಿ ಅವರು ಎರಡನೇ ಬಾರಿಗೆ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುವಲ್ಲಿ ಕರ್ನಾಟಕದ ಜನರ ಕೊಡುಗೆ ಇದೆ. ಮತ್ತೊಮ್ಮೆ ಮೂರನೇ ಬಾರಿಗೆ ಮೋದಿ ಅವರನ್ನು ಪ್ರಧಾನಿ ಮಾಡಿದರೆ, ದೇಶದ ಆರ್ಥಿಕ ಸ್ಥಿತಿಯನ್ನು ಜಾಗತಿಕವಾಗಿ ಮೂರನೇ ಸ್ಥಾನಕ್ಕೆ ತರುವ ಪ್ರಯತ್ನ ಮಾಡಲಾಗುವುದು.

ಕಾಂಗ್ರೆಸ್ ನೇತೃತ್ವದ ಯುಪಿಎ ಆಡಳಿತದ ಸಂದರ್ಭದಲ್ಲಿ 12 ಲಕ್ಷ ಕೋಟಿ ರೂ.ಗಳ ಭ್ರಷ್ಟಾಚಾರ ನಡೆಯಿತು. ಮೋದಿ ಅವರು 13 ವರ್ಷ ಗುಜರಾತ್ ಮುಖ್ಯಮಂತ್ರಿಯಾಗಿ ಹಾಗೂ ಕಳೆದ 10 ವರ್ಷದಿಂದ ದೇಶದ ಪ್ರಧಾನಿಯಾಗಿ ಒಟ್ಟು 23 ವರ್ಷಗಳ ಆಡಳಿತದಲ್ಲಿ ಒಂದೇ ಒಂದು ಭ್ರಷ್ಟಾಚಾರ ಹಗರಣ ಇಲ್ಲ ಎಂದರು.

ರಾಹುಲ್ ಮೋಜು : ಮೋದಿ ತಮ್ಮ ಆಡಳಿತಾವಧಿಯಲ್ಲಿ ಒಂದು ದಿನವೂ ರಜೆ ತೆಗೆದುಕೊಳ್ಳದೆ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೂರು ತಿಂಗಳಿಗೊಮ್ಮೆ ಮೋಜು ಮಾಡಲು ವಿದೇಶ ಪ್ರವಾಸ ಮಾಡುತ್ತಾರೆ ಎಂದು ಟೀಕಿಸಿದರು.

ಪರಿವಾರ ವಾದದ ಕಾಂಗ್ರೆಸ್ ಬೇಕೇ, ಅಭಿವೃದ್ಧಿ ಶೀಲ ಬಿಜೆಪಿ ಬೇಕೇ ಎಂಬುದನ್ನು ಮತದಾರರು ನಿರ್ಧರಿಸಬೇಕು ಎಂದು ಕರೆ ನೀಡಿದರು.

ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣ

ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿದ ಸಂತ್ರಸ್ತೆ

- ಎಸ್‌ಐಟಿ ಮೇಲೆ ಆರೋಪಕ್ಕೆ ಅವಕಾಶವಾಗದಂತೆ ಈ ಕ್ರಮ
- ಗೃಹ ಸಚಿವ ಡಾ. ಪರಮೇಶ್ವರ್ ಹೇಳಿಕೆ
- ರೇವಣ್ಣ ನೋಟಿಸ್‌ಗೆ ಸೂಕ್ತ ಸ್ಪಂದನೆ ನೀಡದಿದ್ದರೆ ಕಾನೂನು ಕ್ರಮದ ಎಚ್ಚರಿಕೆ

ಬೆಂಗಳೂರು, ಮೇ 3 (ಕೆಎಂಶಿ)– ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯೊಬ್ಬರು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂತ್ರಸ್ತ ಮಹಿಳೆಯೊಬ್ಬರು ನಿನ್ನೆ ದೂರು ನೀಡಿದ್ದು, ಎಸ್‌ಐಟಿಯವರು ಒತ್ತಾಯಪೂರ್ವಕವಾಗಿ ಸಂತ್ರಸ್ತೆಯಿಂದ ಹೇಳಿಕೆ ಪಡೆದಿದ್ದಾರೆ ಎಂಬ ಆರೋಪಕ್ಕೆ ಅವಕಾಶ ಆಗದಂತೆ, ಮ್ಯಾಜಿಸ್ಟ್ರೇಟ್ ಮುಂದೆಯೇ ನಿಯಮ 164ರಡಿ ಹೇಳಿಕೆ ಕೊಡಿಸಲಾಗಿದೆ ಎಂದರು.

ತನಿಖಾ ಸಂಸ್ಥೆಯಿಂದ ನೋಟಿಸ್ ಕೊಡಲಾಗಿದೆ. ಪ್ರಜ್ವಲ್ ರೇವಣ್ಣ ಪರ ವಕೀಲರು ಕಾಲಾವಕಾಶ ಕೇಳಿದ್ದಾರೆ. ಇದಕ್ಕೆ ಅವಕಾಶವಿಲ್ಲ ಎಂಬುದನ್ನು ತಿಳಿಸಿದ್ದೇವೆ.

ಮಾಜಿ ಸಚಿವ ರೇವಣ್ಣ ಅವರಿಗೂ 41ಎ ಅಡಿ ನೋಟಿಸ್ ನೀಡಲಾಗಿದೆ. ರೇವಣ್ಣ ಸಹ 24 ಗಂಟೆ ಕಾಲಾವಕಾಶ ಕೇಳಿದ್ದಾರೆ. ಕಾನೂನು ಪ್ರಕಾರ ಮತ್ತೊಂದು ನೋಟಿಸ್ ನೀಡಿದ್ದೇವೆ. ಇದಕ್ಕೆ ಸ್ಪಂದಿಸದಿದ್ದರೆ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಪ್ರಜ್ವಲ್ ರೇವಣ್ಣ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿದೆ. ಎಲ್ಲ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಫೋಟೋ ಸಮೇತ ನೋಟಿಸ್ ಕಳುಹಿಸಲಾಗಿದೆ, ನಿಯಮಾನುಸಾರವೇ ಲುಕ್‌ಔಟ್ ನೋಟಿಸ್ ನೀಡಿದ್ದೇವೆ ಎಂದರು.

ರೇವಣ್ಣ ಅವರ ಮನೆ ಮೇಲೆ ಎಸ್‌ಐಟಿ ದಾಳಿ ನಡೆದಿರುವುದು ಗೊತ್ತಿಲ್ಲ. ಪ್ರಜ್ವಲ್ ರೇವಣ್ಣ ದುಬೈಗೆ ಹೋಗಿರುವುದೂ ಗೊತ್ತಿಲ್ಲ. ಜರ್ಮನಿಗೆ ಹೋಗಿದ್ದಾರೆ ಎಂಬ ಮಾಹಿತಿ ಇದೆ. ಜರ್ಮನಿಯಿಂದ ಕರೆತರಲು ಕೇಂದ್ರದ ನೆರವುಬೇಕು. 2ನೇ ನೋಟಿಸ್‌ಗೂ ಸ್ಪಂದಿಸದಿದ್ದರೆ ಮುಂದಿನ ತೀರ್ಮಾನ ಏನು ಎಂಬುದನ್ನು ಎಸ್‌ಐಟಿ ಅಧಿಕಾರಿಗಳು ಕೈಗೊಳ್ಳುತ್ತಾರೆ.

ರಾಜಕೀಯ ಟೀಕೆಗಳಿಗೆ ಉತ್ತರ ಕೊಡುವುದಿಲ್ಲ. ನನಗೂ ಒಂದಷ್ಟು ಜವಾಬ್ದಾರಿಗಳಿವೆ. ಆದ್ದರಿಂದ ರಾಜಕೀಯ ಪ್ರತಿಕ್ರಿಯೆ ನೀಡುವುದಿಲ್ಲ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಯಾವ ಅಧಾರದ ಮೇಲೆ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಇದಕ್ಕೆ ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರು ಉತ್ತರಿಸುತ್ತಾರೆ ಎಂದರು.

ಕೇಂದ್ರದಿಂದ ಪ್ರಜ್ವಲ್ ರಕ್ಷಣೆ: ಸಿಎಂ ಸಿದ್ದರಾಮಯ್ಯ ಆರೋಪ

ದೇವೇಗೌಡರು, ಕುಮಾರಸ್ವಾಮಿ ವಕೀಲರೊಂದಿಗೆ ಚರ್ಚೆ

ಬೆಂಗಳೂರು, ಮೇ 3 (ಕೆಎಂಶಿ)– ಕೇಂದ್ರ ಸರ್ಕಾರ ಪ್ರಜ್ವಲ್ ರೇವಣ್ಣ ಅವರನ್ನು ರಕ್ಷಣೆ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಎರಡನೇ ಹಂತದ ಲೋಕಸಭಾ ಚುನಾವಣಾ ಪ್ರವಾಸ ಸಂದರ್ಭದಲ್ಲಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ಪ್ರಯಾಣ ಮಾಡುವಾಗ ಪಾಸ್‌ಪೋರ್ಟ್, ವೀಸಾ ಚೆಕ್ ಆಗುತ್ತದೆ. ಕೇಂದ್ರ ಸರ್ಕಾರಕ್ಕೆ ತಿಳಿಯದಂತೆ ಯಾರೂ ದೇಶದ ಹೊರಗೆ ಹೋಗಲು ಸಾಧ್ಯವಿಲ್ಲ.



ಪ್ರಜ್ವಲ್ ರೇವಣ್ಣ ಯಾವ ದೇಶದಲ್ಲಿದ್ದರೂ ಕರೆತರುತ್ತೇವೆ. ಅವರು ದೇಶಕ್ಕೆ ಬರಲೇಬೇಕು. ಅವರ ರಾಜತಾಂತ್ರಿಕ ಪಾಸ್‌ಪೋರ್ಟ್ ರದ್ದು ಮಾಡಲು ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ.

ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಬಲಾತ್ಕಾರ ಮತ್ತು ಲೈಂಗಿಕ ಶೋಷಣೆ ಮಾಡಿರುವ ಆರೋಪವಿದೆ. ಅವರ ಬಗ್ಗೆ ತಿಳಿದೂ ಬಿಜೆಪಿ, ಜೆಡಿಎಸ್‌ನೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡಿದೆ.

ಪ್ರಜ್ವಲ್ ರೇವಣ್ಣ ಅವರ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಗೆ ರಕ್ಷಣೆ ನೀಡಲು ಸೂಚಿಸಲಾಗಿದೆ. ಈ ಮಧ್ಯೆ ಕುಮಾರಸ್ವಾಮಿ ಹಾಗೂ ದೇವೇಗೌಡರು, ತಮ್ಮ ಮನೆಗೆ ವಕೀಲರನ್ನು ಕರೆಸಿ ಚರ್ಚೆ ಮಾಡಿದ್ದಾರೆ.

ಚುನಾವಣಾ ಪ್ರಚಾರ ಸಂದರ್ಭದಲ್ಲಿ ಕುಮಾರ ಸ್ವಾಮಿ, ನಾನು ಬೇರೆಯಲ್ಲ, ಪ್ರಜ್ವಲ್ ರೇವಣ್ಣ ಬೇರೆಯಲ್ಲ ಎಂದಿದ್ದರು.

ಹುಬ್ಬಳ್ಳಿಯಲ್ಲಿ ನೇಹಾ ಕೊಲೆ 'ಲವ್ ಜಿಹಾದ್' ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜಕೀಯ ಹೇಳಿಕೆ ನೀಡಿದ್ದಾರೆ. ಆರೋಪಿಯನ್ನು ತಕ್ಷಣ ಬಂಧಿಸಲಾಗಿದೆ, ಪ್ರಕರಣ ಸಿಐಡಿಗೆ ವಹಿಸಿ, ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಕಾನೂನಿನ ಪ್ರಕಾರ ಕಠಿಣ ಶಿಕ್ಷೆಗೆ ಗುರಿಪಡಿಸಲು ಪ್ರಯತ್ನಿಸಲಾಗಿದೆ.

ಬಿಜೆಪಿಗೆ ಸಂವಿಧಾನ, ಪ್ರಜಾಪ್ರಭುತ್ವ, ಮೀಸಲಾತಿ, ಐಕ್ಯತೆ, ಸಮಾನತೆಯಲ್ಲಿ ನಂಬಿಕೆ ಇಲ್ಲ. ಅಮಾಯಕರಿಗೆ ಕಿರುಕುಳ ಕೊಟ್ಟು ಸಮಾಜ ಒಡೆಯುವುದು ಅವರಿಗೆ ರೂಢಿಯಾಗಿದೆ ಎಂದರು.

ಮೇ 20ರ ನಂತರ ಸಿಬಿಎಸ್‌ಇ 10, 12ನೇ ತರಗತಿ ಫಲಿತಾಂಶ

ನವದೆಹಲಿ: ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ(CBSE) 10 ಮತ್ತು 12ನೇ ತರಗತಿಯ ಫಲಿತಾಂಶಗಳನ್ನು ಮೇ 20ರ ನಂತರ ಪ್ರಕಟಿಸುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಪರೀಕ್ಷೆಯ ಫಲಿತಾಂಶ ಪ್ರಕಟ ಕುರಿತ ಊಹಾಪೋಹಗಳ ನಡುವೆಯೇ ಈ ಸ್ಪಷ್ಟನೆ ಬಂದಿದೆ. ಮೇ 3ರಂದೇ ಫಲಿತಾಂಶ ಪ್ರಕಟವಾಗಲಿದೆ ಎಂಬ ವದಂತಿ ಹಬ್ಬಿತ್ತು. ಆದರೆ, ಈ ವದಂತಿ ಸುಳ್ಳು ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದು, ಸಿಬಿಎಸ್‌ಇ 10 ಮತ್ತು 12 ನೇ ತರಗತಿ ಫಲಿತಾಂಶಗಳನ್ನು ಮೇ 20 ರ ನಂತರ ಪ್ರಕಟಿಸುವ ಸಾಧ್ಯತೆಯಿದೆ ಎಂದು ಮಂಡಳಿಯು ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ಫೆಬ್ರವರಿ–ಏಪ್ರಿಲ್ ತಿಂಗಳ ನಡುವೆ 10 ಮತ್ತು 12ನೇ ತರಗತಿಯ ಪರೀಕ್ಷೆಯನ್ನು ನಡೆಸಲಾಗಿತ್ತು.